ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜನವರಿ 25 ಶನಿವಾರ 2025

₹4

ಸಂಪುಟ: 45 | ಸಂಚಿಕೆ: 278 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*

ಮೈಸೂರು ಮಿತ್ರ ಶನಿವಾರ 25 ಜನವರಿ 2025

ಬೆಂಗಳೂರು ಟರ್ಫ್ ಕ್ಲಬ್‌ಗೆ ನೇಮಕಾತಿಯಲ್ಲಿ ಕಿಕ್ ಬ್ಯಾಕ್ ಆರೋಪ

ಸಿಎಂ ಸಿದ್ದರಾಮಯ್ಯಗೆ ಕ್ಲೀನ್ ಚಿಟ್

ಬೆಂಗಳೂರು, ಜ.24–ಬೆಂಗಳೂರು ಟರ್ಫ್ ಕ್ಲಬ್‌ಗೆ ನೇಮಕಾತಿ ವಿಚಾರದಲ್ಲಿ ಕಿಕ್ ಬ್ಯಾಕ್ ಪಡೆದ ಆರೋಪದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಗೆಲುವು ಸಿಕ್ಕಿದೆ. ಜನಪ್ರತಿ ನಿಧಿಗಳ ವಿಶೇಷ ನ್ಯಾಯಾಲಯವು ಲೋಕಾಯುಕ್ತ ಪೊಲೀಸರು ಸಲ್ಲಿಸಿದ ಬಿ ರಿಪೋರ್ಟ್ ಅನ್ನು ಅಂಗೀಕರಿಸಿದೆ.


ಸಿದ್ದರಾಮಯ್ಯ

ಬೆಂಗಳೂರು ಟರ್ಫ್ ಕ್ಲಬ್ ವ್ಯವಸ್ಥಾಪಕ ಸಮಿತಿಯ ಸ್ಟೀವರ್ಡ್ ಹುದ್ದೆಗೆ ಆಪ್ತರ ನಾಮನಿರ್ದೇಶನ ಮಾಡಲು 1.30 ಕೋಟಿ ರೂಪಾಯಿ ಪಡೆದ ಆರೋಪ ಪ್ರಕರಣದಲ್ಲಿ ಸಿದ್ದರಾಮಯ್ಯ ಅವರ ವಿರುದ್ಧ ಯಾವುದೇ ಪ್ರತಿಫಲಾಪೇಕ್ಷೆ ಪಡೆದ ಸಾಕ್ಷಿಗಳು ಕಂಡುಬರುತ್ತಿಲ್ಲ ಎಂದು ನ್ಯಾಯಾಲಯ ಹೇಳಿದೆ.

'ಬಿ' (ಪ್ರಕರಣ ಮುಕ್ತಾಯ) ವರದಿ ಯನ್ನು ಸಲ್ಲಿಸಲು ಲೋಕಾಯುಕ್ತ ಪೊಲೀಸರು ನೀಡಿದ ಇನ್ನೊಂದು ಕಾರಣ ಮೊದಲ ಪ್ರಕರಣದಲ್ಲಿ ನಂಬರ್ 1 ಆರೋಪಿ ಸಿದ್ದರಾಮಯ್ಯ ಮತ್ತು ಮೈಸೂರಿನ ಎಲ್.ವಿವೇಕಾನಂದ ಅಲಿಯಾಸ್ ಕಿಂಗ್ಸ್ ಕೋರ್ಟ್ ವಿವೇಕ್ ವಿರುದ್ಧ ಕೇಸು ಮುಂದುವರಿಯಲು ಸಾಕ್ಷಿಗಳ ಕೊರತೆಯಿದೆ. ದೂರುದಾರ ಎನ್.ಆರ್. ರಮೇಶ್ ಅವರು ತನಿಖಾ ಅಧಿಕಾರಿಗಳ ಮುಂದೆ ಹಾಜರಾಗಲಿಲ್ಲ ಎಂದು ಹೇಳಲಾಗಿದೆ.

ಸಿದ್ದರಾಮಯ್ಯನವರು ವಿವೇಕಾನಂದರಿಂದ 1.30 ಕೋಟಿ ರೂ.ಪಡೆದಿದ್ದಾರೆ ಎಂದು ದಾಖಲೆಗಳು ಹೇಳುತ್ತವೆಯಾದರೂ, ಬಿಟಿಸಿಯ ಸ್ಟೀವರ್ಡ್ ಆಗಿ ನಾಮನಿರ್ದೇಶನಗೊಂಡಿದ್ದಕ್ಕೆ ಪ್ರತಿಯಾಗಿ ನೀಡಿದ ಹಣ ಎಂದು ತೋರಿಸುತ್ತಿಲ್ಲ ಎಂದು ಸೆ.12, 2024ರಂದು ಸಲ್ಲಿಸಲಾದ 'ಬಿ' ವರದಿಯನ್ನು ನ್ಯಾಯಮೂರ್ತಿ ಸಂತೋಷ್ ಗಜಾನನ್ ಭಟ್ ಅಂಗೀಕರಿಸಿ, ತಮ್ಮ ಆದೇಶದಲ್ಲಿ ತಿಳಿಸಿದ್ದಾರೆ.

ವಿವೇಕಾನಂದ ಅವರನ್ನು ಟರ್ಫ್ ಕ್ಲಬ್‌ನ ಮೇಲ್ವಿಚಾರಕರಾಗಿ ನಾಮನಿರ್ದೇಶನ ಮಾಡಿದ್ದಕ್ಕಾಗಿ ಸಿದ್ದರಾಮಯ್ಯ ಅವರು ಜುಲೈ 28, 2014ರಂದು ಚೆಕ್ ಮೂಲಕ 1.30 ಕೋಟಿ ರೂಪಾಯಿ ಪಡೆದಿದ್ದಾರೆ ಎಂದು ಆರೋಪಿಸಿ, ಲೋಕಾಯುಕ್ತ ಪೊಲೀಸರು ತಮ್ಮ ದೂರಿನ ಮೇಲೆ ಕ್ರಮ ಕೈಗೊಳ್ಳದಿದ್ದಾಗ ರಮೇಶ್ ವಿಶೇಷ ನ್ಯಾಯಾಲಯದಲ್ಲಿ ಖಾಸಗಿ ಅರ್ಜಿ ಸಲ್ಲಿಸಿದ್ದರು.

ಕಳೆದ ವರ್ಷ ಜೂನ್ ತಿಂಗಳಲ್ಲಿ, ಲೋಕಾಯುಕ್ತ ಪೊಲೀಸರು ಸಹಜ ನ್ಯಾಯದ ತತ್ವಗಳನ್ನು ಪಾಲಿಸದ ಕಾರಣ ವಿಶೇಷ ನ್ಯಾಯಾಲಯವು ಬಿ ರಿಪೋರ್ಟ್ ಅನ್ನು ತಿರಸ್ಕರಿಸಿ ಪ್ರಾಥಮಿಕ ತನಿಖೆಗೆ ಆದೇಶಿಸಿತ್ತು. ಇದರ ನಂತರ, ಲೋಕಾಯುಕ್ತ ಪೊಲೀಸರು ಮತ್ತೆ 'ಬಿ' ವರದಿಯನ್ನು ಸಲ್ಲಿಸಿದರು. ವಿವೇಕಾನಂದರನ್ನು ಮೊದಲ ಬಾರಿಗೆ ಬಿಟಿಸಿಗೆ ನಾಮನಿರ್ದೇಶನ ಮಾಡಿಲ್ಲ ಎಂದು ತನಿಖಾಧಿಕಾರಿ ವರದಿಯಲ್ಲಿ ಹೇಳಿದ್ದಾರೆ. ಲೋಕಾಯುಕ್ತಕ್ಕೆ ಸಲ್ಲಿಸಿದ ಅವರ ಆಸ್ತಿ, ಹೊಣೆಗಾರಿಕೆಗಳಲ್ಲಿ ಮತ್ತು ಅವರ ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಸುವಾಗ ಸಿದ್ದರಾಮಯ್ಯ ವಿವೇಕಾನಂದರಿಂದ ಸಾಲ ಪಡೆದಿರುವುದನ್ನು ಘೋಷಿಸಲಾಗಿದೆ. ಉಸ್ತುವಾರಿ ಕೇವಲ ಗೌರವ ಹುದ್ದೆಯಾಗಿದ್ದು ಯಾವುದೇ ಸಂಭಾವನೆಯನ್ನು ಪಾವತಿಸದ ಕಾರಣ ಅದು ಭ್ರಷ್ಟಾಚಾರ ತಡೆ ಕಾಯ್ದೆ, 1988 ರ ಸೆಕ್ಷನ್ 7, 8, 9 ಅಥವಾ 13 ರ ಅಡಿಯಲ್ಲಿ ಬರುವುದಿಲ್ಲ.

ಮುಕ್ತಾಯ ವರದಿಯನ್ನು ವಿರೋಧಿಸಿ, ದೂರುದಾರರ ವಕೀಲರು, ಸಿದ್ದರಾಮಯ್ಯ ಅವರಿಗೆ ಹಾಜರಾತಿಗಾಗಿ ನೀಡಲಾದ ನೋಟಿಸ್‌ನ್ನು ಅವರ ಕಾನೂನು ಸಲಹೆಗಾರ ಎ.ಎಸ್.ಪೊನ್ನಣ್ಣ ಅವರು ಸ್ವೀಕರಿಸಿದ್ದಾರೆ. ಅದರ ಪ್ರತಿಯನ್ನು ಆಗಸ್ಟ್ 30ರಂದು ಸ್ವೀಕರಿಸಲಾಗಿದೆ. ಅದರಲ್ಲಿ ಸೆಪ್ಟೆಂಬರ್ 2, 2024 ರಂದು ಮುಖ್ಯಮಂತ್ರಿಗಳ ನಿವಾಸದಲ್ಲಿ ವಿಚಾರಣೆ ನಡೆಸಿ ಎಂದು ಅನುಮೋದನೆ ನೀಡಲಾಗಿದೆ ಎಂದು ವಾದಿಸಿದರು. ತನಿಖಾಧಿಕಾರಿ ತನಿಖೆ ನಡೆಸಲು ದಿನಾಂಕ, ಸಮಯ ಮತ್ತು ಸ್ಥಳವನ್ನು ನಿಗದಿಪಡಿಸಿದ ಆರೋಪಿಯ ಕೃತ್ಯವು ಕಾನೂನಿನ ದೃಷ್ಟಿಯಲ್ಲಿ ಕೇಳಿಬರುವುದಿಲ್ಲ. ಸಿದ್ದರಾಮಯ್ಯ ಅವರ ಹೇಳಿಕೆಯನ್ನು ಪರಿಶೀಲಿಸಲಾಗಿಲ್ಲ. ಅವರು ಮುಖ್ಯಮಂತ್ರಿಯ ಶಕ್ತಿ ಮತ್ತು ಅಧಿಕಾರಕ್ಕೆ ಶರಣಾಗಿದ್ದರು ಎಂದು ಅವರು ಆರೋಪಿಸಿದರು.

ಆದರೆ ತನಿಖಾ ಸಂಸ್ಥೆ, ಆರೋಪಿ ಸಿದ್ದರಾಮಯ್ಯ ಅವರು ಸಾಂವಿಧಾನಿಕ ಹುದ್ದೆಯನ್ನು ಹೊಂದಿದ್ದಾರೆ ಎಂಬ ಅಂಶವನ್ನು ನ್ಯಾಯಾಲಯ ಪರಿಗಣಿಸಬೇಕು ಎಂದು ನ್ಯಾಯಾಧೀಶರು ಹೇಳಿದರು. ಈ ಪ್ರಕರಣದಲ್ಲಿ, ಆರೋಪಿ ಯಾವುದೇ ವಿಚಾರಣೆಯನ್ನು ಎದುರಿಸುತ್ತಿಲ್ಲ. ವಸ್ತುಸ್ಥಿತಿಯನ್ನು ಸಂಗ್ರಹಿಸಲು ಇದು ಕೇವಲ ಪ್ರಾಥಮಿಕ ವಿಚಾರಣೆಯಾಗಿದೆ. ಹೀಗಾಗಿ ಆರೋಪಿಗಳ ವಿರುದ್ಧ ಮುಂದುವರಿಯಲು ಯಾವುದೇ ಸಾಕ್ಷ್ಯಾಧಾರಗಳಿಲ್ಲದಿದ್ದಾಗ ತನಿಖಾ ಸ್ಥಳಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗುವುದಿಲ್ಲ ಎಂದು ನ್ಯಾಯಾಲಯ ಹೇಳಿದೆ. ಲೋಕಾಯುಕ್ತ ಪೊಲೀಸರಿಗೆ ನೀಡಿದ ಹೇಳಿಕೆಯಲ್ಲಿ ಸಿದ್ದರಾಮಯ್ಯ ಅವರು 2014ರಲ್ಲಿ ಸ್ನೇಹಕ್ಕಾಗಿ ವಿವೇಕಾನಂದರಿಂದ ಹಣವನ್ನು ಎರವಲು ಪಡೆದಿರುವುದಾಗಿ ಹೇಳಿದ್ದಾರೆ. ಲೋಕಾಯುಕ್ತಕ್ಕೆ ಸಲ್ಲಿಸಿದ ಆಸ್ತಿ ಹೊಣೆಗಾರಿಕೆಗಳಲ್ಲಿ ಮತ್ತು ಐಟಿ ರಿಟರ್ನ್ಸ್ ಸಲ್ಲಿಸುವಾಗ ಅದನ್ನು ಘೋಷಿಸಲಾಗಿದೆ.

ಅಭಿನಂದನೆ


ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರನ್ನು ಮಾಜಿ ಉಪ ಮಹಾಪೌರ ವಿ.ಶೈಲೇಂದ್ರ ಅಭಿನಂದಿಸಿದರು. ಈ ಸಂದರ್ಭದಲ್ಲಿ ಮಾಜಿ ಸಚಿವ ಸಾ.ರಾ. ಮಹೇಶ್, ಮುಖಂಡರಾದ ನಿಂಗರಾಜು, ಮಹೇಶ್ ಇನ್ನಿತರರು ಉಪಸ್ಥಿತರಿದ್ದರು.

ರಾಜ್ಯಾದ್ಯಂತ ಮೈಕ್ರೋ ಫೈನಾನ್ಸ್‌ಗಳ ಅಟ್ಟಹಾಸ

ಕಣ್ಮುಚ್ಚಿ ಕುಳಿತಿರುವ ರಾಜ್ಯ ಸರ್ಕಾರ, ಬೀದಿಗೆ ಬಿದ್ದಿರುವ ಅಮಾಯಕ ಜೀವಗಳು

ಮೈಸೂರು, ಜ.24–ಮೈಸೂರು, ಚಾಮರಾಜನಗರ, ಮಂಡ್ಯ ಮತ್ತು ಕೊಡಗು ಜಿಲ್ಲೆ ಸೇರಿದಂತೆ ರಾಜ್ಯಾದ್ಯಂತ ಮೈಕ್ರೋ ಫೈನಾನ್ಸ್‌ಗಳ ಅಟ್ಟಹಾಸ ಎಲ್ಲೆ ಮೀರಿದ್ದು, ರಾಜ್ಯ ಸರ್ಕಾರ ಕಣ್ಮುಚ್ಚಿ ಕುಳಿತಿರುವುದರಿಂದ ಅಮಾಯಕರ ಜೀವ ಮತ್ತು ಜೀವನ ಬೀದಿಗೆ ಬಿದ್ದಿದೆ ಎಂದು ಆಮ್ ಆದ್ಮಿ ಪಕ್ಷದ ಮೈಸೂರು ನಗರ ಅಧ್ಯಕ್ಷ ಸೋಮಶೇಖರ್ ಕಳವಳ ವ್ಯಕ್ತಪಡಿಸಿದ್ದಾರೆ.

ಮೈಕ್ರೋ ಫೈನಾನ್ಸ್ ಕಂಪನಿಗಳು ಕಡಿಮೆ ಬಡ್ಡಿ ದರದ ಆಸೆ ತೋರಿಸಿ ವಿವಿಧ ಆಮಿಷಗಳನ್ನೊಡ್ಡಿ ಅಗತ್ಯವಿಲ್ಲದವರಿಗೂ ಸಾಲವನ್ನು ನೀಡಿದೆ. ಅದರಲ್ಲೂ ಗ್ರಾಮೀಣ ಪ್ರದೇಶದ ಜನರಿಗೆ ಮಂಕುಬೂದಿ ಎರಚಿ, ಸಾಲ ಕೊಟ್ಟು ಇದೀಗ ಸಾಲ ವಸೂಲಾತಿಗಾಗಿ ಕಿರುಕುಳ ನೀಡುತ್ತಿರುವುದರಿಂದ ಎಷ್ಟೋ ಜನರು ಜೀವ ಕಳೆದುಕೊಂಡಿದ್ದರೂ ಸರ್ಕಾರ ಮೌನ ತಾಳಿದೆ ಎಂದು ಅವರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಸರ್ಕಾರ ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಿ, ಮೈಕ್ರೋ ಫೈನಾನ್ಸ್‌ಗಳ ಕಿರುಕುಳ ಮತ್ತು ದೌರ್ಜನ್ಯ ತಪ್ಪಿಸಿ, ಸಾಲದ ಮೇಲಿನ ಬಡ್ಡಿ ಮನ್ನಾ ಮಾಡಿ, ಅಸಲು ಮಾತ್ರ ವಸೂಲಿ ಮಾಡಲು ಕಾಲಾವಕಾಶ ನೀಡಬೇಕು. ಸಾಧ್ಯವಾದರೆ ಸರ್ಕಾರ ಸಾಲವನ್ನೇ ಮನ್ನಾ ಮಾಡಿ ಸಾಲಗಾರರಿಗೆ ಮರು ಜೀವನಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಮನವಿ ಮಾಡಿದ್ದಾರೆ.

ನಿಧನ



ಪರಿಮಳಾ ದಾಸ್

ಮೈಸೂರು: ಹರಿಕಥಾ ವಿದ್ವಾನ್ ಹಾಗೂ ಮೈಸೂರು ದಟ್ಟಗಳ್ಳಿಯಲ್ಲಿನ ತಮ್ಮ ಪುತ್ರಿ ನಿವಾಸದಲ್ಲಿ ನೆಲೆಸಿದ್ದ ದಿವಂಗತ ನಾಗರಾಜ್ ದಾಸ್ ಅವರ ಪತ್ನಿ ಪರಿಮಳಾ ದಾಸ್(70) ಅವರು ಇಂದು ಬೆಳಗ್ಗೆ ಬೆಂಗಳೂರಿನ ಕೆಂಗೇರಿಯ ತಮ್ಮ ಪುತ್ರನ ನಿವಾಸದಲ್ಲಿ ನಿಧನರಾದರು. ಇವರು ಪುತ್ರ, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಮಿತ್ರರ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಿನ್ನೆ ಬೆಂಗಳೂರಿನ ಚಾಮರಾಜಪೇಟೆ ರುದ್ರಭೂಮಿಯಲ್ಲಿ ನೆರವೇರಿತು ಎಂದು ಮೂಲಗಳು ತಿಳಿಸಿವೆ.

ಅಮೆ ಕೆ. ಶಿವರಾಯ್



ಮೈಸೂರು: ಮೈಸೂರಿನ ಬನ್ನೂರು ರಸ್ತೆ ವಸಂತನಗರ ನಿವಾಸಿಯೂ ಆದ ಮುಡಾ ನಿವೃತ್ತ ಲೆಕ್ಕಾಧಿಕಾರಿ ಹಾಗೂ ಕೊಡಗು ಗೌಡ ಸಮಾಜದ ಮಾಜಿ ಅಧ್ಯಕ್ಷರಾದ ಅಮೆ ಕೆ. ಶಿವರಾಯ್ (90) ಅವರು ಇಂದು (ಶುಕ್ರವಾರ) ರಾತ್ರಿ ನಿಧನರಾದರು.

ಮೃತರು ಪತ್ನಿ, ಪುತ್ರ, ಪುತ್ರಿ ಹಾಗೂ ಅಪಾರ ಬಂಧುವರ್ಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಮೈಸೂರಿನ ಬನ್ನೂರು ರಸ್ತೆಯ ವಸಂತನಗರದಲ್ಲಿರುವ ಅವರ ಹೇಮಚಂದ್ರ ಫಾರಂನಲ್ಲಿ ನಾಳೆ (ಶನಿವಾರ) ಮಧ್ಯಾಹ್ನ 2 ಗಂಟೆಗೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಕೆಂಪಮ್ಮ

ಮೈಸೂರು, ಜ.24– ಮೈಸೂರಿನ ಪಡುವಾರಹಳ್ಳಿ ನಿವಾಸಿ ಕೆಂಪಮ್ಮ(65) ಅವರು ಶುಕ್ರವಾರ ನಿಧನರಾದರು. ಇವರು ಪತಿ ಚಿಕ್ಕಣ್ಣ, ಪುತ್ರಿಯರಾದ ಸಣ್ಣಮ್ಮ, ಪ್ರಭಾವತಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಗೋಕುಲಂ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ

ರಾಜ್ಯದಲ್ಲಿ ಸರಣಿ ಅಪರಾಧ ಕೃತ್ಯ; ಗೃಹ ಸಚಿವರು ಅಶಕ್ತರು!

ಏಳು... ಎದ್ದೇಳು ಪರಮೇಶ್ವರಾ...; ಶಾಸಕ ಶ್ರೀವತ್ಸ ಗೇಲಿ

- ಪ್ರತಿದಿನ ಒಂದಲ್ಲಾ ಒಂದು ಅಪರಾಧ ಕೃತ್ಯ ದಾಖಲು: ಪೊಲೀಸ್ ವ್ಯವಸ್ಥೆಗೆ ಶಕ್ತಿ ತುಂಬಿ
- ತಿಂಗಳಿಗೊಂದು ಹಗರಣ: ಸಾಲ ವಾಪಸು ಕೊಡದವರಿಂದ ಕಿಡ್ನಿ ಮಾರಾಟ


ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಶುಕ್ರವಾರ ಶಾಸಕ ಟಿ.ಎಸ್.ಶ್ರೀವತ್ಸ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದರು.

ಮೈಸೂರು, ಜ.24(ಬಿಎಲ್‌ಯು)– ಮೈಸೂರು ಸೇರಿದಂತೆ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದ್ದು ಪ್ರತಿದಿನ ಒಂದಲ್ಲಾ ಒಂದು ಅಪರಾಧ ಕೃತ್ಯ ನಡೆಯುತ್ತಿದೆ. ಈ ಹಿನ್ನೆಲೆಯಲ್ಲಿ ಮಲಗಿರುವ ಗೃಹ ಸಚಿವರ ಎಚ್ಚರಿಸಲು, ಎದ್ದೇಳು ಪರಮೇಶ್ವರಾ ಎಂದು ಶಾಸಕ ಟಿ.ಎಸ್.ಶ್ರೀವತ್ಸ ಲೇವಡಿ ಮಾಡಿದರು.

ನಗರದ ಬಿಜೆಪಿ ಕಚೇರಿಯಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರತಿ ದಿನ ಕೊಲೆ, ಸುಲಿಗೆ, ದರೋಡೆ ಸೇರಿದಂತೆ ಒಂದಲ್ಲ ಒಂದು ಅಪರಾಧ ಕೃತ್ಯ ನಡೆಯುತ್ತಿದೆ. ಇಷ್ಟೆಲ್ಲಾ ಕಾನೂನು ವಿರೋಧಿ ಕೃತ್ಯ ನಡೆಯುತ್ತಿದ್ದರೂ ಇದನ್ನು ತಡೆಯುವ ನಿಟ್ಟಿನಲ್ಲಿ ಗೃಹ ಸಚಿವ ಡಾ.ಪರಮೇಶ್ವರ್ ಅಶಕ್ತರಾಗಿದ್ದಾರೆ ಎಂದು ಟೀಕಿಸಿದರು.

ಕಾನೂನು ಸುವ್ಯವಸ್ಥೆ ಸರಿ ದಾರಿಗೆ ತರಲು ಸರ್ಕಾರ ಪೊಲೀಸರಿಗೆ ಸ್ವತಂತ್ರ ಅಧಿಕಾರ ನೀಡಬೇಕು. ಪೊಲೀಸ್ ಇಲಾಖೆಯನ್ನು ರಾಜಕಾರಣದಿಂದ ಮುಕ್ತ ಮಾಡಬೇಕು. ಈ ವೇಳೆ ದಕ್ಷತೆಯಿಂದ ಕೆಲಸ ಮಾಡುವ ಪೊಲೀಸರನ್ನು ಉತ್ತೇಜಿಸಬೇಕು. ಯಾರೇ ಅಪರಾಧ ಕೃತ್ಯ ಎಸಗಿದರೂ ಆರೋಪಿಗಳನ್ನು ರಕ್ಷಿಸದೆ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಬೇಕು ಎಂದು ಶ್ರೀವತ್ಸ ಆಗ್ರಹಿಸಿದರು. ಕಳೆದ ಒಂದೂವರೆ ವರ್ಷದ ಹಿಂದೆ ಅಧಿಕಾರಕ್ಕೆ ಬಂದ ರಾಜ್ಯ ಕಾಂಗ್ರೆಸ್ ಸರ್ಕಾರದಲ್ಲಿ ಹಗರಣಗಳ ಸರಣಿಯೇ ಇದೆ. ತಿಂಗಳಿಗೊಂದು ಹಗರಣ ನಡೆಯುತ್ತಿದ್ದು, ಸರ್ಕಾರವೇ ಲೂಟಿಗೆ ಇಳಿದಿದೆ ಎಂದು ದೂರಿದರು.

ಗ್ಯಾರಂಟಿ ಯೋಜನೆಗೆ ಸರ್ಕಾರದ ಬಳಿ ಹಣವಿಲ್ಲ. ಇದರಿಂದ ಜನಪರ ಕೆಲಸ ಕಾರ್ಯ ಕೈಗೊಳ್ಳಲು ಸಾಧ್ಯವಾಗುತ್ತಿಲ್ಲ ಎಂದು ಎಲ್ಲಾ ಶಾಸಕರು ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದರು. ಈಗ ಸರ್ಕಾರ ನಾಲ್ಕು ಸಾವಿರ ಕೋಟಿ ರೂಪಾಯಿ ಸಾಲ ಪಡೆದು ಪ್ರತಿ ಕ್ಷೇತ್ರಕ್ಕೆ ಅನುದಾನ ಹಂಚಿಕೆ ಮಾಡಲು ಮುಂದಾಗಿದೆ. ಆದರೆ ಈ ಅನುದಾನ ಗ್ರಾಮೀಣ ಪ್ರದೇಶದ ರಸ್ತೆಗಳ ಅಭಿವೃದ್ಧಿಗೆ ಮಾತ್ರ ಮೀಸಲು ಎಂದು ಷರತ್ತು ಹಾಕಲಾಗಿದೆ ಎಂದು ಶ್ರೀವತ್ಸ ಹೇಳಿದರು.

ಹಾಗಾದರೆ ಗ್ರಾಮೀಣ ರಸ್ತೆ ಇಲ್ಲದ ನಮ್ಮಂತಹ ಕ್ಷೇತ್ರದಲ್ಲಿ ಯಾವ ರೀತಿ ಅಭಿವೃದ್ಧಿ ಮಾಡಬೇಕು ಎಂದು ಪ್ರಶ್ನಿಸಿದ ಶ್ರೀವತ್ಸ, ನಗರ ಪ್ರದೇಶದ ಅಭಿವೃದ್ಧಿಗೆ ಪ್ರತ್ಯೇಕ ಅನುದಾನ ನೀಡಬೇಕು ಎಂದು ಶ್ರೀವತ್ಸ ಒತ್ತಾಯಿಸಿದರು. ಕಾಂಗ್ರೆಸ್‌ನವರಿಗೆ ಇತಿಹಾಸ ಗೊತ್ತಿಲ್ಲ. ಇದರಿಂದ ಮೈಸೂರು ಮಹಾರಾಜರನ್ನು ನಕಲಿ ಎಂದು ಟೀಕಿಸಿದರು. ಆದರೆ ತಾವು ಇರುವ ಪಕ್ಷ ಕಾಂಗ್ರೆಸ್ ನಕಲಿ ಎಂಬ ವಾಸ್ತವತೆ ಪ್ರಾಯಶಃ ಅವರಿಗೆ ಗೊತ್ತಿಲ್ಲ ಎನ್ನಿಸುತ್ತದೆ ಎಂದು ಗೇಲಿ ಮಾಡಿದರು.

ಕಳೆದ ಆರು ತಿಂಗಳ ಹಿಂದೆ ಕೆಪಿಸಿಸಿ ವಕ್ತಾರ ಲಕ್ಷ್ಮಣ ಅವರು ನನ್ನ ವಿರುದ್ಧ ಅಸಂವಿಧಾನಿಕ ಪದ ಬಳಕೆ ಮಾಡಿದ್ದರು. ಈ ಹಿನ್ನೆಲೆಯಲ್ಲಿ ಲಕ್ಷ್ಮಣ ವಿರುದ್ಧ ಮಾನನಷ್ಟ ಮೊಕದ್ದಮೆ ದಾಖಲಿಸಿದ್ದೇನೆ ಎಂದು ಶ್ರೀವತ್ಸ ತಿಳಿಸಿದರು. ಈ ವೇಳೆ ಮಾತನಾಡಿದ ನಗರ ಬಿಜೆಪಿ ಅಧ್ಯಕ್ಷ ಎಲ್.ನಾಗೇಂದ್ರ, ಆಸ್ತಿ ಖರೀದಿ ಹಾಗೂ ಮಾರಾಟಕ್ಕೆ ಇ-ಖಾತಾ ಕಡ್ಡಾಯಗೊಳಿಸಲಾಗಿದೆ. ಇ-ಖಾತಾ ನಿಯಮಾವಳಿ ಸರಳೀಕರಣ ಮಾಡಿ ಭ್ರಷ್ಟಮುಕ್ತ ವ್ಯವಸ್ಥೆ ಜಾರಿಗೊಳಿಸಬೇಕು. ಇಲ್ಲದಿದ್ದರೆ ಜಿಲ್ಲಾಧಿಕಾರಿ ಕಚೇರಿ ಮುಂದೆ ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಇದೇ ಸಂದರ್ಭದಲ್ಲಿ ಮಾತನಾಡಿದ ಬಿಜೆಪಿ ರಾಜ್ಯ ವಕ್ತಾರ ಎಂ.ಜಿ.ಮಹೇಶ್, ಕರ್ನಾಟಕದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ. ಗಸ್ತು ವಾಹನಕ್ಕೆ 100 ಲೀಟರ್ ಡೀಸೆಲ್ ಮಿತಗೊಳಿಸಲಾಗಿದೆ. ಇದರಿಂದ ಗಸ್ತು ವಾಹನದಲ್ಲಿ ಪೊಲೀಸರು ಪರಿಣಾಮಕಾರಿ ಪೆಟ್ರೋಲಿಂಗ್ ಮಾಡಲು ಸಾಧ್ಯವಿಲ್ಲ ಎಂದು ಅಭಿಪ್ರಾಯಪಟ್ಟರು.

ಮೈಕ್ರೊ ಫೈನಾನ್ಸ್ ಸೇರಿದಂತೆ ಇತರೆ ಹಣಕಾಸು ಸಂಸ್ಥೆಗಳು ಸಾಲ ವಸೂಲಾತಿಗಾಗಿ ಜನರ ರಕ್ತ ಹೀರುತ್ತಿವೆ. ಸಾಲ ವಾಪಸು ಕೊಡಲು ಸಾಧ್ಯವಾಗ ದವರು ಕಿಡ್ನಿ ಮಾರಾಟ ಮಾಡುತ್ತಿದ್ದಾರೆ. ಇಂತಹ ಹೀನ ಪರಿಸ್ಥಿತಿ ಕರ್ನಾಟಕದಲ್ಲಿದೆ ಎಂದು ಮಹೇಶ್ ಆಪಾದಿಸಿದರು. ಬಿಜೆಪಿ ನಗರ ವಕ್ತಾರ ಮಹೇಶ್‌ರಾಜ್ ಅರಸ್, ಮಾಜಿ ಕಾರ್ಪೋರೇಟರ್ ಶಿವಕುಮಾರ್ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಇಂದು ಮೈಸೂರಲ್ಲಿ ಸಂಗೀತ ಸಂಜೆ

ಮೈಸೂರು, ಜ.24(ಜಿಎ)–ಮೂನ್ ಲೈಟ್ ಮ್ಯೂಸಿಕಲ್ ಟ್ರಸ್ಟ್‌ನ ವತಿಯಿಂದ ಜ.25ರಂದು ಸಂಜೆ 5ಗಂಟೆಗೆ ಜಗನ್ಮೋಹನ ಅರಮನೆಯ ಆವರಣದಲ್ಲಿ ಕನ್ನಡದ ಮೇರು ನಟ ಡಾ.ವಿಷ್ಣುವರ್ಧನ್ ಅವರ ಚಲನ ಚಿತ್ರಗೀತೆಗಳ 'ಸಂಗೀತ ಸಂಜೆ'ಯನ್ನು ಏರ್ಪಡಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಟ್ರಸ್ಟ್‌ನ ಸಂಸ್ಥಾಪಕ ಸ್ಟ್ಯಾನ್ಲಿ ಪಾರ್ಕರ್ ಈ ವಿಷಯ ತಿಳಿಸಿ ಕಾರ್ಯಕ್ರಮದಲ್ಲಿ ಗಾಯಕರಾದ ರಶ್ಮಿ ನಾರಾಯಣ್, ಸ್ಟ್ಯಾನಿ ಪಾರ್ಕರ್, ಆನಂದ್‌ಶೆಟ್ಟಿ, ಹರ್ಷ ರಂಜಿನಿ, ಗಿರೀಶ್, ಜ್ಯೋತಿ ರಚನರಾಜ್ ಅವರು ವಿಷ್ಣುವರ್ಧನ್ ಅವರ ಚಲನಚಿತ್ರಗಳ 35 ಗೀತೆಗಳನ್ನು ಪ್ರಸ್ತುತ ಪಡಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಗುಂಪು ನೃತ್ಯ ಸಹಾ ಇದ್ದು ಎಲ್ಲರಿಗೂ ಉಚಿತ ಪ್ರವೇಶವಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಗಾಯಕರಾದ ಆನಂದ್ ಶೆಟ್ಟಿ, ಸ್ಟ್ಯಾನಿ ಪಾರ್ಕರ್, ರಶ್ಮಿ ಉಪಸ್ಥಿತರಿದ್ದರು.

ಲರ್ನ್‌ರ್ಸ್ ಗ್ಲೋಬಲ್ ಸಂಸ್ಥೆಯ ನೂತನ ಕ್ಯಾಂಪಸ್ ಉದ್ಘಾಟನೆ

ಮೈಸೂರು, ಜ.24(ಜಿಎ)–ಮೈಸೂರಿನ ಸಾತಗಳ್ಳಿಯಲ್ಲಿ ನಿರ್ಮಾಣಗೊಂಡಿರುವ ಲರ್ನರ್ಸ್ ಗ್ಲೋಬಲ್ ಶಾಲೆ ಮತ್ತು ಪದವಿಪೂರ್ವ ಕಾಲೇಜಿನ ನೂತನ ಕ್ಯಾಂಪಸ್‌ನ ಉದ್ಘಾಟನಾ ಸಮಾರಂಭವನ್ನು ಜ.27ರಂದು ಬೆಳಿಗ್ಗೆ 9ಗಂಟೆಗೆ ಹಮ್ಮಿಕೊಳ್ಳಲಾಗಿದೆ ಎಂದು ಕಾಲೇಜಿನ ಸಂಸ್ಥಾಪಕ ಕೆ.ಮುರಳಿಮೋಹನ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಆರ್ಟ್ ಆಫ್ ಲಿವಿಂಗ್‌ನ ಸಂಸ್ಥಾಪಕರಾದ ಶ್ರೀ ಶ್ರೀ ರವಿಶಂಕರ್ ಗುರೂಜಿ ಅವರು ದಿವ್ಯಸಾನಿಧ್ಯ ವಹಿಸಲಿದ್ದಾರೆ. ಮುಖ್ಯ ಅತಿಥಿಯಾಗಿ ಶಾಸಕರಾದ ಜಿ.ಟಿ.ದೇವೇಗೌಡ, ತನ್ವೀರ್ ಶೇಠ್, ಮಾಜಿ ವಿಧಾನ ಪರಿಷತ್ ಸದಸ್ಯ ಗೋ.ಮಧುಸೂದನ್, ವಿದ್ಯಾ ವಿಕಾಸ ಎಜ್ಯುಕೇಶನ್ ಟ್ರಸ್ಟ್ ನ ಕಾರ್ಯದರ್ಶಿ ಕವೀಶ್‌ಗೌಡ ಅವರು ಪಾಲ್ಗೊಳ್ಳಲಿದ್ದಾರೆ ಎಂದರು. ವಿದ್ಯಾರ್ಥಿಗಳ ಶೈಕ್ಷಣಿಕ ಉತ್ಕೃಷ್ಟತೆ, ಸೃಜನಶೀಲತೆ ಮತ್ತು ಸಮಗ್ರ ಅಭಿವೃದ್ಧಿಯನ್ನು ಉತ್ತೇಜಿಸಲು ವಿನ್ಯಾಸಗೊಳಿಸಲಾದ ಅನನ್ಯ ವಾಸ್ತುಶಿಲ್ಪವನ್ನು ಕ್ಯಾಂಪಸ್ ಹೊಂದಿದೆ. ಶಾಲೆಯು ಉತ್ತಮವಾದ ವಾತಾವರಣವನ್ನು ಹೊಂದಿದ್ದು ಕಲಿಕೆಗೆ ಪೂರಕವಾದ ಸಕಲ ಸವಲತ್ತುಗಳನ್ನೂ ಒಳಗೊಂಡಿದೆ. ನಮ್ಮ ವಿದ್ಯಾಸಂಸ್ಥೆಯ ಕ್ಯಾಂಪಸ್‌ನ ಅತ್ಯಾಧುನಿಕ ಸೌಲಭ್ಯಗಳು ಶೈಕ್ಷಣಿಕ, ಕಲೆ ಮತ್ತು ಅಥ್ಲೆಟಿಕ್ಸ್‌ನಲ್ಲಿ ವೈವಿಧ್ಯಮಯ ಕಲಿಕೆಯ ಅವಕಾಶಗಳನ್ನು ಬೆಂಬಲಿಸುತ್ತವೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಕಾಲೇಜಿನ ಉಪನ್ಯಾಸಕರಾದ ನಾಗರಾಜ, ಶೋಭಿತ, ಭಾವನ ಉಪಸ್ಥಿತರಿದ್ದರು.

ಕುವೆಂಪು ಅಚ್ಚು–ಮೆಚ್ಚಿನ ತಾಣ ಕುಕ್ಕರಹಳ್ಳಿ ಕೆರೆ ಏರಿ ಮೇಲೆ ನಡಿಗೆ


ರಾಷ್ಟ್ರಕವಿ ಕುವೆಂಪು ಅವರು ನಡೆದಾಡಿದ ಅವರ ಅಚ್ಚು–ಮೆಚ್ಚಿನ ಸ್ಥಳವಾದ ಕುಕ್ಕರಹಳ್ಳಿ ಕರೆ ಏರಿಯ ಮೇಲೆ ನಡಿಗೆ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.


ಮೈಸೂರು, ಜ.24(ಜಿಎ)–ರಾಷ್ಟ್ರಕವಿ ಕುವೆಂಪು ಅವರು ನಡೆದಾಡಿದ ಅವರ ಅಚ್ಚು–ಮೆಚ್ಚಿನ ಸ್ಥಳವಾದ ಕುಕ್ಕರಹಳ್ಳಿ ಕರೆ ಏರಿಯ ಮೇಲೆ ನಡಿಗೆ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ನೂರಾರು ಮಂದಿ ಹೆಜ್ಜೆ ಹಾಕಿ ಕುವೆಂಪು ಅವರನ್ನು ಸ್ಮರಿಸಿದರು.

ಕುವೆಂಪು ಅವರ ಜನ್ಮದಿನದ ಅಂಗವಾಗಿ ಕರ್ನಾಟಕ ರಾಜ್ಯ ಒಕ್ಕಲಿಗರ ವಿಕಾಸ ವೇದಿಕೆ ಮತ್ತು ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಆಯೋಜಿಸಿದ್ದ 'ಕೆರೆ ಏರಿಯ ಮೇಲೆ ನಡಿಗೆ'ಗೆ ಅಪರ ಜಿಲ್ಲಾಧಿಕಾರಿ ಡಾ.ಪಿ. ಶಿವರಾಜು ಚಾಲನೆ ನೀಡಿದರು. ನಡಿಗೆಯಲ್ಲಿ ಕುವೆಂಪು ವಿವಿ ವಿಶ್ರಾಂತ ಕುಲಪತಿ ಪ್ರೊ.ಕೆ.ಚಿದಾನಂದಗೌಡರು, ಮೈಸೂರು ವಿವಿಯ ಪ್ರಸಾರಂಗದ ನಿವೃತ್ತ ನಿರ್ದೇಶಕ ಕೆ.ಟಿ.ವೀರಪ್ಪ, ಸರ್ಕಾರಿ ನೌಕರರ ಸಂಘದ ಮಾಜಿ ಅಧ್ಯಕ್ಷ ಹೆಚ್.ಕೆ.ರಾಮು, ರಂಗಕರ್ಮಿ ಬಸವಲಿಂಗಯ್ಯ, ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್, ವೇದಿಕೆಯ ರಾಜ್ಯಾಧ್ಯಕ್ಷೆ ಹೆಚ್.ಎಲ್. ಯಮುನಾ ಪಾಲ್ಗೊಂಡು ಕುವೆಂಪು ಅವರ ನೆನಪು ಮೆಲುಕು ಹಾಕಿದರು.

ಈ ವೇಳೆ ಕುವೆಂಪು ವಿವಿ ವಿಶ್ರಾಂತ ಕುಲಪತಿ ಪ್ರೊ.ಕೆ.ಚಿದಾನಂದಗೌಡರು ಮಾತನಾಡಿ, ರಾಷ್ಟ್ರಕವಿ ಕುವೆಂಪು ಅವರನ್ನು ನೆನಪು ಮಾಡಿಕೊಂಡು ಮೈಸೂರಿನ ಅನೇಕ ಅಭಿಮಾನಿಗಳು ಇಂದು ಅವರು ನಡೆದಾಡಿದ ಸ್ಥಳದಲ್ಲಿ ಹೆಜ್ಜೆ ಹಾಕಿ ಕುವೆಂಪು ಅವರ ನೆನಪು ಮಾಡಿಕೊಂಡಿದ್ದಾರೆ. ಕುವೆಂಪು ಅವರ ಕೃತಿಯನ್ನು ಓದಿದರೆ ಜೀವನದ ಸಾರಾಂಶ ಅರಿಯುತ್ತದೆ ಎಂದರು.

ಇಂದಿನ ಯುವ ಜನತೆ ಅವರ ಕೃತಿ ಓದುವ ಅಗತ್ಯವಿದೆ. ಅವರು ಹೇಳಿದಂತೆ ಮಗು ಹುಟ್ಟಿದಾಗ ವಿಶ್ವಮಾನವನಾಗಿರುತ್ತಾನೆ. ನಂತರ ಅವನ ವಾತಾವರಣದಿಂದ ಅಲ್ಪ ಮಾನವನಾಗುತ್ತಾನೆ. ಆದ್ದರಿಂದ ಅಲ್ಪ ಮಾನವ ಆಗುವ ಬದಲು ವಿಶ್ವ ಮಾನವ ಆಗಬೇಕು. ಹಾಗೇ ಕುವೆಂಪು ಅವರನ್ನು ಒಂದು ಜಾತಿ, ವರ್ಗಕ್ಕೆ ಸೀಮಿತ ಮಾಡಬಾರದು ಎಂದು ತಿಳಿಸಿದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

25.01.2025 ಶನಿವಾರ, ಮಳೆ ನಕ್ಷತ್ರ: ಶ್ರವಣ 24.01.2025 ರಿಂದ 05.02.2025
ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ಹೇಮಂತ ಋತು, ಪುಷ್ಯ ಮಾಸ, ಕೃಷ್ಣ ಪಕ್ಷ,
ತಿಥಿ: ಏಕಾದಶಿ ನಕ್ಷತ್ರ: ಜ್ಯೇಷ್ಠ, ರಾಹುಕಾಲ: ಬೆಳಗ್ಗೆ 9 ರಿಂದ 10.30 ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಡಯಾಬಿಟಿಕ್ ರೆಟಿನೋಪತಿ, ಹಿಮ್ಮಡಿ ಮುಳ್ಳು, ಪಿತ್ತಗಂಧೆ (ಶೀತಪಿತ್ತ), ಉಸಿರಾಟದ ಸಮಸ್ಯೆಗಳಿಗೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ಗಂಟೆಗೆ.

■ **ರಾಮ್‌ಸನ್ಸ್ ಪ್ರತಿಷ್ಠಾನ:** ಬೊಂಬೆ ಮನೆ ದಸರೆ ಬೊಂಬೆ ಪ್ರದರ್ಶನ, 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ಕ್ಕೆ

■ **ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ :** ಬ್ರೈಡಲ್ ಜ್ಯೂವೆಲ್ಲರಿ ಶೋ, ಸ್ಥಳ: ಮೈಸೂರು ಶೋ ರೂಮ್, ಬಿ.ಎನ್. ರಸ್ತೆ, ಬೆಳಗ್ಗೆ 10 ರಿಂದ.

■ **ಮೈಸೂರು ವಿಶ್ವವಿದ್ಯಾನಿಲಯ, ಡಾ.ಬಿ.ಆರ್. ಅಂಬೇಡ್ಕರ್ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ:** ಡಾ.ಬಿ.ಆರ್.ಅಂಬೇಡ್ಕರ್ ಮಾನವ ಅಭಿವೃದ್ಧಿಯ ಗ್ರಹಿಕೆ ಕುರಿತು ಕಾರ್ಯಾಗಾರ, ಸ್ಥಳ:ಪ್ರೊ.ಬೆಟ್ರಿಕ್ಸ್ ಡಿಸೋಜ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 10.30ರಿಂದ.


■ **ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ, ಮೈಸೂರು ಜಿಲ್ಲಾ ಸಹಕಾರ ಒಕ್ಕೂಟ, ಸಹಕಾರ ಇಲಾಖೆ :** ರಾಜ್ಯ ಮಟ್ಟದ ವಿಶೇಷ ತರಬೇತಿ ಕಾರ್ಯಕ್ರಮ, ಉದ್ಘಾಟನೆ : ಶಾಸಕ ಜಿ.ಟಿ. ದೇವೇಗೌಡ, ಅಧ್ಯಕ್ಷತೆ : ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಮುಖ್ಯ ಅತಿಥಿಗಳು : ಮಹಾಮಂಡಳ ಮಾಜಿ ಅಧ್ಯಕ್ಷೆ ಶ್ರೀಮತಿ ಲಲಿತಾ ಜಿ.ಟಿ. ದೇವೇಗೌಡ, ನಿರ್ದೇಶಕ ಬಿ.ಸಿ. ಲೋಕಪ್ಪಗೌಡ, ಬಿ. ಜಯಕರ ಶೆಟ್ಟಿ ಇಂದ್ರಾಳಿ, ಉಪಾಧ್ಯಕ್ಷ ಬಿ.ಎನ್. ಸದಾನಂದ, ವ್ಯವಸ್ಥಾಪಕ ನಿರ್ದೇಶಕ ಕೆ.ಎಸ್. ನವೀನ್, ಕಾರ್ಯದರ್ಶಿ ಲಕ್ಷ್ಮೀಪತಯ್ಯ, ಜಂಟಿ ನಿಬಂಧಕ ಸಿ. ಪ್ರಸಾದ್ ರೆಡ್ಡಿ, ಉಪ ನಿಬಂಧಕ ಆರ್. ಮಂಜುನಾಥ್, ಸ್ಥಳ: ಮೈಸೂರು ವಿಶ್ವವಿದ್ಯಾನಿಲಯ, ವಿಜ್ಞಾನ ಭವನ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ.

■ **ಮೈಸೂರು ನಗರ ಮತ್ತು ತಾಲೂಕು ಪತ್ರ ಬರಹಗಾರರ ಒಕ್ಕೂಟ :** ಉದ್ಘಾಟನಾ ಸಮಾರಂಭ, ಉದ್ಘಾಟನೆ: ಜಿಲ್ಲಾ ನೋಂದಣಾಧಿಕಾರಿ ಶ್ರೀಮತಿ ವಿಜಯಲಕ್ಷ್ಮಿ ಆರ್. ಇನಾಂದಾರ್, ಅಧ್ಯಕ್ಷತೆ : ಒಕ್ಕೂಟದ ಅಧ್ಯಕ್ಷ ನಿಸಾರ್ ಅಹಮದ್ ಖಾನ್, ಮುಖ್ಯ ಅತಿಥಿಗಳು : ಸಿ.ಕಿರಣ್, ಹೆಚ್.ಜಿ. ನಾಗರಾಜ್, ಶ್ರೀಮತಿ ಸಿ.ಪಿ. ನಂದಿನಿ, ಶ್ರೀಮತಿ ಎಸ್.ಕೆ. ಷಾಜಹ, ಎನ್. ಶ್ರೀಕಾಂತ್, ಶ್ರೀಮತಿ ಜೆ. ಯಶಸ್ವಿನಿ, ಶ್ರೀಮತಿ ವಿ. ರುಕ್ಮಿಣಿ, ವಿಶೇಷ ಆಹ್ವಾನಿತರು : ನೋಡಲ್ ಆಫೀಸರ್‌ಗಳಾದ ಎಂ. ಸಂತೋಷ್ ಕುಮಾರ್, ಎಂ. ವಿವೇಕ್, ಸ್ಥಳ: ಕೆ.ವಿ.ಆರ್. ವೆಡ್ಡಿಂಗ್ ಬೆಲ್ಸ್ ಸಭಾಂಗಣ, ವಿಶ್ವೇಶ್ವರನಗರ, ಬೆಳಗ್ಗೆ 11ಕ್ಕೆ.

■ **ಬೋಗಾದಿ ಕ್ರಿಯಾ ಶೈಕ್ಷಣಿಕ ಸಂಪನ್ಮೂಲ ಕೇಂದ್ರ, ಸ್ಪಂದನಾ ಸಾಂಸ್ಕೃತಿಕ ಪರಿಷತ್ :** 'ಮಾಗಿಯ ಕವಿಗೋಷ್ಠಿ', ಉದ್ಘಾಟನೆ : ದೂರದರ್ಶನ ಕೇಂದ್ರದ ವಿಶ್ರಾಂತ ನಿರ್ದೇಶಕಿ ಹಾಗೂ ಖ್ಯಾತ ಲೇಖಕಿ ಮೀನಾ, ಅಧ್ಯಕ್ಷತೆ : ಮೈಸೂರು ವಿಶ್ವವಿದ್ಯಾನಿಲಯದ ಮಹಾರಾಜ ಕಾಲೇಜಿನ ಕನ್ನಡ ಪ್ರಾಧ್ಯಾಪಕ ಡಾ.ಕೆ. ತಿಮ್ಮಯ್ಯ, ಆಶಯ ನುಡಿ : ಸ್ಪಂದನಾ ಸಾಂಸ್ಕೃತಿಕ ಪರಿಷತ್ತಿನ ಅಧ್ಯಕ್ಷ ಟಿ.ಸತೀಶ್ ಜವರೇಗೌಡ, ಸ್ಥಳ: ಬೋಗಾದಿಯ ಕ್ರಿಯಾ ಶೈಕ್ಷಣಿಕ ಸಂಪನ್ಮೂಲ ಕೇಂದ್ರ, ಮಧ್ಯಾಹ್ನ 3 ಗಂಟೆಗೆ

■ **ಸುರಭಿ ಗಾನ ಕಲಾಮಂದಿರ ಚಾರಿಟಬಲ್ ಟ್ರಸ್ಟ್ :** ಅರಳು ಪ್ರತಿಭೆ, ಪ್ರತಿಭಾಂಕುರ, ಸಂಗೀತ ಮಾಲಿಕೆ ಕರ್ನಾಟಕ ಶಾಸ್ತ್ರೀಯ ಸಂಗೀತ, ವಿದುಷಿ ಮೇದಿನಿ ಭಟ್ ಅವರಿಂದ ಗಾಯನ, ವಿದ್ವಾನ್ ಅಮೋಘ ನಡಾದೂರ್–ವಯೋಲಿನ್, ವಿದ್ವಾನ್ ಪಿ.ಎಸ್. ಶ್ರೀಧರ್–ಮೃದಂಗ, ಸ್ಥಳ: ಶ್ರೀಸ್ವರ, ದೇವಪಾರ್ಥಿವ ರಸ್ತೆ, ಚಾಮರಾಜಪುರಂ, ಸಂಜೆ 4.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 CFTRI ಶೋಧ– ಅನುಶೋಧ– ಪ್ರಾಯೋಜಿತ ಬಾನುಲಿ ಸರಣಿ, ಪ್ರಾಯೋಜಕರು: CSIR, CFTRI, Mysuru, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಎಂ. ರಾಘವೇಂದ್ರ, ಜಯಂತಿ. ವಿ. ಭಟ್, ವ್ಯಾಖ್ಯಾನ–ಡಾ.ಹೆಚ್.ಎಂ.ಕಲಾಶ್ರೀ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಹಾದಿಯಲ್ಲಿ ಕಂಡ ಮುಖ–ಬಾನುಲಿ ಸರಣಿ, ಪ್ರಸ್ತುತಿ : ಅಬ್ದುಲ್ ರಶೀದ್, 9.05 ಗರ್ಭಕಂಠದ ಕ್ಯಾನ್ಸರ್ ಕುರಿತು ಮಾಹಿತಿ, ಪ್ರಾಯೋಜಕರು: ಇಂಡಿಯನ್ ಕ್ಯಾನ್ಸರ್ ಸೊಸೈಟಿ, 9.10 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಮಾಂಬಲಂ. ಎಂ.ಕೆ.ಎಸ್. ಶಿವ ಮತ್ತು ಸಂಗಡಿಗರು– ನಾಗಸ್ವರ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ 'ನಮ್ಮೂರ್ ಹೆಸರು', ಪ್ರಸ್ತುತಿ : ಡಾ. ಮೈಸೂರು ಉಮೇಶ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ಆಯುಷ್‌ವಾಣಿ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು : ಆಯುಷ್ ಇಲಾಖೆ, ಕರ್ನಾಟಕ ಸರ್ಕಾರ, 12.40 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ ರಾಷ್ಟ್ರೀಯ ಗೋಕುಲ್ ಮಿಷನ್ ಕುರಿತು ಮಾಹಿತಿ–ಎನ್. ವಿ. ಫಣೀಶ್ ಅವರಿಂದ, 1.20 ಭಾವಗೀತೆಗಳು, 2.40 ಹಿಂದಿ ಚಿತ್ರಗೀತೆಗಳು, 3.00 ಹಳ್ಳಿ ಹಾಡು, 3.30 ಮಕ್ಕಳ ಮಂಟಪ– ಮೈಸೂರಿನ ಸೆಂಟ್ ಜೋಸೆಫ್ ಶಾಲೆಯ ಮಕ್ಕಳಿಂದ ಕ್ರಿಸ್‌ಮಸ್ ಕುರಿತ ಕಾರ್ಯಕ್ರಮ, 4.00 ನಾಟಕ 'ಮರೆವಿನ ಮೋಜು', ರಚನೆ–ಬಿ. ಎಸ್. ಕೇಶವರಾವ್, ನಿರ್ಮಾಣ –ಉಮೇಶ್. ಎಸ್.ಎಸ್., 4.30 ನೆನಪಿನಂಗಳ (ಧ್ವನಿ ಭಂಡಾರದಿಂದ) ಹಿರಿಯ ಸಂಗೀತ ವಿದ್ವಾಂಸ ಟಿ.ಪಿ.ವೈದ್ಯನಾಥನ್ ಅವರೊಂದಿಗೆ ಶ್ರೀನಿವಾಸ ಪ್ರಸಾದ್ ಅವರು ನಡೆಸಿದ್ದ ಸಂವಾದ, 6.50 ಕೃಷಿರಂಗ : ಕಿಸಾನ್‌ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ, ದೇಶಭಕ್ತಿ ಗೀತೆಗಳು, 7.00 ಗಣರಾಜ್ಯ ದಿನೋತ್ಸವದ ಮುನ್ನಾದಿನದಂದು ಭಾರತದ ಘನತೆವೆತ್ತ ರಾಷ್ಟ್ರಪತಿಗಳಾದ ಶ್ರೀಮತಿ ದ್ರೌಪದಿ ಮುರ್ಮು ಅವರು ದೇಶವನ್ನುದ್ದೇಶಿಸಿ ಮಾಡುವ ಪ್ರಸಾರ ಭಾಷಣ, 8.00 ಸವಿನೆನಪು– ಹಳೆಯ ಕನ್ನಡ ಚಿತ್ರಗೀತೆಗಳು, 9.30 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ, ಪಂಡಿತ್ ವಿಕಾಸ್ ಬಾಬು– ಶಹನಾಯ್ ವಾದನ

■ **ಮಾತಂಗ ಉತ್ಸವ ಸಮಿತಿ :** ಮಾತಂಗ ಮಹೋತ್ಸವ, ಉಪಸ್ಥಿತರು : ಉತ್ತರ ಕರ್ನಾಟಕದ ಪರಿಯೋಜನಾ ಪ್ರಮುಖ ಸ್ವತಂತ್ರ ಶಿಂಧೆ, ಮಾತಂಗ ಮುನಿ ವಿರಚಿತ ಬೃಹದ್ದೇಶೀ ಡಾ. ರಾ.ಸ. ನಂದಕುಮಾರ, ಸ್ಥಳ: ಗೋವಿಂದರಾವ್ ಮೆಮೋರಿಯಲ್ ಹಾಲ್, ಸಂಜೆ 5ಕ್ಕೆ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಇಷ್ಟನಾಥಾನಂದ ಅವರಿಂದ ಆತ್ಮಬೋಧ ಕುರಿತು ಉಪನ್ಯಾಸ, ಸ್ಥಳ: ಸ್ವಾಮಿ ಶಾಂಭವಾನಂದಜಿ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ

■ **ಶ್ರುತಿಮಂಜರಿ ಪ್ರತಿಷ್ಠಾನ, ರೋಟರಿ ಪಶ್ಚಿಮ :** 27ನೇ ವಾರ್ಷಿಕ ಸಂಗೀತೋತ್ಸವ, ಕರ್ನಾಟಕ ಶಾಸ್ತ್ರೀಯ ವಾದ್ಯ ಸಂಗೀತ, ವಿದ್ವಾನ್ ವಿಠ್ಠಲ್ ರಾಮಮೂರ್ತಿ ಮತ್ತು ಶ್ರೀಹರಿ ವಿಠ್ಠಲ್ ಅವರಿಂದ ದ್ವಂದ್ವ ಪಿಟೀಲು, ವಿದ್ವಾನ್ ಜಿ.ಎಸ್. ರಾಮಾನುಜನ್–ಮೃದಂಗ, ವಿದ್ವಾನ್ ಜಿ.ಎಸ್. ರಮೇಶ್–ಮೃಚ್ಛಂಗಿ, ಸ್ಥಳ: ರೋಟರಿ ಪಶ್ಚಿಮ ಸಭಾಂಗಣ, ಕಾಮಾಕ್ಷಿ ಆಸ್ಪತ್ರೆ ಎದುರು, ಸರಸ್ವತಿಪುರಂ, ಸಂಜೆ 6ಕ್ಕೆ

■ **ಸ್ವದೇಶಿ ಜಾಗರಣ ಮಂಚ್ :** ಸ್ವದೇಶಿ ಮೇಳ–2025, ಬೆಳಗ್ಗೆ 11 ರಿಂದ ತಾರಸಿ ತೋಟ ತರಬೇತಿ ಕಾರ್ಯಾಗಾರ–ಶ್ರೀಮತಿ ಪ್ರತಿಮಾ ಅಡಿಗ, ಬೆಂಗಳೂರು, ಮಧ್ಯಾಹ್ನ 2.30 ರಿಂದ ಮಹಿಳಾ ಸಮಾವೇಶ, ಸಂಜೆ 5 ರಿಂದ ತಿಂಗಾಳು ಮುಳುಗಿದವೋ– ಜನಪದ ಗೀತ ಗಾಯನ, ವಾದ್ಯ ವೈವಿಧ್ಯ, ಪ್ರಸ್ತುತಿ : ರಂಗಭೂಮಿ ಕಲಾವಿದ ಎಸ್. ಸುಬ್ರಮಣ್ಯ, ಕರ್ನಾಟಕ ಜಾನಪದ ಅಕಾಡೆಮಿ ಸದಸ್ಯ ದೇವಾನಂದ ವರಪ್ರಸಾದ, ಸಂಜೆ 7.30 ರಿಂದ ಜನಪದ ಸಂಜೆ – ಜನಪದ ಗುರುಕುಲ, ಉಡುಪಿ ತಂಡದವರಿಂದ, ಸ್ಥಳ: ಮಹಾರಾಜ ಕಾಲೇಜು ಮೈದಾನ.

■ **ಶ್ರೀ ರಾಮಾಭ್ಯುದಯ ಸಭಾ ಚಾರಿಟಬಲ್ ಟ್ರಸ್ಟ್ :** ತಿಂಗಳ ಸಾಂಸ್ಕೃತಿಕ ಕಾರ್ಯಕ್ರಮದ ಪ್ರಯುಕ್ತ ವಿದುಷಿ ಕೆ.ಕೆ. ವೈಭವಿ ಮತ್ತು ತಂಡದವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ, ಸ್ಥಳ: ಶ್ರೀರಾಮಮಂದಿರದ ಆವರಣ, ಶಿವರಾಂಪೇಟೆ, ಸಂಜೆ 6.30ಕ್ಕೆ.

■ **ನಾಟ್ಯಾಲೇಖ ರಂಗ ಸಮೂಹ :** 'ನಾಟ್ಯಲೇಖ' ನಾಟಕೋತ್ಸವ, ಸಂಜೆ 7ಕ್ಕೆ ನೀನಾಸಂ ತಿರುಗಾಟ ತಂಡ ಅಭಿನಯಿಸುವ ಭವಭೂತಿ ರಚನೆಯ ಕೆ.ವಿ.ಅಕ್ಷರ ಅವರು ಕನ್ನಡಕ್ಕೆ ಅನುವಾದಿಸಿ, ನಿರ್ದೇಶಿಸಿರುವ 'ಮಾಲತಿ ಮಾಧವ' ನಾಟಕ ಪ್ರದರ್ಶನ, ಸ್ಥಳ: ರಂಗಾಯಣದ ವನರಂಗ.

ಮೈಸೂರು ಮಿತ್ರ


ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | 45 | ಜನವರಿ 25 ಶನಿವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 278 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com
₹4

ಹಳ್ಳಿ ಹಕ್ಕಿ ಹಾಡು...



'ಇನ್ನು ಪ್ರತಿ ಭಾನುವಾರ 'ಮೈಸೂರು ಮಿತ್ರ'ನಲ್ಲಿ ಹಿರಿಯ ರಾಜಕೀಯ ಮುತ್ಸದ್ಧಿ, ಸಾಹಿತಿ–ರಾಜಕಾರಣಿ, ಹಾಲಿ ವಿಧಾನ ಪರಿಷತ್ ಸದಸ್ಯರಾದ ಅಡಗೂರು ಹೆಚ್.ವಿಶ್ವನಾಥ್ ಅವರ 'ಹಳ್ಳಿ ಹಕ್ಕಿ ಹಾಡು...' ಅಂಕಣ ಪ್ರಕಟವಾಗಲಿದೆ. ವಿಶ್ವನಾಥ್ ಅವರು ಇದುವರೆಗೆ 'ಹಳ್ಳಿ ಹಕ್ಕಿಯ ಹಾಡು', 'ಮತ ಸಂತೆ', 'ಆಪತ್ ಸ್ಥಿತಿಯ ಆಲಾಪಗಳು', 'ಪ್ರಾಚೀನ ಪಾರ್ಲಿಮೆಂಟ್ ಪ್ರದಕ್ಷಿಣೆಗಳು' ಪುಸ್ತಕಗಳನ್ನು ಪ್ರಕಟಿಸುವ ಮೂಲಕ ಕನ್ನಡ ಸಾಹಿತ್ಯ ವಲಯ ಹಾಗೂ ರಾಜಕಾರಣದಲ್ಲಿ ಭಾರೀ ಹವಾ ಸೃಷ್ಟಿಸಿದ್ದಾರೆ. ಅತ್ಯಂತ ಕುತೂಹಲ ಕೆರಳಿಸಿರುವ 'ಬಾಂಬೆ ಡೇಸ್' ಇನ್ನಷ್ಟೇ ಬಿಡುಗಡೆ ಆಗಬೇಕಿದೆ. ವಿಶ್ವನಾಥ್, ರಾಜಕೀಯವಾಗಿ ವಾಕ್‌ಚತುರರು ಮಾತ್ರವಲ್ಲ, ವಿದ್ವತ್ಪೂರ್ಣ ಭಾಷಣಕಾರರು. ವಿಷಯ ವಿಶ್ಲೇಷಣೆಯಲ್ಲಿ ಪ್ರವೀಣರು. ಇವರ ವೈಶಿಷ್ಟಪೂರ್ಣ ಬರಹಗಳು ಇನ್ನು ಮುಂದೆ 'ಮಿತ್ರ'ನ ಓದುಗರಿಗೂ ವಿಶಿಷ್ಟ ಅನುಭವ ನೀಡುವುದರಲ್ಲಿ ಸಂಶಯವೇ ಇಲ್ಲ.

–ಸಂಪಾದಕ

ಸಿಎಂ ಸಿದ್ದರಾಮಯ್ಯನವರ ಪತ್ನಿ ಬಿ.ಎಂ.ಪಾರ್ವತಿ ಅವರಿಗೆ 14 ಮುಡಾ ನಿವೇಶನ ಮಂಜೂರು ಪ್ರಕರಣ

ಲೋಕಾಯುಕ್ತ ಮೈಸೂರು ಎಸ್ಪಿಯಿಂದ ಇಂದು ಹೈಕೋರ್ಟ್‌ಗೆ ತನಿಖಾ ವರದಿ ಸಲ್ಲಿಕೆ

ಮೈಸೂರು, ಜ.24(ಆರ್‌ಕೆ)–ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ನಿ ಬಿ.ಎಂ.ಪಾರ್ವತಿ ಅವರಿಗೆ ಶೇ.50:50ರ ಅನುಪಾತದಡಿ ಅಭಿವೃದ್ಧಿಪಡಿಸಿದ ವಸತಿ ಬಡಾವಣೆಗಳಲ್ಲಿ ಬೆಲೆ ಬಾಳುವ 14 ಮುಡಾ ನಿವೇಶನಗಳನ್ನು ನಿಯಮಬಾಹಿರವಾಗಿ ಮಂಜೂರು ಮಾಡಿರುವ ಪ್ರಕರಣದ ತನಿಖೆ ನಡೆಸುತ್ತಿರುವ ಕರ್ನಾಟಕ ಲೋಕಾಯುಕ್ತ ಮೈಸೂರು ಎಸ್ಪಿ ಟಿ.ಜೆ.ಉದೇಶ್ ಅವರು ನಾಳೆ (ಜ.25) ಹೈಕೋರ್ಟ್‌ಗೆ ವರದಿ ಸಲ್ಲಿಸಲಿದ್ದಾರೆ.

ರಾಜ್ಯದಾದ್ಯಂತ ತೀವ್ರ ಕುತೂಹಲ ಮೂಡಿಸಿರುವ ಸಿಎಂ ಸಿದ್ದರಾಮಯ್ಯರ ಪತ್ನಿಯವರಿಗೆ ಮುಡಾ ನಿವೇಶನ ಹಂಚಿಕೆ ಪ್ರಕರಣದ ತನಿಖೆ ನಡೆಸಬೇಕೆಂದು ಮೈಸೂರಿನ ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಅವರು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ ನ್ಯಾಯಾಲಯವು ವಾದ–ಪ್ರತಿವಾದ ಆಲಿಸಿದ ಬಳಿಕ ಸಿದ್ದರಾಮಯ್ಯ, ಪತ್ನಿ ಪಾರ್ವತಿ ಸೇರಿದಂತೆ ಐವರ ವಿರುದ್ಧ ಎಫ್‌ಐಆರ್ ದಾಖಲಿಸಿ, ತನಿಖೆ ಕೈಗೊಂಡು 2024ರ ಡಿಸೆಂಬರ್ 24ರೊಳಗಾಗಿ ತನಿಖಾ ವರದಿ ಸಲ್ಲಿಸುವಂತೆ ಲೋಕಾಯುಕ್ತ ಮೈಸೂರು ಎಸ್ಪಿ ಅವರಿಗೆ ಆದೇಶ ನೀಡಿತ್ತು.



ಸಿದ್ದರಾಮಯ್ಯ

ಜನಪ್ರತಿನಿಧಿಗಳ ನ್ಯಾಯಾಲಯದ ನಿರ್ದೇಶನದಂತೆ ಪ್ರಕರಣ ದಾಖಲಿಸಿದ್ದ ಲೋಕಾಯುಕ್ತ ಎಸ್ಪಿ ಟಿ.ಜೆ.ಉದೇಶ್ ಅವರು ತನಿಖೆ ಕೈಗೊಂಡಿದ್ದರು. ತನಿಖೆ ಪ್ರಗತಿಯಲ್ಲಿರುವಾಗಲೇ ದೂರುದಾರ ಸ್ನೇಹಮಯಿ ಕೃಷ್ಣ ಅವರು ಹೈಕೋರ್ಟ್‌ಗೆ ಮತ್ತೊಂದು ಅರ್ಜಿ ಸಲ್ಲಿಸಿ, ಲೋಕಾಯುಕ್ತ ಪೊಲೀಸರು ಸರ್ಕಾರದ ಅಧೀನದಲ್ಲಿ ಕೆಲಸ ಮಾಡುತ್ತಿರುವುದರಿಂದ ಮುಖ್ಯಮಂತ್ರಿಗಳ ವಿರುದ್ಧದ ಪ್ರಕರಣದ ತನಿಖೆ ನಿಷ್ಪಕ್ಷಪಾತವಾಗಿ ನಡೆಯುವುದು ಅನುಮಾನ. ಅದಕ್ಕಾಗಿ ಈ ಪ್ರಕರಣವನ್ನು ಸಿಬಿಐಗೆ ಒಪ್ಪಿಸುವಂತೆ ಮನವಿ ಮಾಡಿದ್ದರು. ಅವರ ಅರ್ಜಿ ವಿಚಾರಣೆ ನಡೆಸಿರುವ ರಾಜ್ಯ ಹೈಕೋರ್ಟ್ ಮುಂದಿನ ವಿಚಾರಣೆಯನ್ನು 2025ರ ಜನವರಿ 27ಕ್ಕೆ ನಿಗದಿ ಮಾಡಿದ್ದು, ಅಂದೇ ತೀರ್ಪು ನೀಡುವ ಸಾಧ್ಯತೆ ಇದೆ. ಅದೇ ರೀತಿ ಈವರೆಗೆ ನಡೆಸಿರುವ ತನಿಖೆ ಸಂಬಂಧ ಜನವರಿ 25ರೊಳಗೆ ವರದಿ ಸಲ್ಲಿಸುವಂತೆ ನಿರ್ದೇಶನ ನೀಡಿರುವುದರಿಂದ ಲೋಕಾಯುಕ್ತ ಎಸ್ಪಿ ಟಿ.ಜೆ.ಉದೇಶ್ ಅವರು ನಾಳೆ (ಶನಿವಾರ) ಹೈಕೋರ್ಟ್‌ಗೆ ತನಿಖಾ ವರದಿಯನ್ನು ಸಲ್ಲಿಸುವರು ಎಂದು ಅಧಿಕೃತ ಮೂಲಗಳು ತಿಳಿಸಿವೆ.





ಮುಡಾ ಕಚೇರಿ



ಬಿ.ಎಂ.ಪಾರ್ವತಿ

ಇಂದು ಉದೇಶ್ ಅವರು ಪ್ರಕರಣ ಸಂಬಂಧ ದಾಖಲೆಗಳು, ಕಡತಗಳು, ಮುಡಾ ಕಚೇರಿಯಿಂದ ಸಂಗ್ರಹಿಸಿದ ಸಭಾ ನಡಾವಳಿಗಳು, ಸಭೆಯಲ್ಲಿ ಹಾಜರಿದ್ದ ಸದಸ್ಯರು ಮಾತನಾಡಿರುವ ವಾಯ್ಸ್ ರೆಕಾರ್ಡ್ ಮತ್ತಿತರ ಸಾಕ್ಷ್ಯಾಧಾರಗಳ ಸಮೇತ ಬೆಂಗಳೂರಿಗೆ ತೆರಳಿ ಲೋಕಾಯುಕ್ತ ಎಡಿಜಿಪಿ ಮನಿಷ ಕರ್ಬಿಕರ್ ಹಾಗೂ ಐಜಿಪಿ ಸುಬ್ರಹ್ಮಣ್ಯೇಶ್ವರ ರಾವ್ ಅವರನ್ನು ಭೇಟಿ ಮಾಡಿ ಸಲಹೆ, ಮಾರ್ಗದರ್ಶನ ಪಡೆದಿದ್ದಾರೆ.

ಶನಿವಾರ ಬೆಳಗ್ಗೆ 11 ಗಂಟೆಗೆ ಹೈಕೋರ್ಟ್‌ಗೆ ಈವರೆಗೆ ತಾವು ನಡೆಸಿರುವ ತನಿಖಾ ವರದಿ, ಪೂರಕ ದಾಖಲೆ ಪತ್ರಗಳು, ಸಾಕ್ಷ್ಯಾಧಾರಗಳು ಹಾಗೂ ತಮ್ಮ ಸ್ಪಷ್ಟ ಅಭಿಪ್ರಾಯಗಳೊಂದಿಗೆ ಸಮಗ್ರ ವರದಿಯನ್ನು ಉದೇಶ್ ಅವರು ಸಲ್ಲಿಸಲಿದ್ದಾರೆ ಎಂದು ಲೋಕಾಯುಕ್ತ ಮೂಲಗಳು ತಿಳಿಸಿವೆ.

ಶೇಖ್ ತನ್ವೀರ್ ಆಸಿಫ್ ಮೈಸೂರು ಪಾಲಿಕೆ ನೂತನ ಆಯುಕ್ತ



ಶೇಖ್ ತನ್ವೀರ್ ಆಸಿಫ್

ಮೈಸೂರು, ಜ.24(ಎಸ್‌ಬಿಡಿ)– ಮೈಸೂರು ಮಹಾ ನಗರಪಾಲಿಕೆ ಆಯುಕ್ತರಾಗಿ ಮಂಡ್ಯ ಜಿಲ್ಲಾ ಪಂಚಾಯಿತಿ ಸಿಇಓ ಶೇಖ್ ತನ್ವೀರ್ ಆಸಿಫ್ ವರ್ಗಾವಣೆಗೊಂಡಿದ್ದಾರೆ. ಇವರೊಂದಿಗೆ 12 ಐಎಎಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಿ ರಾಜ್ಯ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಶುಕ್ರವಾರ ಆದೇಶ ಹೊರಡಿಸಿದೆ.

ಉತ್ತರ ಕರ್ನಾಟಕದ ಕಲಬುರಗಿ ಜಿಲ್ಲೆ ಮೂಲದ ಶೇಖ್ ತನ್ವೀರ್ ಆಸಿಫ್, 2017ರ ಕರ್ನಾಟಕ ಕೇಡರ್ ಐಎಎಸ್ ಅಧಿಕಾರಿ. ನಿವೃತ್ತ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಶೇಖ್ ಯೂಸುಫ್ ಅವರ ಪುತ್ರರಾದ ಇವರು ಬೆಂಗಳೂರಿನ ಎಂ.ಎಸ್.ರಾಮಯ್ಯ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಇಂಜಿನಿಯರಿಂಗ್ ಪದವಿ ಪಡೆದ ನಂತರ ನವದೆಹಲಿಯಲ್ಲಿ ಸಿವಿಲ್ ಸರ್ವೀಸ್ ಪರೀಕ್ಷೆಗೆ ತರಬೇತಿ ಪಡೆದು, 2016ರ ಪರೀಕ್ಷೆಯಲ್ಲಿ 25 ರ‍್ಯಾಂಕ್‌ನೊಂದಿಗೆ ಯಶಸ್ವಿಯಾಗಿದ್ದಾರೆ. ■ 6ನೇ ಪುಟಕ್ಕೆ

ಬೆಂಗಳೂರು ಅರಮನೆ ಮೈದಾನ ಸರ್ಕಾರದ ಸುಪರ್ದಿಗೆ ಸುಗ್ರೀವಾಜ್ಞೆ

ಸಚಿವ ಸಂಪುಟ ಸಭೆ ತೀರ್ಮಾನ

- ರಸ್ತೆ ವಿಸ್ತರಣೆಗೆ ಅಗತ್ಯವಿರುವ 15.36 ಎಕರೆ ಭೂಮಿಗೆ 3014ಕೋಟಿ ಟಿಡಿಆರ್ ನೀಡಲು ಸುಪ್ರೀಂಕೋರ್ಟ್ ಆದೇಶಿಸಿತ್ತು
- ಈ ಸಂಕಷ್ಟದಿಂದ ಪಾರಾಗುವುದರ ಜೊತೆಗೆ ಭವಿಷ್ಯದ ದೃಷ್ಟಿಯಿಂದ ಸುಗ್ರೀವಾಜ್ಞೆ ಮೊರೆ ಹೋಗಲು ನಿರ್ಧಾರ

ಬೆಂಗಳೂರು, ಜ.24(ಕೆಎಂಶಿ)– ಮೈಸೂರು ರಾಜವಂಶಸ್ಥರಿಗೆ ಸೇರಿದ ಬೆಂಗಳೂರು ಅರಮನೆ ಮೈದಾನ ಪ್ರದೇಶದ ಬಳಕೆ ಮತ್ತು ನಿಯಂತ್ರಣದ ಅಧಿಕಾರವನ್ನು ರಾಜ್ಯ ಸರ್ಕಾರದ ಬಳಿಯೇ ಇಟ್ಟುಕೊಳ್ಳುವ ಉದ್ದೇಶಕ್ಕಾಗಿ ಸುಗ್ರೀವಾಜ್ಞೆ ಹೊರಡಿಸಲು ಶುಕ್ರವಾರ ನಡೆದ ತುರ್ತು ಸಚಿವ ಸಂಪುಟ ಸಭೆ ತೀರ್ಮಾನಿಸಿದೆ.

ರಸ್ತೆ ವಿಸ್ತರಣೆಯ ಉದ್ದೇಶಕ್ಕಾಗಿ ಬಳಕೆಯಾಗುವ 15.36 ಎಕರೆ ಭೂಮಿಗೆ ಪರಿಹಾರವಾಗಿ ಟಿಡಿಆರ್ (ಅಭಿವೃದ್ಧಿ ಹಕ್ಕು ವರ್ಗಾವಣೆ) ರೂ.3,014 ಕೋಟಿ ನೀಡಬೇಕು ಎಂದು ಸುಪ್ರೀಂಕೋರ್ಟ್ ಆದೇಶ ನೀಡಿತ್ತು. ಈ ಪ್ರಮಾಣದ ಜಾಗಕ್ಕೆ ಭಾರೀ ಮೊತ್ತವನ್ನು ಪಾವತಿಸಬೇಕಾದ ಹೊರೆಯಿಂದ ತಪ್ಪಿಸಿಕೊಳ್ಳಲು ಸುಗ್ರೀವಾಜ್ಞೆಯ ಆಸರೆ ಪಡೆಯಲು ಸರ್ಕಾರ ಮುಂದಾಗಿದೆ.

ಸಚಿವ ಸಂಪುಟ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ವಿವರ ನೀಡಿದ ಕಾನೂನು ಸಚಿವ ಎಚ್.ಕೆ.ಪಾಟೀಲ್, ಬೆಂಗಳೂರು ಅರಮನೆ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ 1996ಕ್ಕೆ ಸಂಬಂಧಪಟ್ಟ ಸಿವಿಲ್ ಮೇಲ್ಮನವಿಗಳು ಸುಪ್ರೀಂಕೋರ್ಟ್‌ನಲ್ಲಿ ಬಾಕಿ ಇವೆ. ಈ ಹಂತದಲ್ಲಿ ಅಭಿವೃದ್ಧಿ ಹಕ್ಕುಗಳನ್ನು (ಟಿಡಿಆರ್) ವಿತರಿಸಿದರೆ ರಾಜ್ಯದ ಹಿತಾಸಕ್ತಿಯ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗುತ್ತದೆ. ಆದ್ದರಿಂದ ಮೈದಾನ ಜಾಗದ ಬಳಕೆ ಮತ್ತು ನಿಯಂತ್ರಣಕ್ಕೆ ಸುಗ್ರೀವಾಜ್ಞೆ ಹೊರಡಿಸಲಾಗುವುದು ಎಂದರು. ಅರಮನೆ ಮೈದಾನ ಒಟ್ಟು 472 ಎಕರೆ 16 ಗುಂಟೆ ವ್ಯಾಪ್ತಿ ಇದೆ. 1996ರ ಅಧಿನಿಯಮ ರೂಪಿಸಿದಾಗ ರೂ 11 ಕೋಟಿ ಪರಿಹಾರ ನಿಗದಿ ಮಾಡಲಾಗಿತ್ತು. ಇದರಲ್ಲಿ ಒಂದಷ್ಟು ಭಾಗವನ್ನು ರಾಜವಂಶಸ್ಥರು ಪರಿಹಾರವಾಗಿ ಪಡೆದಿದ್ದಾರೆ. ಅಲ್ಲದೇ, ಈ ಕಾನೂನಿನ ಸಾಂವಿಧಾನಿಕ ಸಿಂಧುತ್ವವನ್ನು ಕರ್ನಾಟಕ ಹೈಕೋರ್ಟ್ ಎತ್ತಿ ಹಿಡಿದಿದೆ. ಇದಕ್ಕೆ ಸುಪ್ರೀಂ ಕೋರ್ಟ್‌ನಿಂದ ಯಾವುದೇ ತಡೆಯಾಜ್ಞೆ ಇಲ್ಲ ಎಂದರು.

ಆದರೆ, ಕಳೆದ ಡಿಸೆಂಬರ್ 10ರಂದು ಸುಪ್ರೀಂಕೋರ್ಟ್ ನ್ಯಾಯಾಂಗ ನಿಂದನೆ ಮತ್ತು ಇತರ ಪ್ರಕರಣಗಳಿಗೆ ಸಂಬಂಧಿಸಿದಂತೆ ಆದೇಶ ಹೊರಡಿಸಿತು. ಆ ಆದೇಶದ ಪ್ರಕಾರ ಕರ್ನಾಟಕ ಸ್ಟ್ಯಾಂಪ್ ಕಾಯ್ದೆಯ ಸೆಕ್ಷನ್ 45 ಬಿ ಗೆ ಅನುಗುಣವಾಗಿ ಅರಮನೆ ಮೈದಾನಕ್ಕೆ ಹೊಂದಿಕೊಂಡಿರುವ ಜಾಗಕ್ಕೆ ಚಾಲ್ತಿಯಲ್ಲಿರುವ ಮಾರ್ಗಸೂಚಿ ಮೌಲ್ಯಕ್ಕೆ ಅನುಗುಣವಾಗಿ ರಸ್ತೆ ವಿಸ್ತರಣೆ ಉದ್ದೇಶಕ್ಕಾಗಿ ಅರಮನೆ ಜಾಗವನ್ನು ಮೌಲ್ಯೀಕರಿಸಿ, ವರ್ಗಾವಣೆ ಮಾಡಬಹುದಾದ ಟಿಡಿಆರ್ ನೀಡುವಂತೆ ನಿರ್ದೇಶನ ನೀಡಿತು ಎಂದು ಹೇಳಿದರು. ಕೇವಲ ಎರಡು ಕಿ.ಮೀ ರಸ್ತೆ ಅಭಿವೃದ್ಧಿಗೆ ರೂ. 3,014 ಕೋಟಿ ಎಂದರೆ, ಪ್ರತಿ ಎಕರೆಗೆ ರೂ.200 ಕೋಟಿ ಆಗುತ್ತದೆ. ಇದರಿಂದ ರಾಜ್ಯದಲ್ಲಿ ಆರ್ಥಿಕವಾಗಿ ■ 6ನೇ ಪುಟಕ್ಕೆ



ಇನ್ನೇನು, ಕಾನೂನು ಸಮರ ಇದ್ದೇ ಇದೆ!

ಮೈಸೂರು ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್ ಪ್ರತಿಕ್ರಿಯೆ

ಮೈಸೂರು: ರಸ್ತೆ ಅಗಲೀಕರಣಕ್ಕೆ ಬೆಂಗಳೂರಿನ ಅರಮನೆ ಜಾಗವನ್ನು ಬಳಸಿಕೊಳ್ಳುವ ಬಗ್ಗೆ ಸುಗ್ರೀವಾಜ್ಞೆ ಹೊರಡಿಸಲು ತುರ್ತು ಸಚಿವ ಸಂಪುಟದಲ್ಲಿ ನಿರ್ಧಾರ ಕೈಗೊಂಡಿರುವುದನ್ನು ಮೈಸೂರು ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ವಿರೋಧ ವ್ಯಕ್ತಪಡಿಸಿದ್ದು, ನಮಗೆ ಅನ್ಯಾಯವಾದರೆ ಕಾನೂನು ಹೋರಾಟ ಮಾಡುವುದಾಗಿ ತಿಳಿಸಿದ್ದಾರೆ.



ಪ್ರಮೋದಾದೇವಿ ಒಡೆಯರ್

ಬೆಂಗಳೂರು ಅರಮನೆ ಜಾಗ ವಿಚಾರಕ್ಕೆ ಸಂಬಂಧಿಸಿದಂತೆ ನಮಗೆ ಅನ್ಯಾಯ ಆದರೆ ಕಾನೂನು ಸಮರ ಇದ್ದೇ ಇರುತ್ತದೆ. ಇದರಲ್ಲಿ ಯಾವುದೇ ಅನುಮಾನ ಬೇಡ. ಈ ಹಿಂದೆ ನಮ್ಮ ಯಜಮಾನರು ಹೋರಾಟ ಮಾಡುತ್ತಿದ್ದರು. ಈಗ ನಾವು ಆ ಹೋರಾಟ ಮುಂದುವರೆಸುತ್ತೇವೆ ಎಂದಿದ್ದಾರೆ. ನಾನು ಸಂಪುಟ ನಿರ್ಧಾರದ ಬಗ್ಗೆ ನೋಡಿದೆ. ■ 6ನೇ ಪುಟಕ್ಕೆ

ಪಾಲಹಳ್ಳಿ ರೌಡಿಶೀಟರ್ ಸುಪ್ರೀತ್ ಕೊಲೆ ಪ್ರಕರಣ

10 ಆರೋಪಿಗಳ ಬಂಧನ

- ಗುಂಡೇಟು ತಿಂದವ ಗುಣಮುಖವಾದ ನಂತರ ಬಂಧನ
- ಮತ್ತಿಬ್ಬರು ಆರೋಪಿಗಳಿಗಾಗಿ ಶೋಧ




ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಮಾತನಾಡಿದರು.

ಮಂಡ್ಯ, ಜ.24– ಶ್ರೀರಂಗಪಟ್ಟಣ ತಾಲೂಕಿನ ಪಾಲಹಳ್ಳಿಯಲ್ಲಿ ನಡೆದ ರೌಡಿಶೀಟರ್ ಸುಪ್ರೀತ್ (ಸುಪ್ಪಿ) ಭೀಕರ ಕೊಲೆ ಪ್ರಕರಣವನ್ನು ಭೇದಿಸುವಲ್ಲಿ ಪೊಲೀಸರು ಯಶಸ್ವಿಯಾಗಿದ್ದು, ಈ ಸಂಬಂಧ 10 ಮಂದಿಯನ್ನು ಬಂಧಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಶುಕ್ರವಾರ ಸಂಜೆ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ. ಬೇರೊಂದು ಕೊಲೆ ಪ್ರಕರಣದಲ್ಲಿ ಮಂಡ್ಯ ಜಿಲ್ಲಾ ಕಾರಾಗೃಹದಲ್ಲಿರುವ ಇಬ್ಬರು ಕೈದಿಗಳು (ಪ್ರಮೋದ ಮತ್ತು ಅಭಿಷೇಕ) ಮೊಬೈಲ್ ಬಳಸಿ, ಸ್ನೇಹಿತರ ಮೂಲಕ ಸುಪ್ರೀತ್ ಕೊಲೆಗೆ ಸಂಚು ನಡೆಸಿರುವುದು ತನಿಖೆಯಿಂದ ಬೆಳಕಿಗೆ ಬಂದಿದ್ದು, ಜೊತೆಗೆ ಮತ್ತೊಬ್ಬ ಆರೋಪಿ ಪೊಲೀಸರಿಂದ ಕಾಲಿಗೆ ಗುಂಡೇಟು ತಿಂದು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ. ಗುಣಮುಖನಾದ ನಂತರ ಆತನನ್ನು ಬಂಧಿಸಲಾಗುವುದು. ಈ ಮೂವರನ್ನು ಸೇರಿಸಿದರೆ ಆರೋಪಿಗಳ ಒಟ್ಟು ಸಂಖ್ಯೆ 13ಕ್ಕೆ ■ 6ನೇ ಪುಟಕ್ಕೆ

ದರ್ಶನ್ ಸೇರಿದಂತೆ 7 ಆರೋಪಿಗಳ ಜಾಮೀನು ರದ್ದುಗೊಳಿಸಲು ಸುಪ್ರೀಂಕೋರ್ಟ್ ನಿರಾಕರಣೆ

ಅರ್ಜಿ ಪರಿಶೀಲನೆಗೆ ಒಪ್ಪಿಗೆ, ಆರೋಪಿಗಳಿಗೆ ನೋಟೀಸ್

ನವದೆಹಲಿ, ಜ.24– ದರ್ಶನ್ ಪವಿತ್ರಗೌಡ ಸೇರಿದಂತೆ ಇತರೇ ಆರೋಪಿಗಳ ಜಾಮೀನು ರದ್ದುಗೊಳಿಸಲು ಸುಪ್ರೀಂ ಕೋರ್ಟ್ ಶುಕ್ರವಾರ ನಿರಾಕರಿಸಿತು. ಆದರೆ ಜಾಮೀನು ಪ್ರಶ್ನಿಸಿ ರಾಜ್ಯ ಸರ್ಕಾರ ಸಲ್ಲಿಸಿದ್ದ ಆಕ್ಷೇಪಣೆ ಅರ್ಜಿಯನ್ನು ಪರಿಶೀಲಿಸಲು ಒಪ್ಪಿಕೊಂಡು, ಆರೋಪಿಗಳಿಗೆ ನೋಟಿಸ್ ಜಾರಿ ಮಾಡಿದೆ. ರೇಣುಕಾಸ್ವಾಮಿ ಹತ್ಯೆ ಪ್ರಕರಣದಲ್ಲಿ ಹೈಕೋರ್ಟ್ ದರ್ಶನ್ ಸೇರಿದಂತೆ ಇತರೇ 7 ಆರೋಪಿಗಳಿಗೆ ಮಂಜೂರು ಮಾಡಿದ್ದ ಜಾಮೀನು ರದ್ದು ಕೋರಿ ಬೆಂಗಳೂರು ಪೊಲೀಸರು ಸಲ್ಲಿಸಿದ್ದ ಮೇಲ್ಮನವಿ ಅರ್ಜಿಯ ವಿಚಾರಣೆ ಇಂದು ನ್ಯಾಯಮೂರ್ತಿಗಳಾದ ಜೆ.ಬಿ.





ಪಾರ್ದಿವಾಲ ಮತ್ತು ಆರ್ ಮಹಾದೇವನ್ ಅವರಿದ್ದ ದ್ವಿಸದಸ್ಯ ಪೀಠದಲ್ಲಿ ನಡೆಯಿತು.

ವಿಚಾರಣೆ ವೇಳೆ ಜಾಮೀನು ರದ್ದುಗೊಳಿಸಲು ಸುಪ್ರೀಂಕೋರ್ಟ್ ಶುಕ್ರವಾರ ನಿರಾಕರಿಸಿತು. ■ 6ನೇ ಪುಟಕ್ಕೆ

ನಿರುದ್ಯೋಗ ನಿವಾರಣೆಗೆ ನನ್ನ ಪ್ರಯತ್ನಕ್ಕೆ ರಾಜ್ಯ ಸರ್ಕಾರ ಸಹಕರಿಸುತ್ತಿಲ್ಲ


- ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಆರೋಪ
- ಕೆ.ಆರ್.ನಗರದಲ್ಲಿ ಅಭಿಮಾನದ ಅಭಿನಂದನೆ ಸ್ವೀಕಾರ

ಕೆ.ಆರ್.ನಗರ, ಜ.24– ರಾಜ್ಯದಲ್ಲಿ ನಿರುದ್ಯೋಗ ಸಮಸ್ಯೆ ತಾಂಡವವಾಡುತ್ತಿದ್ದು, ಇದನ್ನು ಪರಿಹರಿಸುವ ಸಲುವಾಗಿ ಕೇಂದ್ರ ಮಂತ್ರಿಯಾಗಿ ನಾನು ಸಾಕಷ್ಟು ಯೋಜನೆಗಳನ್ನು ಹಾಕಿಕೊಂಡಿದ್ದೇನೆ. ಆದರೆ ರಾಜ್ಯ ಸರ್ಕಾರ ಸಹಕಾರ ನೀಡುತ್ತಿಲ್ಲ ಎಂದು ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ. ಕುಮಾರಸ್ವಾಮಿ ಆರೋಪಿಸಿದರು.

ಪಟ್ಟಣದ ಪುರಸಭೆ ಬಯಲು ರಂಗಮಂದಿರದಲ್ಲಿ ತಾಲೂಕು ಜೆಡಿಎಸ್ ವತಿಯಿಂದ ಶುಕ್ರವಾರ ತಮಗೆ ಏರ್ಪಡಿಸಿದ್ದ ಅಭಿಮಾನದ ಅಭಿನಂದನಾ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು ರಾಜ್ಯದ ವಿವಿಧ ಭಾಗಗಳಿಂದ ಸುಮಾರು 15 ಸಾವಿರ ಯುವಕ, ಯುವತಿಯರು ಉದ್ಯೋಗಕ್ಕಾಗಿ ನನಗೆ ಅರ್ಜಿ ಸಲ್ಲಿಸಿದ್ದಾರೆ ಎಂದರು.

ನಿರುದ್ಯೋಗ ಸಮಸ್ಯೆ ನೀಗಿಸುವ ಸಲುವಾಗಿ ರಾಜ್ಯದಲ್ಲಿ ಸ್ಥಗಿತಗೊಂಡಿರುವ ಕಾರ್ಖಾನೆಗಳನ್ನು ಪುನರಾರಂಭ ಮಾಡಿಸಲು ಕೇಂದ್ರ ಸರ್ಕಾರದಿಂದ ಆರ್ಥಿಕ ಸಹಕಾರ ಕೊಡಿಸಲು ಸಿದ್ಧನಿದ್ದೇನೆ. ಈ ವಿಚಾರವನ್ನು ರಾಜ್ಯ ಸರ್ಕಾರ ಗಂಭೀರವಾಗಿ ಪರಿಗಣಿಸಿ, ನಾಡಿನ ನಿರುದ್ಯೋಗಿ ಯುವ ಜನತೆಯ ಹಿತದೃಷ್ಟಿಯಿಂದ ನನ್ನ ಜೊತೆ ಕೈಜೋಡಿಸಬೇಕು ಎಂದು ಮನವಿ ಮಾಡಿದರೂ ದ್ವೇಷದ ರಾಜಕಾರಣ ಮಾಡುತ್ತಿರುವ ಸರ್ಕಾರ ನನಗೆ ಹೆಸರು ಬರುತ್ತದೆಂದು ಸಹಕಾರ ನೀಡುತ್ತಿಲ್ಲ ಎಂದು ದೂರಿದರು.

ಎರಡು ವರ್ಷಗಳ ಅಧಿಕಾರದ ಅವಧಿಯಲ್ಲಿ ಮುಖ್ಯಮಂತ್ರಿಗಳು ಮಹಿಳೆಯರಿಗೆ ಎರಡು ಸಾವಿರ ರೂ. ಸೇರಿದಂತೆ ಪಂಚ ಗ್ಯಾರಂಟಿ ಯೋಜನೆಗಳಿಗೆ ಎರಡು ಲಕ್ಷ ಕೋಟಿ ಸಾಲ ಮಾಡಿದ್ದಾರೆ. ಮುಂದಿನ ಬಜೆಟ್‌ನಲ್ಲಿ ಘೋಷಿಸುವ ಯೋಜನೆಗಳಿಗೆ ಮತ್ತಷ್ಟು ಸಾಲ ಮಾಡುವ ನಿರೀಕ್ಷೆಯಿದ್ದು, ಸಿದ್ದರಾಮಯ್ಯನವರ ಸರ್ಕಾರ ರಾಜ್ಯದ ಜನತೆಯನ್ನು ಸಾಲದ ಸುಳಿಗೆ ಸಿಲುಕಿಸಲಿದೆ ಎಂದು ಆರೋಪಿಸಿದರು. 2023ರ ವಿಧಾನಸಭಾ ಚುನಾವಣೆಯಲ್ಲಿ ಜೆಡಿಎಸ್ ಕೇವಲ 19 ಸ್ಥಾನಗಳನ್ನು ಮಾತ್ರ ಪಡೆಯಿತು. ■ 6ನೇ ಪುಟಕ್ಕೆ



ಕೆ.ಆರ್.ನಗರ ಪುರಸಭೆ ಬಯಲು ರಂಗಮಂದಿರದಲ್ಲಿ ಆಯೋಜಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್, ಮಾಜಿ ಸಚಿವ ಸಾರಾ ಮಹೇಶ್‌ರನ್ನು ಅಭಿನಂದಿಸಲಾಯಿತು. ಈ ವೇಳೆ ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ಶಾಸಕ ಜಿ.ಡಿ.ಹರೀಶ್‌ಗೌಡ, ಎಂಎಲ್‌ಸಿ ಮಂಜೇಗೌಡ ಇನ್ನಿತರರಿದ್ದಾರೆ.

ಸಾರಾ ಮಹೇಶ್ ಸೇವೆ ಮೈಸೂರು ಜನತೆಗೆ ಅವಶ್ಯ

ಕೆ.ಆರ್.ನಗರ: 2023ರ ವಿಧಾನಸಭಾ ಚುನಾವಣೆಯಲ್ಲಿ ಕ್ಷೇತ್ರದಲ್ಲಿ ಸೋಲುಂಡ ಸಾ.ರಾ.ಮಹೇಶ್ ಅವರು ಮುಂದೆ ಯಾವುದೇ ಚುನಾವಣೆಗಳಲ್ಲಿ ಸ್ಪರ್ಧಿಸುವುದಿಲ್ಲವೆಂದು ನನ್ನ ಬಳಿ ಹಲವಾರು ಬಾರಿ ಹೇಳಿದ್ದಾರೆ. ಮಹೇಶ್‌ರ ಸೇವೆ ಮೈಸೂರು ಜಿಲ್ಲೆಯ ಜನತೆಗೆ ಅವಶ್ಯಕವಾಗಿದ್ದು, ಈ ವಿಚಾರವನ್ನು ಅವರು ಅರಿತು ಚುನಾವಣಾ ರಾಜಕಾರಣದಲ್ಲಿ ಮುಂದುವರೆಯಬೇಕು ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅಭಿಪ್ರಾಯಪಟ್ಟರು. ಮಹೇಶ್ ರಾಜಕೀಯದಲ್ಲಿ ಸೋಲು–ಗೆಲುವನ್ನು ಸಮಚಿತ್ತದಿಂದ ಸ್ವೀಕಾರ ಮಾಡಿ, ಜನರ ಭಾವನೆಗಳಿಗೆ ಆದ್ಯತೆ ನೀಡಬೇಕು ಎಂದು ಸಲಹೆ ನೀಡಿದರು. ಕೆ.ಆರ್.ನಗರ ವಿಧಾನಸಭಾ ಕ್ಷೇತ್ರದಲ್ಲಿ ಒಕ್ಕಲಿಗ ಮತ್ತು ಕುರುಬ ಸಮಾಜಗಳ ನಡುವೆ ಎಲ್ಲಾ ಚುನಾವಣೆಗಳಲ್ಲೂ ಸ್ಪರ್ಧೆ ನಡೆಯಲಿದ್ದು, ಜಾತಿ ರಾಜಕಾರಣದಿಂದ ಅಭ್ಯರ್ಥಿಗಳ ಸೋಲು ಮತ್ತು ಗೆಲುವು ನಿರ್ಧಾರವಾಗುತ್ತಿದೆ. ಕುರುಬ ಸಮಾಜದ ಬಂಧುಗಳು ಸೇರಿದಂತೆ ಎಲ್ಲಾ ಸಮಾಜದವರು ಅಭಿವೃದ್ಧಿ ಮತ್ತು ಜನಸೇವೆ ಮಾಡುವ ಅಭ್ಯರ್ಥಿಗಳನ್ನು ಆಯ್ಕೆ ಮಾಡಬೇಕೆಂದು ಮನವಿ ಮಾಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಸಚಿವ ಸಂಪುಟದ ಸಹೋದ್ಯೋಗಿಗಳು ಒಬ್ಬೊಬ್ಬರೂ ಒಂದೊಂದು ಹಗರಣದಲ್ಲಿ ಸಿಲುಕಿಕೊಂಡಿದ್ದು ಇದರಿಂದ ಹೊರಬರಲಾರದೆ ಕೇವಲ ವಿರೋಧ ಪಕ್ಷದವರನ್ನು ಟೀಕಿಸುತ್ತಾ ಕಾಲ ಕಳೆಯುವ ಈ ಕಾಂಗ್ರೆಸ್ ಸರ್ಕಾರ ಅತೀ ಹೆಚ್ಚು ಲೂಟಿಯಲ್ಲಿ ತೊಡಗಿದೆ. ರಾಜ್ಯದ ಅಭಿವೃದ್ಧಿ ಕುಂಠಿತಗೊಂಡಿದ್ದು ಒಂದು ಹಿಡಿ ಮಣ್ಣನ್ನು ರಸ್ತೆಗೆ ಹಾಕದ ಸ್ಥಿತಿ ನಿರ್ಮಾಣವಾಗಿದೆ. ತಮ್ಮ ಜೊತೆ ಹೊಗಳು ಭಟ್ಟರನ್ನು ಇಟ್ಟುಕೊಂಡಿರುವ ಮುಖ್ಯಮಂತ್ರಿ ಪಾರದರ್ಶಕ ಆಡಳಿತ ನಡೆಸಲಾಗದೆ ಭ್ರಷ್ಟಾಚಾರಿಗಳ ಜೊತೆ ಶಾಮೀಲಾಗಿ ರಾಜ್ಯವನ್ನು ಸಾಲದ ಸುಳಿಗೆ ಸಿಲುಕಿಸುವುದರ ಜೊತೆಗೆ ಯುವಕರಿಗೆ ಉದ್ಯೋಗವಿಲ್ಲದೆ, ಹೊಸ ಕಾರ್ಯಕ್ರಮಗಳನ್ನು ಜಾರಿಗೆ ತರಲಾಗದೆ ಕೇವಲ ತೋರಿಕೆಗೆ ಸರ್ಕಾರ ನಡೆಸುತ್ತಿದ್ದಾರೆ.

– ಹೆಚ್.ವಿಶ್ವನಾಥ್, ವಿಧಾನಪರಿಷತ್ ಸದಸ್ಯ

ನಕ್ಕರೆ ಅದೇ ಸ್ವರ್ಗ

ಗಂಡ : ಪ್ರಿಯೆ ನಿನಗೋಸ್ಕರ ತಾಜ್‌ಮಹಲ್ ಕಟ್ಟಿಲೆ, ಗೋಲ್‌ಗುಮ್ಮಟ ಕಟ್ಟಿಲೆ.

ಹೆಂಡತಿ : ನಿನ್ನ ಮುಖಕ್ಕೆ ಬೆಂಕಿ ಹಾಕ. ಮೊದಲು ಧರ್ಮಸ್ಥಳ ಸಂಘದ ಸಾಲ ಕಟ್ಟು.

ಮೈಸೂರು ಮಿತ್ರ

ಶನಿವಾರ, 25 ಜನವರಿ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

ಎಲ್ಲಿಯವರೆಗೂ ಉಪಯೋಗಕ್ಕೆ ಬರುತ್ತೀಯೋ ಅಲ್ಲಿಯವರೆಗೂ ಜನರು ನಿನ್ನನ್ನು ಪ್ರೀತಿಸುತ್ತಾರೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಒಬ್ಬರ ಕೂಳು, ಇನ್ನೊಬ್ಬರ ಕುತ್ತು.

ನಿಮ್ಮ ಪತ್ರಗಳು

ನಂಜುಮಳಿಗೆ ವೃತ್ತದ ಬಳಿಯ ಫುಟ್‌ಪಾತ್ ತೆರವುಗೊಳಿಸಿ

ಮಾನ್ಯರೆ,



ಮೈಸೂರಿನ ನಂಜುಮಳಿಗೆ ರಸ್ತೆ ಭಾಗಶಃ ಅಂಗಡಿ ಮಾಲೀಕರಿಂದ ಆವರಿಸಲ್ಪಟ್ಟಿದೆ. ಇಲ್ಲಿ ಎರಡು ವೃತ್ತಗಳಿದ್ದು, ಅಲ್ಲಿ ಈ ಸಮಸ್ಯೆ ಎದುರಾಗಿದೆ. ಎರಡೂ ಕಡೆ ಇರುವ ಅಂಗಡಿ ಮಾಲೀಕರು ಮೊದಲು ಫುಟ್‌ಪಾತ್‌ಗೆ ಬಂದು, ನಂತರ ಅಲ್ಲಿಂದ ರಸ್ತೆಗೂ ವಿಸ್ತರಿಸಿ ವ್ಯಾಪಾರದಲ್ಲಿ ತೊಡಗಿದ್ದಾರೆ. ಇದರಿಂದ ಸಾರ್ವಜನಿಕರು, ಪಾದಚಾರಿಗಳಿಗೆ ತುಂಬಾ ಸಮಸ್ಯೆಯಾಗುತ್ತಿದೆ. ಎಚ್.ಡಿ. ಕೋಟೆಯಿಂದ ಮೈಸೂರಿಗೆ, ಮೈಸೂರಿನಿಂದ ಹೆಚ್.ಡಿ. ಕೋಟೆಗೆ ಸಂಚರಿಸಲು ಇದು ಪ್ರಮುಖ ರಸ್ತೆಯಾಗಿದೆ. ಇವುಗಳ ಜೊತೆಗೆ ಟೆಂಪೋಗಳು, ಕಾರುಗಳು, ದ್ವಿಚಕ್ರ ವಾಹನಗಳು ನಿರಂತರವಾಗಿ ಸಂಚರಿಸುತ್ತವೆ. ಇದರಿಂದ ಸುಗಮ ಸಂಚಾರಕ್ಕೆ ಅಡ್ಡಿಯಾಗುತ್ತಿದೆ. ಪಾದಚಾರಿಗಳು ತಿರುಗಾಡಲು ಫುಟ್‌ಪಾತ್ ಇಲ್ಲದ ಕಾರಣ ರಸ್ತೆಗೆ ಬಂದು ಸಂಚರಿಸುವಂತಾಗಿದೆ. ಹೀಗೆ ಜನರು ಸಂಚರಿಸುವಾಗ ವಾಹನಗಳಿಗೆ ಸುಗಮ ಚಾಲನೆಗೆ ಅಡ್ಡಿ ಉಂಟಾಗಿ, ಅಪಘಾತಗಳು ಸಂಭವಿಸುವುದುಂಟು.

ಹಬ್ಬ ಹರಿದಿನಗಳಲ್ಲಂತೂ ವಾಹನಗಳು ಸಾಲುಗಟ್ಟಿ ನಿಂತು, ದಾರಿ ಇಲ್ಲದೆ ಪರದಾಡುವಂತಾಗಿದೆ. ರಸ್ತೆ ಏನೂ ಕಿರಿದಾಗಿಲ್ಲ. ವಿಶಾಲವಾಗಿಯೇ ಇದೆ. ವ್ಯಾಪಾರಿಗಳು ರಸ್ತೆ ಆಕ್ರಮಿಸಿಕೊಂಡಿರುವುದರಿಂದ ರಸ್ತೆ ಕಿರಿದಾಗಿ ವಾಹನಗಳಿಗೆ ತೊಂದರೆ ಉಂಟಾಗಿದೆ. ಬಡವರು ಫುಟ್‌ಪಾತ್‌ನಲ್ಲಿ ಕುಳಿತು ವ್ಯಾಪಾರ ಮಾಡಿ, ಹೊಟ್ಟೆ ತುಂಬಿಸಿಕೊಳ್ಳುವುದು ಸರಿ. ಆದರೆ ಇಲ್ಲಿನ ಮಳಿಗೆಗಳ ಮಾಲೀಕರೇ ತಮ್ಮ ಅಂಗಡಿಗಳ ಸರಕುಗಳನ್ನು ಫುಟ್‌ಪಾತ್‌ಗೆ ತಂದು ಮಾರುತ್ತಾರೆ. ಅಂಗಡಿಗಳು ಖಾಲಿಯೇ ಇರುತ್ತವೆ. ಇಲ್ಲವೇ ಗೋಡೌನ್‌ಗಳಾಗಿರುತ್ತವೆ. ಸ್ವಂತ ಅಂಗಡಿ ಇದ್ದು ಫುಟ್‌ಪಾತ್‌ಗೆ ಬಂದು ಮಾರುವ ತರಾತುರಿ ಇವರಿಗೇಕೆ? ಇವರಿಗೆ ಈ ರೀತಿಯ ಅವಕಾಶವನ್ನು ಮಾಡಿಕೊಟ್ಟವರು ಯಾರು? ಇದರ ವಿರುದ್ಧ ಅಧಿಕಾರಿಗಳು ಯಾಕೆ ಕ್ರಮ ಜರುಗಿಸಿಲ್ಲ. ರಸ್ತೆಯ ಅಂಚಿನಲ್ಲಿ ಎರಡೂ ಕಡೆ ಯಾಕೆ ಕಬ್ಬಿಣದ ಕಂಬಿಗಳನ್ನು ಅಳವಡಿಸಿಲ್ಲ. ಬೇರೆ ಕಡೆ ಬ್ಯಾರಿಕೇಡ್ ಹಾಕಿ ರಸ್ತೆ ರಕ್ಷಿಸುವವರು ಇಲ್ಲಿ ಯಾಕೆ ಸುಮ್ಮನಿದ್ದಾರೆ. ಹೂ ಮಾರುವ ಮಾಲೀಕರು ಅಂಗಡಿ ಇದ್ದರೂ ಹೊರಗೆ ತಂದು ಮಾರುವುದೇಕೆ? ಇವುಗಳನ್ನು ಗಮನಿಸಿ ಸಂಬಂಧಪಟ್ಟ ಅಧಿಕಾರಿಗಳು ಸೂಕ್ತ ಕ್ರಮ ತೆಗೆದುಕೊಂಡು ಆಗುತ್ತಿರುವ ಸಮಸ್ಯೆಯನ್ನು ತಪ್ಪಿಸಿ, ಪಾದಚಾರಿಗಳಿಗೆ, ವಾಹನಗಳಿಗೆ ರಸ್ತೆಯನ್ನು ತೆರವುಗೊಳಿಸಬೇಕೆಂದು ಈ ಮೂಲಕ ಮನವಿ.

–ಆರ್. ರಂಗಸ್ವಾಮಿ ಶಾಂತಾ, ಅಶೋಕಪುರಂ, ಮೈಸೂರು.

ಶಿಸ್ತಿನ ಪಕ್ಷದಲ್ಲಿ ಸದಾ ಅಶಿಸ್ತು!

ಮಾನ್ಯರೆ,

ಇಷ್ಟು ದಿನ ವಿಜಯೇಂದ್ರ–ಯತ್ನಾಳರ ಅಸಮಾಧಾನದ ಹೊಗೆ ಇರುವಾಗಲೇ, ಈಗ ಶ್ರೀರಾಮುಲು–ರೆಡ್ಡಿ ಕದನ ಕಾದ ಕಬ್ಬಿಣದಂತೆ ಕಾವೇರಿದೆ. ನಮ್ಮದು ಶಿಸ್ತಿನ ಪಕ್ಷ ಎಂದೇಳುವ ರಾಜ್ಯ ಬಿಜೆಪಿ ಪಕ್ಷದಲ್ಲಿ ಅಶಿಸ್ತು ಎಂಬುದು ಮನೆ ಮಾತಾಗಿದೆ. ಈ ಅಶಿಸ್ತನ್ನು ಬಗ್ಗುಬಡಿಯಲು ಬಿಜೆಪಿ ಹೈಕಮಾಂಡ್ ತಡಮಾಡದೇ ತುರ್ತು ಕ್ರಮ ಜರುಗಿಸಬೇಕಿದೆ..!

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

ಅವೈಜ್ಞಾನಿಕವಾಗಿ ದುರ್ಗಾದೇವಿ ಗುಡಿ ರಸ್ತೆ ರಿಪೇರಿ



ಮಾನ್ಯರೆ,

ಮೈಸೂರಿನ ನಜರ್‌ಬಾದ್ ಮೊಹಲ್ಲಾದಲ್ಲಿರುವ ದುರ್ಗಾದೇವಿ ಗುಡಿ ರಸ್ತೆಯನ್ನು ಅವೈಜ್ಞಾನಿಕವಾಗಿ ರಿಪೇರಿ ಮಾಡಲಾಗಿದೆ. ಇದರಿಂದ ನೀರು ರಸ್ತೆಯಲ್ಲೇ ನಿಂತು ಸೊಳ್ಳೆಗಳ ಉತ್ಪತ್ತಿ ತಾಣವಾಗಿದೆ. ಈ ರಸ್ತೆ ರಿಪೇರಿ ಮಾಡುತ್ತೇವೆ ಎಂದು 4 ಜನರು ಬಂದರು. ಆಗ ನಾವು ಮಾಡುವುದಾದರೆ ಹಗ್ಗ, ಟೇಪು ತಂದು ಈಗಿರುವ ಮರಳು, ಗಾರೆ ತೆಗೆದು ಒಂದು ಮಟ್ಟಕ್ಕೆ ಮಾಡಿ ಎಂದು ಹೇಳಿದೆವು. ಆದರೆ ಅವರು ಯಾರ ಮಾತನ್ನು ಕೇಳದೆ ಬೇಕಾಬಿಟ್ಟಿ ಮರಳು, ಸಿಮೆಂಟ್ ಬೆರೆಸಿ ರಸ್ತೆಗೆ ಹಾಕಿದರು. ಆಗ ನಾವು ಗಲಾಟೆ ಮಾಡಿದಾಗ ನಿಮ್ಮ ಇಲಾಖೆಯಿಂದ ಜೆಇ, ಎಇ ಯಾರೂ ನಮಗೆ ಗೊತ್ತಿಲ್ಲ. ಅವರು ಬಂದು ಕೆಲಸ ಮಾಡುವಾಗ ಈ ರೀತಿ ಅಡ್ಡಿಪಡಿಸಬೇಡಿ. ನೀಟಾಗಿ ಮಾಡಿಸಿಕೊಡುತ್ತೇನೆ ಎಂದು ಹೇಳಿ ಹೊರಟು ಹೋದರು. ಆದರೆ ಕೆಲಸಗಾರರು ಅದೇ ರೀತಿ ಕೆಲಸ ಮುಂದುವರೆಸಿ ಬೇಡದೆ ಇರುವ ಕೆಲಸ ಮಾಡಿ ಮನೆಗಳ ನೀರು ಬಂದು ನಿಲ್ಲುವಂತೆ ಮಾಡಿದ್ದಾರೆ. ನೀರು ಸರಾಗವಾಗಿ ಹೋಗದೆ ಸ್ಲಂ ಗಲ್ಲಿ ತರಹ ಆಗಿದೆ. ಸ್ವಲ್ಪ ದಿನ ಹೋಗಲಿ ಸರಿ ಮಾಡಬಹುದು ಎಂದು ನೋಡಿದರೆ ಪಾಲಿಕೆ ಕರ್ಮಚಾರಿಗಳು ವಾರಕ್ಕೆ ಒಂದು ಬಾರಿಯಾದರೂ ಕ್ಲೀನ್ ಮಾಡುವುದಿಲ್ಲ. ಕೇಳಿದರೆ ನಮಗೆ ವಹಿಸಿಲ್ಲ ಎಂದು ಹೇಳುತ್ತಾರೆ. ಮೇಲ್ವಿಚಾರಕ ನಿಂಗರಾಜು ಅವರಿಗೆ ಫೋನ್ ಮಾಡಿದರೆ 2 ದಿನ ಬಿಟ್ಟು ಯಾರನ್ನೋ ಕಳುಹಿಸಿ ಬೇಕಾಬಿಟ್ಟಿ ಕೆಲಸ ಮಾಡಿ ಹೋಗುತ್ತಾರೆ. ಈಗಲು ಅದೇ ಪರಿಸ್ಥಿತಿ ಮುಂದುವರೆದಿದೆ. ಸೊಳ್ಳೆ, ನೊಣ, ಹುಳುಗಳು, ಪಾಚಿ ಎಲ್ಲವೂ ಈ ಗಲ್ಲಿಯಲ್ಲಿದ್ದು, ಓಡಾಡಲು ನಿವಾಸಿಗಳು ಪರದಾಡುವಂತಾಗಿದೆ. ಇದರ ಬಗ್ಗೆ ಸಂಬಂಧಪಟ್ಟ ಜನಪ್ರತಿನಿಧಿಗಳು ಗಮನಹರಿಸಿ ಸಮಸ್ಯೆಯನ್ನು ಪರಿಹರಿಸಬೇಕೆಂದು ಈ ಮೂಲಕ ಮನವಿ.

– ಶ್ರೀಮತಿ ವಸಂತಕುಮಾರಿ, ನಜರ್‌ಬಾದ್, ಮೈಸೂರು.



ರಾಘವೇಂದ್ರ ಸಿ.ಎಸ್.
ಉಪನ್ಯಾಸಕರು
ಶ್ರೀ ರಾಮಕೃಷ್ಣ ವಿದ್ಯಾಶಾಲಾ, ಮೈಸೂರು
ಮೊ: 9036389640


ಈ ಜೀವನ

ಬದುಕು ಬಂದಂತೆ ಬದುಕು...

ಭಗವದ್ಗೀತೆಯಲ್ಲಿ ಒಂದು ಮಾತು ಬರುತ್ತದೆ; ಆಗಿರುವುದು, ಆಗುತ್ತಿರುವುದು, ಆಗಲಿರುವುದು ಒಳ್ಳೆಯದಕ್ಕೆ ಎಂದು. ಇವತ್ತಿನ ಕಲುಷಿತದ ಭಾವ ಪ್ರಪಂಚದಲ್ಲಿ ಒಳ್ಳೆಯದರ ಜೀವನ ಎಲ್ಲಿಯತನಕ, ಸತ್ಯದ ನಿಲುವು ಗಟ್ಟಿಯಾಗಿ ನೆಲೆ ನಿಲ್ಲುವುದು ಎಲ್ಲಿಯವರೆಗೆ; ಈ ಪ್ರಶ್ನೆಗೆ ಉತ್ತರ ಸ್ವಲ್ಪ ಕಷ್ಟ, ಬಲ್ಲವರು ಹೇಳುತ್ತಾರೆ ಒಳ್ಳೆಯವರಿಗೆ ಇದು ಕಾಲವಲ್ಲ ಸರ್... ! ಕಷ್ಟಗಳು ನಮಗೆ ಅಂತನೇ ಹುಡುಕಿಕೊಂಡು ಒಂದರ ಹಿಂದೆ ಮತ್ತೊಂದು ಬರುತ್ತದೆ... ನೋಡಿ ಅವರು ಎಷ್ಟು ಸುಖವಾಗಿ ಇದ್ದಾರೆ, ನಮಗೆ ಮಾತ್ರ ಸುಖ ಅನ್ನುವುದು ಕೈಗೆ ಸಿಗದ ಮರೀಚಿಕೆನೇ ಆಗಿದೆ...!

ನಿರೀಕ್ಷೆಯಂತೆ ಬದುಕಲಾಗದೆ ಜೀವನ ಒಡ್ಡುವ ಪರೀಕ್ಷೆಗಳಲ್ಲಿ ಸತತವಾಗಿ ನೋವು ಉಂಡವರು ಹೇಳಿದ ಮಾತುಗಳನ್ನು ಕೇಳಿದಾಗ ಒಂದು ಕ್ಷಣ ಮನಸ್ಸು ಆಲೋಚನೆಯಲ್ಲಿ ಮುಳುಗಿತು. ನಾನು ಭಗವಂತನನ್ನು ಮನಸಾರೆ ಧ್ಯಾನಿಸುತ್ತೇನೆ. ಭಕ್ತಿ ಕಡಿಮೆ ಇದ್ದರೆ ನಂಬಿಕೆ ಹೆಚ್ಚು. ಆದರೆ ದೇವರನ್ನು ಧ್ಯಾನಿಸುವುದು ಕಷ್ಟ ಕೊಡಬೇಡ ಅಂತ ಕೇಳಿಕೊಳ್ಳಲಿಕ್ಕೆ ಅಲ್ಲ, ಬದಲಿಗೆ ಕಷ್ಟಗಳನ್ನು ಸಹಿಸಿಕೊಳ್ಳುವ ಶಕ್ತಿ–ಸಾಮರ್ಥ್ಯವನ್ನು ದಯಪಾಲಿಸು ಭಗವಂತ ಎಂಬ ಪ್ರಾರ್ಥನೆ ನನ್ನದು. ಅಂತೆಯೇ ಕಷ್ಟಗಳೇ ಕೊನೆಯಲ್ಲ; ಕಷ್ಟಗಳನ್ನು ಇಷ್ಟಗಳಾಗಿ ಮಾಡಿಕೊಳ್ಳುವವನೇ ಜಾಣ ಎಂದು ತಿಳಿದು ಬದುಕಬೇಕು.

ನಾವು ಅಂದುಕೊಂಡ ಹಾಗೆ ಬದುಕಬೇಕು, ಆಸೆ ಪಟ್ಟವುಗಳಲ್ಲಿ ಕೆಲವನ್ನಾದರೂ ಖರೀದಿಸುವ ಸಾಮರ್ಥ್ಯ ನಮಗಿರಬೇಕು ಎಂದು ಅಪೇಕ್ಷಿಸುವುದು ಮನುಷ್ಯನ ಸಹಜ ಗುಣ. ಆದರೆ ಈ ಆಸೆ ಹಗಲುಗನಸಾಗಿಯೇ ಉಳಿಯಬಹುದು. ಇವುಗಳಿಗೆ ಕಾರಣ ಏನಿರಬಹುದು ಎಂದು ಆಲೋಚಿಸಿದಾಗ ಹೊಳೆದ ಉತ್ತರಗಳಿವು, ಅಕ್ಷರ ರೂಪದಿ ದಕ್ಕಿದ ಬರಹವಿದು.



> “ ಬದುಕು ಬಂದಂತೆ ಸ್ವೀಕರಿಸುವ ಗುಣ ನಮ್ಮದಾಗಬೇಕು ಎನ್ನುವುದು ಎಷ್ಟು ಮುಖ್ಯವೋ ಹಾಗೆಯೇ ನಮಗಾಗಿ ನಾವು ಬದುಕಬೇಕು ಎನ್ನುವುದು ಕೂಡ ಅಷ್ಟೇ ಮುಖ್ಯ. ಇದರಲ್ಲಿ ಸ್ವಾರ್ಥವಿದೆ ಎಂದು ಅನ್ನಿಸಬಹುದು. ಆದರೆ, ಮೊದಲು ನಾವು ಬೇರಾಗಬೇಕು, ಆಮೇಲೆ ನಾವು ನೆರಳು ಕೊಡಲು ಸಾಧ್ಯ. ಬೇರಾಗದ ಹೊರತು ನೀಡುವುದೆಲ್ಲಿ ಮರ ನೆಲೆಯನ್ನು. ಜೀವನದುದ್ದಕ್ಕೂ ಬೇರೆಯವರು ಏನೆಂದುಕೊಂಡಾರು? ನಾಲ್ಕು ಜನ ನಾಲ್ಕು ತರ ಮಾತನಾಡುತ್ತಾರೆ ಎಂದು ನಮ್ಮತನವನ್ನು ಬದಿಗೊತ್ತಿ ಮತ್ತೊಬ್ಬರನ್ನು ಮೆಚ್ಚಿಸುವುದರಲ್ಲಿ ನಮ್ಮ ಬದುಕಿನ ಬಹುತೇಕ ಸಮಯವನ್ನು ಕಳೆದುಕೊಳ್ಳುತ್ತೇವೆ. ಜನರನ್ನು ಯಾವುದೇ ಕಾರಣಕ್ಕೂ ಮೆಚ್ಚಿಸಿ ಬಾಳಲು ಸಾಧ್ಯವಿಲ್ಲ. ಯಾರನ್ನೋ ಮೆಚ್ಚಿಸಲು ನಮ್ಮ ಬದುಕನ್ನು ವ್ಯರ್ಥವಾಗಿಡುವುದರ ಬದಲು ನಮಗಾಗಿ ನಾವು ಬದುಕುವುದನ್ನು ಕಲಿತುಕೊಂಡಾಗ ಬೇಸರ, ನೋವು, ಮತ್ಸರದ ಗುಣಗಳು ಇನ್ನಿಲ್ಲವಾಗಿ ಏನೇ ಬಂದರೂ ಅದನ್ನು ಸಮಾನವಾಗಿ ಸ್ವೀಕರಿಸುವ ಗುಣ ನಮ್ಮದಾಗುತ್ತದೆ.

ಕನವರಿಕೆಗಳಿಗಿಂತ ವಾಸ್ತವವನ್ನು ಅರಿತು ಬಾಳೋಣ : ನಮ್ಮ ಬದುಕಿನಲ್ಲಿ ಏನು ದೊರಕಿರುವುದು ಅದನ್ನು ಆನಂದವಾಗಿ ಅನುಭವಿಸುವುದನ್ನು ಬಿಟ್ಟು ಉಳಿದವರ ಬದುಕನ್ನು ನೋಡಿ ಅವರಂತೆ ನಾವಾಗಲಿಲ್ಲ ಅಥವಾ ಅವರಿಗೆ ಸಿಕ್ಕ ಬದುಕು ನಮಗೆ ಸಿಕ್ಕಿಲ್ಲ ಎಂದು ನಮ್ಮ ಜೀವನವನ್ನು ಮತ್ತೊಬ್ಬರ ಜೀವನದೊಂದಿಗೆ ಹೋಲಿಕೆ ಮಾಡಿಕೊಂಡು ದುಃಖಿಸುವ ಮನುಷ್ಯರಿಗೇನು ಕಡಿಮೆ ಇಲ್ಲ. ಪ್ರತಿಯೊಬ್ಬರ ಬದುಕು ವಿಭಿನ್ನ, ಒಬ್ಬರಿಗೆ ಸಿಕ್ಕ ಅವಕಾಶ ನಮಗೂ ಸಿಗಬೇಕು ಅವರಂತೆ ನಾವಾಗಬೇಕು ಎಂಬ ಕನವರಿಕೆಯಲ್ಲಿ ನಮ್ಮ ಜೀವನದ ಬಹುಪಾಲು ಸಮಯವನ್ನು ವ್ಯರ್ಥವಾಗಿ ಕಳೆಯುವ ಕೆಲಸವನ್ನು ಮಾಡುತ್ತೇವೆ. ಇದು ಎಷ್ಟರ ಮಟ್ಟಿಗೆ ಇರುತ್ತದೆ ಎಂದರೆ ವಾಸ್ತವವನ್ನು ಒಪ್ಪಿಕೊಳ್ಳುವ ಯಾವುದೇ ಅವಕಾಶವನ್ನು ನಾವು ಕಂಡುಕೊಳ್ಳಲಾರೆವು. 'ಬಲು ಸುಲಭದಿ ಅನಾಯಾಸದಿ ಸಿಕ್ಕ ಮೇಲೆ ಸ್ವರ್ಗವೂ ಕಹಿ ಸರ್' ಆತ್ಮೀಯ ಸಹೋದ್ಯೋಗಿ ಒಬ್ಬರು ಹೇಳಿದ ಈ ಮಾತು ಇಲ್ಲಿ ಉಲ್ಲೇಖಾರ್ಹವಾದುದು. ದೊರಕುವವರೆಗೆ ಮಾತ್ರ ಅದರ ಮೇಲೆ ವ್ಯಾಮೋಹ, ದೊರೆತ ನಂತರ ಅದು ಕ್ಷಣಿಕವಾಗಿಯೇ ಕಳೆದುಹೋಗುತ್ತದೆ ಎಂಬ ಮಹತ್ವವನ್ನು ಈ ಮಾತು ತಿಳಿಸುತ್ತದೆ. ಈ ಸತ್ಯ ಅರ್ಥವಾದ ದಿನ ನಾವು ಮತ್ತೊಬ್ಬರ ಬದುಕಿನೊಂದಿಗೆ ನಮ್ಮ ಬದುಕನ್ನು ಹೋಲಿಕೆ ಮಾಡಿಕೊಂಡು ಪರಿತಪಿಸುವುದನ್ನು ಬಿಡಬಲ್ಲವೆನಿಸುತ್ತದೆ.

ಪ್ರತಿಯೊಬ್ಬ ವ್ಯಕ್ತಿಗೂ ಅವರದೇ ಆದ ಸಾಮರ್ಥ್ಯ, ಶಕ್ತಿ ಅಡಕವಾಗಿರುತ್ತದೆ. ಅದನ್ನು ಅರ್ಥ ಮಾಡಿಕೊಂಡು ಸದ್ಬಳಕೆ ಮಾಡಿಕೊಳ್ಳುವ ಸಂಖ್ಯೆ ತೀರಾ ಕಡಿಮೆ ಇದೆ. ಬಹುತೇಕ ನಾವೆಲ್ಲ ಚಿಂತಿಸುವ ರೀತಿ ಏನೆಂದರೆ ಹಣ, ಸಂಪತ್ತು, ಆಸ್ತಿ ಅಧಿಕಾರ ಎಲ್ಲವೂ ಸುಲಭವಾಗಿ ನಮಗೆ ದೊರಕಬೇಕು ಎಂದೇ ಅಪೇಕ್ಷೆ ಪಡುತ್ತೇವೆ. ಅದಕ್ಕಾಗಿ ನಾವು ಪಡಬೇಕಾದ ಪರಿಶ್ರಮದ ಬಗ್ಗೆ ಆಲೋಚಿಸುವುದೇ ಇಲ್ಲ. ಎಲ್ಲವೂ ಸುಲಭವಾಗಿ ದೊರಕಬೇಕು ಎಂದು ಅಪೇಕ್ಷೆ ಪಡುವ ನಾವು ಅದರ ಹಿಂದೆ ಪಡಬೇಕಾದ ಪರಿಶ್ರಮದ ಬಗ್ಗೆ ಸ್ವಲ್ಪ ಆಲೋಚಿಸುವುದು ಒಳಿತು.

ವರ್ತಮಾನದಿ ಬದುಕುವುದನ್ನು ಕಲಿಯೋಣ : ಭೂತ ಕಾಲದ ಬಗ್ಗೆ ನೆನಪಿಸಿಕೊಳ್ಳುತ್ತಾ ಭವಿಷ್ಯದ ದಿನಗಳ ಬಗ್ಗೆ ಇನ್ನಿಲ್ಲದ ಆಲೋಚನೆಯನ್ನು ಮಾಡುತ್ತಾ ವರ್ತಮಾನವನ್ನು ಮರೆಯುತ್ತಿದ್ದೇವೆ. ಬದುಕು ಬಂದ ಹಾಗೆ ಸ್ವೀಕರಿಸುವ ಗುಣ ನಾವು ಬೆಳೆಸಿಕೊಳ್ಳದೆ ಹೋದಲ್ಲಿ ಯಾವಾಗಲೂ ಪರಿತಪಿಸುತ್ತಲೇ ಇರಬೇಕಾಗುತ್ತದೆ. ಹಿಂದೆ ಹಾಗೆ ನಡೆದು ಘಟನೆಯನ್ನು ಬದಲಿಸಲು ಸಾಧ್ಯವಿಲ್ಲ ಎಂದು ತಿಳಿದಿದ್ದರೂ ಕೂಡ ಅದನ್ನೇ ಮೆಲುಕು ಹಾಕುವುದು ವ್ಯರ್ಥ, ಇನ್ನು ವರ್ತಮಾನವನ್ನು ಬಿಟ್ಟು ಭವಿಷ್ಯದ ಬಗ್ಗೆ ಇನ್ನಿಲ್ಲದ ಕಾಳಜಿಯನ್ನು ವಹಿಸಿಕೊಳ್ಳುತ್ತಾ ಹೆಚ್ಚು ಹೆಚ್ಚು ಚಿಂತೆ ಮಾಡುತ್ತಾ ಹೋದಂತೆ ಚಿಂತನೀಯ ಸಮಯವನ್ನು ಕಳೆದುಕೊಳ್ಳಬೇಕಾಗುತ್ತದೆ. ಇದರರ್ಥ ಭವಿಷ್ಯದ ಬಗ್ಗೆ ಚಿಂತಿಸಬೇಡಿ ಎಂದಲ್ಲ. ಭವಿಷ್ಯದ ಬಗ್ಗೆ ಇನ್ನಿಲ್ಲದ ಆಲೋಚನೆಗಳನ್ನ ಮಾಡುತ್ತ ವರ್ತಮಾನವನ್ನು ಕಳೆದುಕೊಳ್ಳಬೇಡಿ. ಸರಿಯಾದ ಆಲೋಚನೆ, ಕ್ರಮಬದ್ಧವಾದ ಜೀವನ ಎಂದಿಗೂ ಸಂತಸವನ್ನು ನೀಡಬಲ್ಲದು. ಭವಿಷ್ಯದ ಬಗ್ಗೆ ಅತಿಯಾಗಿ ಯೋಚನೆ ಮಾಡದೆ ಸರಿಯಾಗಿ ಯೋಜನೆ ಮಾಡಿದರೆ ಭವಿಷ್ಯವು ಸುಂದರವಾಗಿ ಇರಬಲ್ಲದು. ಬದುಕು ನಶ್ವರವಾದದ್ದು ಎಂದು ತಿಳಿದಿದ್ದರೂ ಪರಿತಪಿಸುವ ನಾವು ವರ್ತಮಾನದಲ್ಲಿ ಈಗ ಏನಿರುವುದೋ ಅದರಲ್ಲಿಯೇ ಸಂತೋಷವನ್ನು ಪಡುವುದನ್ನು ಕಲಿಯಬೇಕಾಗುತ್ತದೆ. ಎಲ್ಲವನ್ನು ಭವಿಷ್ಯದ ದೃಷ್ಟಿಯಿಂದಲೇ ನೋಡುತ್ತಾ ಹೋದರೆ ಈ ಕ್ಷಣ, ಈ ದಿನ ಮತ್ತೆ ಮರಳಿ ಬರಲಾರದು. ನಾಳೆ ಎಂಬುದು ಕನಸು ಈ ಕ್ಷಣ ಅನ್ನುವುದು ಸತ್ಯ. ಕನಸು ಕಾಣುತ್ತಾ ಸತ್ಯವನ್ನು ಮರೆಯಬಾರದು. ನಮಗೆ ಸಿಕ್ಕಿರುವ ಈ ಬದುಕು ಮತ್ತೊಬ್ಬರಿಗೆ ಕನಸಾಗಿರಬಹುದು ಹಾಗಾಗಿ ಈ ಸುಂದರ ಬದುಕನ್ನು ವರ್ತಮಾನದಲ್ಲಿಯೇ ಅನುಭವಿಸುವ ಕ್ಷಣ ನಮ್ಮದಾಗಬೇಕು.

ತಾಳ್ಮೆ, ಧೈರ್ಯ, ಆತ್ಮವಿಶ್ವಾಸ ಪ್ರಧಾನವಾದುದು : ಬದಲಾವಣೆ ಜಗದ ನಿಯಮ ಪ್ರತಿಯೊಬ್ಬರ ಬದುಕು ಒಂದು ಸಮಯದಲ್ಲಿ ಇದ್ದಂತೆ ಮತ್ತೊಂದು ಸಮಯದಲ್ಲಿ ಇರುವುದಿಲ್ಲ. ಪ್ರಸ್ತುತ ಸನ್ನಿವೇಶ ಹೇಗಿದೆ ಎಂದರೆ ಆಸೆ ಪಟ್ಟಿದ್ದೆಲ್ಲ ಕ್ಷಣಮಾತ್ರದಲ್ಲಿ ದೊರಕಬೇಕು. ಆದರೆ ಬದುಕು ಎಲ್ಲವನ್ನು ಸಕಾಲದಲ್ಲಿ ಒದಗಿಸಲಾರದು. ನಮ್ಮ ಕೆಲಸವನ್ನು ನಾವು ಪ್ರಾಮಾಣಿಕವಾಗಿ ಮಾಡುತ್ತಾ ಹೋದರೆ ಏನೇ ಕಷ್ಟಗಳು ಎದುರಾದರೂ ಧೈರ್ಯದಿಂದ ಮುನ್ನುಗ್ಗುವ ಛಲ ನಮ್ಮಲ್ಲಿ ಇದ್ದರೆ, ಸೋಲು ಗೆಲುವುಗಳನ್ನು ಸಮಾನವಾಗಿ ಸ್ವೀಕರಿಸುವ ತಾಳ್ಮೆ, ಆತ್ಮವಿಶ್ವಾಸ ನಮಗಿದ್ದರೆ ನಿಜಕ್ಕೂ ಏನು ಬೇಕಾದರೂ ಸಾಧಿಸಲು ಸಾಧ್ಯವಿದೆ.

ಆಗುವುದನ್ನು ತಪ್ಪಿಸಲು ಸಾಧ್ಯವಿಲ್ಲ : ಕೆಲವೊಮ್ಮೆ ಆಗುವುದನ್ನು ಯಾರಿಂದಲೂ ಯಾವುದೇ ಕಾರಣದಿಂದಲೂ ತಪ್ಪಿಸಲು ಸಾಧ್ಯವಿಲ್ಲ. ಏನು ನಡೆಯಬೇಕೆಂಬುದು ನಿರ್ಧಾರವಾಗಿರುತ್ತದೆಯೋ ಅದು ನಡೆದೇ ತೀರುತ್ತದೆ. ಬದುಕಿನ ಈ ವಾಸ್ತವತೆಯನ್ನು ಮೊದಲು ನಾವು ಅರಿತುಕೊಂಡರೆ ಒಳಿತು. ಈ ವಾಸ್ತವದ ಸತ್ಯ ಪರಿವಾರ ದಿನ ಬದುಕಿನಲ್ಲಿ ಎಂತಹ ಸನ್ನಿವೇಶ ಬಂದರು ಅಚಲವಾಗಿ ನಿಂತು ಅದನ್ನು ಎದುರಿಸಲು ಸಾಧ್ಯವಿದೆ. ಏಕೆಂದರೆ ಆಗುವುದನ್ನು ತಪ್ಪಿಸಲು ಯಾರಿಂದಲೂ ಯಾವುದೇ ಕಾರಣದಿಂದಲೂ ಸಾಧ್ಯವಾಗುವುದಿಲ್ಲ. ನನಗೆ ಇದನ್ನು ಹೇಳುವಾಗ ಹಿಂದೊಮ್ಮೆ ಓದಿದ್ದ ಹಾಸ್ಯ ಸನ್ನಿವೇಶ ಒಂದು ನೆನಪಿಗೆ ಬರುತ್ತಿದೆ?

ಸನ್ನಿವೇಶ : ಭೂಲೋಕದಲ್ಲಿ ಯಮನನ್ನು ಪೂಜಿಸುತ್ತಿದ್ದ ಭಕ್ತನೊಬ್ಬನ ಆಯಸ್ಸು ಮುಗಿದಿರುತ್ತದೆ. ಅವನನ್ನು ಕರೆದೊಯ್ಯಲು ಸಾಕ್ಷಾತ್ ಯಮಧರ್ಮರಾಯನೇ ಬರುತ್ತಾನೆ. ಯಮ ಭಕ್ತನ ಮುಂದೆ ಬಂದು ನೋಡಪ್ಪಾ, ನಿನ್ನ ಆಯಸ್ಸು ಈ ದಿನಕ್ಕೆ ಮುಕ್ತಾಯಗೊಂಡಿದೆ ಎಂದು ಈ ಪುಸ್ತಕದಲ್ಲಿ ಬರೆದಿದೆ.ಹಾಗಾಗಿ ನನ್ನೊಂದಿಗೆ ನೀನು ಬರಬೇಕು ಎಂದು ಹೇಳಿತ್ತಾನೆ. ಭಕ್ತನಿಗೆ ಇಷ್ಟು ಬೇಗ ಸಾಯಲು ಇಷ್ಟ ಇಲ್ಲ. ಅದಕ್ಕಾಗಿ ಅವನು ಉಪಾಯವೊಂದನ್ನು ಮಾಡುತ್ತಾನೆ. ಬಂದಂತಹ ಯಮಧರ್ಮರಾಯನಿಗೆ ನಾನು ನಿನ್ನ ಭಕ್ತನಾಗಿರುವುದರಿಂದ ನಾನು ಮಾಡುವ ಚಹಾವನ್ನು ಕುಡಿದು ನಂತರ ತನ್ನನ್ನು ಕರೆದೊಯ್ಯಬೇಕೆಂದು ಬೇಡಿಕೊಳ್ಳುತ್ತಾನೆ. ಭಕ್ತನ ಮಾತನ್ನು ಮೀರಲಾಗದೆ ಯಮ ಇದಕ್ಕೆ ಒಪ್ಪಿಕೊಳ್ಳುತ್ತಾನೆ. ಭಕ್ತ ಚಹವನ್ನು ಸಿದ್ಧಪಡಿಸಿ, ಒಂದೆರಡು ನಿದ್ರೆ ಮಾತುಗಳನ್ನು ಅದರೊಂದಿಗೆ ಮಿಶ್ರಣ ಮಾಡಿ ಯಮನಿಗೆ ಸೇವಿಸಲು ನೀಡುತ್ತಾನೆ. ಚಹವನ್ನು ಸೇವಿಸಿದ ಯಮಧರ್ಮರಾಯ ನಿದ್ರೆಗೆ ಜಾರುತ್ತಾನೆ. ತಕ್ಷಣವೇ ಭಕ್ತ ಯಮಧರ್ಮರಾಯನ ಕೈಯಲ್ಲಿದ್ದ ಪುಸ್ತಕ ತೆಗೆದುಕೊಂಡು ಕೊನೆಯ ಪುಟದ ಕೊನೆಯಲ್ಲಿ ತನ್ನ ಹೆಸರನ್ನು ಬರೆಯುತ್ತಾನೆ. ಯಮ ಎಚ್ಚರಗೊಂಡಾಗ ತನ್ನ ಹೆಸರನ್ನು ತೋರಿಸು ಎಂದು ಹೇಳಿ ಆ ಮೂಲಕ ತಾನು ತಪ್ಪಿಸಿಕೊಳ್ಳಬಹುದು ಎಂಬ ಆಲೋಚನೆ ಆತನದು. ನಿದ್ದೆಯಿಂದ ಎದ್ದ ಧರ್ಮರಾಯ ತನ್ನ ಭಕ್ತನಿಗೆ ಈ ರೀತಿ ಹೇಳುತ್ತಾನೆ. ನನ್ನ ಕಾರ್ಯದೊತ್ತಡದಲ್ಲಿ ನೆಮ್ಮದಿಯಾಗಿ ನಿದ್ರಿಸುವುದನ್ನೆ ಮರೆತಿದ್ದ ನನಗೆ ನೀನು ಕೊಟ್ಟ ಚಹಾ ಸೇವಿಸಿದ ಮೇಲೆ ಆರಾಮಾದಾಯಕವಾಗಿ ನಿದ್ರಿಸುವಂತಾಯಿತು. ಹಾಗಾಗಿ ನಿನಗೊಂದು ಅವಕಾಶವನ್ನು ನಾನು ನೀಡುವೆ. ನಾನು ಈ ಪುಸ್ತಕದ ಕೊನೆಯಿಂದ ಇರುವವರನ್ನು ನನ್ನೊಂದಿಗೆ ಕರೆದ್ಯೊಯುವೆ ಎಂದ ನಂತೆ... (ಕೊನೆಯಲ್ಲಿ ಇರುವ ಹೆಸರು ಆ ಭಕ್ತನದೇ ಆಗಿತ್ತಲ್ಲವೇ...!)

ಸನ್ನಿವೇಶದಲ್ಲಿ ಉತ್ಪ್ರೇಕ್ಷೆ ,ಅತಿಶಯಗಳೇನೇ ಇದ್ದರೂ ಅದು ನೀಡುವ ಸಂದೇಶ ಪ್ರಮುಖವಾದದ್ದು. ಜೀವನದಲ್ಲಿ ಆಗುವುದನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ. ನಡೆಯಲೇಬೇಕು ಎಂಬುದನ್ನು ತಿಳಿಸುವ ಈ ಸನ್ನಿವೇಶ ಬದುಕಿನಲ್ಲಿ ಎಂತಹ ಸನ್ನಿವೇಶಗಳು ಒಂದರ ಹಿಂದೆ ಮತ್ತೊಂದರಂತೆ ಮುನ್ನುಗ್ಗಿ ಬಂದರೂ ಅವುಗಳನ್ನು ಮೆಟ್ಟಿ ಮುನ್ನುಗ್ಗಬೇಕೆಂಬ ಸತ್ಯವನ್ನು ತಿಳಿಸುತ್ತದೆ.


ನಮಗಾಗಿ ನಾವು ಬದುಕಬೇಕು : ಬದುಕು ಬಂದಂತೆ ಸ್ವೀಕರಿಸುವ ಗುಣ ನಮ್ಮದಾಗಬೇಕು ಎನ್ನುವುದು ಎಷ್ಟು ಮುಖ್ಯವೋ ಹಾಗೆಯೇ ನಮಗಾಗಿ ನಾವು ಬದುಕಬೇಕು ಎನ್ನುವುದು ಕೂಡ ಅಷ್ಟೇ ಮುಖ್ಯ. ಇದರಲ್ಲಿ ಸ್ವಾರ್ಥವಿದೆ ಎಂದು ಅನ್ನಿಸಬಹುದು. ಆದರೆ, ಮೊದಲು ನಾವು ಬೇರಾಗಬೇಕು, ಆಮೇಲೆ ನಾವು ನೆರಳು ಕೊಡಲು ಸಾಧ್ಯ. ಬೇರಾಗದ ಹೊರತು ನೀಡುವುದೆಲ್ಲಿ ಮರ ನೆಲೆಯನ್ನು. ಜೀವನದುದ್ದಕ್ಕೂ ಬೇರೆಯವರು ಏನೆಂದುಕೊಂಡಾರು? ನಾಲ್ಕು ಜನ ನಾಲ್ಕು ತರ ಮಾತನಾಡುತ್ತಾರೆ ಎಂದು ನಮ್ಮತನವನ್ನು ಬದಿಗೊತ್ತಿ ಮತ್ತೊಬ್ಬರನ್ನು ಮೆಚ್ಚಿಸುವುದರಲ್ಲಿ ನಮ್ಮ ಬದುಕಿನ ಬಹುತೇಕ ಸಮಯವನ್ನು ಕಳೆದುಕೊಳ್ಳುತ್ತೇವೆ. ಜನರನ್ನು ಯಾವುದೇ ಕಾರಣಕ್ಕೂ ಮೆಚ್ಚಿಸಿ ಬಾಳಲು ಸಾಧ್ಯವಿಲ್ಲ. ಯಾರನ್ನೋ ಮೆಚ್ಚಿಸಲು ನಮ್ಮ ಬದುಕನ್ನು ವ್ಯರ್ಥವಾಗಿಡುವುದರ ಬದಲು ನಮಗಾಗಿ ನಾವು ಬದುಕುವುದನ್ನು ಕಲಿತುಕೊಂಡಾಗ ಬೇಸರ, ನೋವು, ಮತ್ಸರದ ಗುಣಗಳು ಇನ್ನಿಲ್ಲವಾಗಿ ಏನೇ ಬಂದರೂ ಅದನ್ನು ಸಮಾನವಾಗಿ ಸ್ವೀಕರಿಸುವ ಗುಣ ನಮ್ಮದಾಗುತ್ತದೆ.

ಯಾರನ್ನೋ ಓಲೈಸುವ, ಯಾರಿಗಾಗಿಯೋ ಬದುಕುವ, ನಮ್ಮ ಬದುಕನ್ನು ಬೇರೆಯವರ ನೆಲೆಯಲ್ಲಿ ನಿಂತು ಹೋಲಿಕೆ ಮಾಡಿಕೊಂಡು ಬದುಕುವುದಕ್ಕಿಂತ ವಾಸ್ತವ ಸನ್ನಿವೇಶಗಳನ್ನು ಅರ್ಥಮಾಡಿಕೊಂಡು ಬದುಕು ಬಂದಂತೆ ಅದನ್ನು ಸ್ವೀಕರಿಸುತ್ತಾ, ನೆಮ್ಮದಿಯಿಂದ ಬದುಕುವುದನ್ನು, ವರ್ತಮಾನದಲ್ಲಿಯೇ ಸಂತಸದಿಂದ ಬಾಳುವುದನ್ನು ಕಲಿತುಕೊಂಡರೆ ಸಮೃದ್ಧ ಜೀವನವನ್ನು ಅನುಭವಿಸಲು ಸಾಧ್ಯ. ಕೊನೆಗೂ ನಮ್ಮ ಬದುಕನ್ನು ಸುಂದರವಾಗಿಸಿಕೊಳ್ಳುವುದಕ್ಕೆ ಬದುಕು ಬಂದಂತೆ ಸ್ವೀಕರಿಸಿ ಸಮರ್ಪಕವಾಗಿ ಬಾಳಿದರೆ ಅನುಗಾಲ ಬದುಕು ಜೀವಂತವಾಗಿರುತ್ತದೆ.

ನಾಲ್ಕು ವಿಧೇಯಕಗಳಿಗೆ ಅನುಮೋದನೆ ನೀಡದೆ ವಾಪಸ್ ಕಳುಹಿಸಿದ ರಾಜ್ಯಪಾಲರು

ಬೆಂಗಳೂರು, ಜ.24– ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಮುಜರಾಯಿ ವಿಧೇಯಕ ಸೇರಿದಂತೆ ನಾಲ್ಕು ವಿಧೇಯಕಗಳಿಗೆ ಅನುಮೋದನೆ ನೀಡದೆ ರಾಜ್ಯಪಾಲರು ವಾಪಸ್ ಕಳುಹಿಸಿದ್ದಾರೆ. ಈ ಮೂಲಕ ರಾಜ್ಯ ಸರ್ಕಾರ ಹಾಗೂ ರಾಜ್ಯಪಾಲರ ನಡುವಿನ ಶೀತಲ ಸಮರ ಮತ್ತೆ ಮುಂದುವರೆದಿದೆ.

ಗ್ರಾಮೀಣಾಭಿವೃದ್ಧಿ ವಿಶ್ವವಿದ್ಯಾಲಯದ ಕುಲಾಧಿಪತಿ ಹುದ್ದೆಯಿಂದ ರಾಜ್ಯಪಾಲರಿಗೆ ಕೊಕ್ ನೀಡಿ, ಸಿಎಂಗೆ ಅಧಿಕಾರ ವರ್ಗಾಯಿಸುವ ಕಾನೂನು ತಿದ್ದುಪಡಿ ವಿಧೇಯಕಕ್ಕೆ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಇನ್ನೂ ಒಪ್ಪಿಗೆ ನೀಡಿಲ್ಲ.



ಗೆಹ್ಲೋಟ್

ಪ್ರತಿಪಕ್ಷಗಳ ವಿರೋಧದ ನಡುವೆಯೂ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತಿ ರಾಜ್ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ –2024 ಬೆಳಗಾವಿ ಅಧಿವೇಶನದಲ್ಲಿ ಪಾಸ್ ಆಗಿತ್ತು. ಈ ವಿಧೇಯಕವೂ ಒಳಗೊಂಡು ಒಟ್ಟು 9 ವಿಧೇಯಕಗಳಿಗೆ ರಾಜಭವನ ಇನ್ನೂ ಅನುಮೋದನೆ ನೀಡಿಲ್ಲ.

ಮುಡಾ ಸಾಂಸ್ಥಿಕ ವ್ಯವಸ್ಥೆಯಲ್ಲಿ ಮಾರ್ಪಾಟು ಮಾಡುವ 'ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ವಿಧೇಯಕ –2024', ರಾಜ್ಯ ವಿಶ್ವವಿದ್ಯಾಲಯಗಳ ತಿದ್ದುಪಡಿ ವಿಧೇಯಕ ಹಾಗೂ ಚಾಣಕ್ಯ ವಿ.ವಿ. ಆಡಳಿತ ಮಂಡಳಿಗೆ ಸರಕಾರದ ಪ್ರತಿನಿಧಿ ನೇಮಕ ಮಾಡುವ ಸಂಬಂಧ ಕಾನೂನು ತಿದ್ದುಪಡಿ ವಿಧೇಯಕಕ್ಕೂ ರಾಜ್ಯಪಾಲರು ಇನ್ನೂ ಅಂಕಿತ ಹಾಕಿಲ್ಲ.

ಬೆಳಗಾವಿಯ ಚಳಿಗಾಲದ ಅಧಿವೇಶನದಲ್ಲಿ ಮಂಡನೆಯಾಗಿದ್ದ ಕರ್ನಾಟಕ ಮಿನರಲ್ಸ್ ಹಕ್ಕು ಮತ್ತು ಬೇರಿಂಗ್ ಲ್ಯಾಂಡ್ ಟ್ಯಾಕ್ಸ್ ಬಿಲ್ 2024, ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಮುಜರಾಯಿ ವಿಧೇಯಕ 2024, ಕರ್ನಾಟಕ ಸಹಕಾರಿ ಸೊಸೈಟಿಗಳ ತಿದ್ದುಪಡಿ ವಿಧೇಯಕ 2024 ಮತ್ತು ಗದಗ–ಬೆಟಗೇರಿ ವ್ಯಾಪಾರ, ಸಂಸ್ಕೃತಿ ಮತ್ತು ವಸ್ತು ಪ್ರದರ್ಶನ ಪ್ರಾಧಿಕಾರ ವಿಧೇಯಕ 2024 ಅಂಗೀಕಾರವಾಗಿತ್ತು. ಅನುಮೋದನೆಗಾಗಿ ರಾಜ್ಯಪಾಲರ ಕಚೇರಿಗೆ ಕಳುಹಿಸಲಾಗಿತ್ತು. ಆದರೆ, ವಿಧೇಯಕದ ಬಗ್ಗೆ ಸ್ಪಷ್ಟನೆ ಕೋರಿ ರಾಜ್ಯಪಾಲರು ರಾಜ್ಯ ಸರ್ಕಾರಕ್ಕೆ ವಾಪಸ್ಸು ಕಳುಹಿಸಿದ್ದಾರೆ ಎಂದು ತಿಳಿದುಬಂದಿದೆ. ರಾಜ್ಯಪಾಲರ ನಡೆಯಿಂದ ಆಕ್ರೋಶಗೊಂಡಿರುವ ರಾಜ್ಯ ಸರ್ಕಾರ ಕಾನೂನು ಹೋರಾಟ ನಡೆಸಲು ಮುಂದಾಗಿದೆ.

ಕಲೆಗಳ ಮೂಲಕ ಮಕ್ಕಳು ತಮ್ಮತನ ಬೆಳೆಸಿಕೊಳ್ಳಲು ಸಾಧ್ಯ

ಹಿರಿಯ ಸುಗಮ ಸಂಗೀತ ಗಾಯಕ ಪ್ರೊ.ಎಸ್.ಮಲ್ಲಣ್ಣ ಅಭಿಮತ

ಮೈಸೂರು, ಜ.24(ಎಸ್‌ಪಿಎನ್)– ಜಾನಪದ ಕಲೆಗಳ ಉಳಿವಿಗೆ ಪ್ರತಿಯೊಬ್ಬರು ಶ್ರಮಿಸಬೇಕು. ಈ ಕಲೆಗಳಲ್ಲಿ ತೊಡಗಿಸಿಕೊಳ್ಳುವ ಮಕ್ಕಳು ತಮ್ಮತನ ಬೆಳೆಸಿಕೊಳ್ಳಲು ಸಾಧ್ಯವಿದೆ ಎಂದು ಹಿರಿಯ ಸುಗಮ ಸಂಗೀತ ಗಾಯಕ ಪ್ರೊ.ಎಸ್.ಮಲ್ಲಣ್ಣ ಅಭಿಪ್ರಾಯಪಟ್ಟರು.

ಮೈಸೂರು ನ್ಯೂ ಕಾಂತರಾಜಅರಸ್ ರಸ್ತೆಯ ಆದಿಶಕ್ತಿ ಬಂದಂತಮ್ಮ, ಶ್ರೀ ಕಾಳಮ್ಮ ದೇವಸ್ಥಾನದ ಆವರಣದಲ್ಲಿ ಮೈಸೂರು ಮಲ್ಲಿಗೆ ಸಾಂಸ್ಕೃತಿಕ ಟ್ರಸ್ಟ್ ಹಾಗೂ ಬೆಂಗಳೂರಿನ ಕನ್ನಡ ಮತ್ತು ಸಂಸ್ಕೃತಿಯ ಇಲಾಖೆ ಸಹಯೋಗದೊಂದಿಗೆ ಆಯೋಜಿಸಿದ್ದ ಜನಪದ, ಭಜನೆ, ವಚನ ಹಾಗೂ ಸುಗಮ ಸಂಗೀತ ಗಾಯನ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.



ಜನಪದ, ಭಜನೆ, ವಚನ ಹಾಗೂ ಸುಗಮ ಸಂಗೀತ ಗಾಯನ ಕಾರ್ಯಕ್ರಮವನ್ನು ಹಿರಿಯ ಸುಗಮ ಸಂಗೀತ ಗಾಯಕ ಪ್ರೊ.ಎಸ್.ಮಲ್ಲಣ್ಣ ಉದ್ಘಾಟಿಸಿದರು.

ನಗರೀಕರಣ ಹೆಸರಿನಲ್ಲಿ ದೇಶಿಯ ಕಲೆಗಳು ಮರೆಯಾಗುತ್ತಿದ್ದು, ಇದನ್ನು ಉಳಿಸುವ ನಿಟ್ಟಿನಲ್ಲಿ ಇಂತಹ ಕಾರ್ಯಕ್ರಮಗಳ ಆಯೋಜನೆ ಅವಶ್ಯ ಅಲ್ಲದೆ, ಗ್ರಾಮೀಣ ಪ್ರದೇಶದಲ್ಲಿ ಎಲೆ ಮರೆಕಾಯಿಯಂತೆ ಜಾನಪದ ಕಲೆಗಳನ್ನು ಉಳಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿರುವ ಕಲಾವಿದರನ್ನು ಮುಖ್ಯವಾಹಿನಿಗೆ ತರಬೇಕು. ಇದಕ್ಕೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸಂಘ–ಸಂಸ್ಥೆಗಳೊಂದಿಗೆ ಕೈಜೋಡಿಸಬೇಕು ಎಂದು ಒತ್ತಾಯಿಸಿದರು.

ಗ್ರಾಮೀಣ ಪ್ರದೇಶಗಳಲ್ಲಿ ಜಾನಪದ ಕಲೆಗಳ ಪ್ರದರ್ಶನಕ್ಕೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ. ಅದರಂತೆ ಮೈಸೂರಿನಲ್ಲಿ ಎಲ್ಲಾ ಪ್ರಾಕಾರಗಳ ಕಲೆಗಳಿಗೂ ಪ್ರೇಕ್ಷಕರು ಪ್ರೋತ್ಸಾಹಿಸುತ್ತಾರೆ ಎಂದ ಅವರು, ಜಾನಪದ ಸೊಗಡು ಇಂದಿನ ವಿದ್ಯಾರ್ಥಿಗಳಲ್ಲಿ ಮರೆಯಾಗುತ್ತಿದ್ದು, ಜಾನಪದ ಕಲೆಗಳನ್ನು ಮುಂದಿನ ಪೀಳಿಗೆಗೂ ಪರಿಚಯಿಸುವ ಕೆಲಸವಾಗಬೇಕು ಎಂದರು.

ವೇದಿಕೆಯಲ್ಲಿ ಮರಿಮಲ್ಲಪ್ಪ ಪಿಯು ಕಾಲೇಜಿನ ಶೈಕ್ಷಣಿಕ ಅಧಿಕಾರಿ ಮಂಗಳಾ ಮುದ್ದುಮಾದಪ್ಪ ಶ್ರೀ ಆದಿಶಕ್ತಿ, ಶ್ರೀ ಬಂದಂತಮ್ಮ, ಶ್ರೀ ಕಾಳಮ್ಮ ದೇವಸ್ಥಾನ ಸಮಿತಿ ಅಧ್ಯಕ್ಷ ಎಸ್.ಬಾಲು, ಕಾರ್ಯದರ್ಶಿ ಡಿ. ರಮೇಶ್, ನಿವೃತ್ತ ಶಿಕ್ಷಕ ಕೆ.ಆರ್.ನಟ ರಾಜು, ನಂಜನಗೂಡು ತಾಲೂಕು ಹುರಾ ಹಿರಿಯ ಸರ್ಕಾರಿ ಪ್ರಾಥಮಿಕ ಶಾಲೆಯ ಸಹಶಿಕ್ಷಕ ಹೆಚ್.ವಿ.ವೀರಭದ್ರಪ್ಪ ಇತರರಿದ್ದರು.

ಇದಕ್ಕೂ ಮುನ್ನ ಜಾನಪದ ಕಲಾವಿದ ಕಿರಗುಂದ ಶ್ರೀನಿವಾಸ್ ಮತ್ತು ತಂಡ, ಆರ್.ರಘು ಮತ್ತು ತಂಡ, ಸಿದ್ದರಾಜು ರಾಂಪುರ, ನಿಂಗರಾಜು ಅವರು ವಿವಿಧ ಜಾನಪದ ಗೀತೆಗಳನ್ನು ಹಾಡಿದರು. ನಂತರ ಕ್ಯಾತಮಾರನಹಳ್ಳಿಯ ಶೇಷಾದ್ರಿ ಮತ್ತು ತಂಡ, ನಂದಿನಿ ಮತ್ತು ತಂಡದ ಭಜನ್ ಹಾಡಿದರು. ನಂದಿನಿ ಮತ್ತು ತಂಡ, ಪುಷ್ಪಲತಾ, ನೀಲ, ಬಾನುದೀಪ ತಂಡದಿಂದ ವಚನ ಗಾಯನ ನಡೆಸಿಕೊಟ್ಟರು. ನಂತರ ಗಾಯಕರಾದ ಎಲ್.ಬಿ.ಚನ್ನಬಸಪ್ಪ, ಮಂಜುಳಾ, ಲಲಿತ ಪಾಟೀಲ್, ನಾಗರತ್ನ, ನಯನ ಅವರಿಂದ ಸುಗಮ ಸಂಗೀತ ಗಾಯನ ನಡೆಸಿಕೊಟ್ಟರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581/1980 E-mail address: mysoorumithra@gmail.com For advertisements: mysoorumithra@gmail.com

ಮುಖಂಡರ ಆರೋಗ್ಯ ವಿಚಾರಿಸಿದ ಕುಮಾರಸ್ವಾಮಿ



ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಅನಾರೋಗ್ಯದಿಂದ ಬಳಲುತ್ತಿರುವ ಜಿಪಂ ಮಾಜಿ ಅಧ್ಯಕ್ಷ ಎಂ.ಪಿ.ನಾಗರಾಜು(ಹೆಚ್.ಡಿ.ಕೋಟೆ ಶಾಸಕರಾಗಿದ್ದ ಎಂ.ಪಿ.ವೆಂಕಟೇಶ್ ಸಹೋದರ) ಅವರ ಶಾರದಾದೇವಿನಗರ ನಿವಾಸಕ್ಕೆ ಭೇಟಿ ನೀಡಿ, ಅವರ ಆರೋಗ್ಯ ವಿಚಾರಿಸಿದರು. ಈ ವೇಳೆ ಮಾಜಿ ಸಚಿವ ವೆಂಕಟರಾವ್ ನಾಡಗೌಡ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸುರೇಶ್ ಬಾಬು, ಶಾಸಕ ಜಿ.ಡಿ.ಹರೀಶ್‌ಗೌಡ, ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ಮಾಜಿ ಶಾಸಕ ಕೆ.ಮಹದೇವ್ ಮತ್ತಿತರರಿದ್ದರು.

ಪಕ್ಷ ಸಂಘಟನೆಗಿಳಿದ ಕೇಂದ್ರ ಸಚಿವ ಕುಮಾರಸ್ವಾಮಿ

ಹೆಚ್.ಡಿ.ಕೋಟೆ ಮುಖಂಡರೊಂದಿಗೆ ಸಭೆ; ಬಿಜೆಪಿ ಮುಖಂಡ ಕೃಷ್ಣನಾಯಕ್ ಜೆಡಿಎಸ್‌ಗೆ ಕರೆತರುವ ಯತ್ನ



ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅಧ್ಯಕ್ಷತೆಯಲ್ಲಿ ಹೆಚ್.ಡಿ.ಕೋಟೆ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಮುಖಂಡರ ಸಭೆ ಮೈಸೂರಿನಲ್ಲಿ ಶುಕ್ರವಾರ ಸಂಜೆ ನಡೆಯಿತು.

ಮೈಸೂರು, ಜ.24(ಎಸ್‌ಬಿಡಿ)– ಮುಂದಿನ ವಿಧಾನಸಭೆ ಸಾರ್ವತ್ರಿಕ ಚುನಾವಣೆಗೆ ಜೆಡಿಎಸ್ ಈಗಿನಿಂದಲೇ ತಯಾರಿ ಆರಂಭಿಸಿದ್ದು, ಪಕ್ಷದ ರಾಜ್ಯಾಧ್ಯಕ್ಷರೂ ಆದ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಮೈಸೂರಿನಲ್ಲಿ ಶುಕ್ರವಾರ ಹೆಚ್.ಡಿ.ಕೋಟೆ ಕ್ಷೇತ್ರದ ಮುಖಂಡರೊಂದಿಗೆ ಸಭೆ ನಡೆಸಿದ್ದಾರೆ.

ನಗರದ ದಟ್ಟಗಳ್ಳಿ ರಿಂಗ್ ರಸ್ತೆಯಲ್ಲಿರುವ ಸಾ.ರಾ. ಕನ್ವೆನ್ಷನಲ್ ಹಾಲ್‌ನಲ್ಲಿ ಪಕ್ಷದ ಹಿರಿಯ ಮುಖಂಡರು ಹಾಗೂ ಹೆಚ್.ಡಿ.ಕೋಟೆ ಕ್ಷೇತ್ರದ ಮುಖಂಡರೊಂದಿಗೆ ಸಭೆ ನಡೆಸಿದ ಅವರು, ಕಳೆದ ಚುನಾವಣೆಯಲ್ಲಿ ಅಂತಿಮ ಕ್ಷಣದಲ್ಲಿ ಜೆಡಿಎಸ್ ತೊರೆದು ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಕೃಷ್ಣನಾಯಕ ಹಾಗೂ ಜೆಡಿಎಸ್ ಅಭ್ಯರ್ಥಿಯಾಗಿದ್ದ ಜಯಪ್ರಕಾಶ್ ಚಿಕ್ಕಣ್ಣ ಸಮ್ಮುಖದಲ್ಲೇ ಅಭಿಪ್ರಾಯ ಸಂಗ್ರಹಿಸಿ, ಕ್ಷೇತ್ರದಲ್ಲಿ ಗೆಲುವು ಸಾಧಿಸುವ ನಿಟ್ಟಿನಲ್ಲಿ ಒಮ್ಮತದಿಂದ ಮುನ್ನಡೆಯಬೇಕೆಂದು ಕಿವಿಮಾತು ಹೇಳಿದ್ದಾರೆ.

ಪಕ್ಷ ಸೇರ್ಪಡೆಗೆ ವೇದಿಕೆ: ಕಳೆದ ವಿಧಾನಸಭೆ ಚುನಾವಣೆಯಲ್ಲಿ ಹೆಚ್.ಡಿ.ಕೋಟೆ ಟಿಕೆಟ್‌ಗಾಗಿ ಮಾಜಿ ಶಾಸಕ ಚಿಕ್ಕಣ್ಣ ಹಾಗೂ ಕುಮಾರಸ್ವಾಮಿ ಆಪ್ತರಾಗಿದ್ದ ಕೃಷ್ಣನಾಯಕ ನಡುವೆ ತೀವ್ರ ಪೈಪೋಟಿ ನಡೆದಿತ್ತು. ಚಿಕ್ಕಣ್ಣ ಅವರು ತಮ್ಮ ಪುತ್ರ ಜಯಪ್ರಕಾಶ್ ಅವರನ್ನು ಕಣಕ್ಕಿಳಿಸಲು ಪಟ್ಟು ಹಿಡಿದಿದ್ದರು. ಅವರ ಬೆಂಬಲಿಗರೂ ಅದಕ್ಕೆ ಸಾಥ್ ನೀಡಿದ್ದರು. ಇತ್ತ ಕೃಷ್ಣನಾಯಕ್ ಬೆಂಬಲಿಗರೂ ಅವರ ಸ್ಪರ್ಧೆಗೆ ಒತ್ತಾಯಿಸಿದ್ದರು. ಅಂತಿಮವಾಗಿ ಜಯಪ್ರಕಾಶ್ ಚಿಕ್ಕಣ್ಣ ಅವರಿಗೆ ಜೆಡಿಎಸ್ ಟಿಕೆಟ್ ಸಿಕ್ಕಿತು. ಕೃಷ್ಣನಾಯಕ್ ಬಿಜೆಪಿ ಅಭ್ಯರ್ಥಿಯಾಗಿ ಕಣಕ್ಕಿಳಿದರು. ಚುನಾವಣೆಯಲ್ಲಿ ಕೃಷ್ಣನಾಯಕ್ 49,420 ಮತ, ಜಯಪ್ರಕಾಶ್ 43,519 ಮತ ಪಡೆದು ಪರಾಜಿತರಾದರೆ ಕಾಂಗ್ರೆಸ್‌ನ ಅನಿಲ್ ಚಿಕ್ಕಮಾದು 84,359 ಮತಗಳೊಂದಿಗೆ ಎರಡನೇ ಬಾರಿ ಶಾಸಕರಾದರು. ಆ ಚುನಾವಣೆಯಲ್ಲಿ ಜಯಪ್ರಕಾಶ್ ಹಾಗೂ ಕೃಷ್ಣನಾಯಕ ಒಟ್ಟಾಗಿ ಕೆಲಸ ಮಾಡಿದ್ದರೆ ಜೆಡಿಎಸ್ ಗೆಲುವು ಸಾಧಿಸುತ್ತಿತ್ತು. ಅದು ಮುಂದಿನ ಚುನಾವಣೆಯಲ್ಲಿ ಸಾಕಾರಗೊಳ್ಳಬೇಕು. ಈ ನಿಟ್ಟಿನಲ್ಲಿ ಕೃಷ್ಣನಾಯಕ ಅವರನ್ನು ಮತ್ತೆ ಪಕ್ಷಕ್ಕೆ ಆಹ್ವಾನಿಸಬೇಕೆಂದು ಹಲವು ಮುಖಂಡರು ಒತ್ತಾಯಿಸಿದ್ದರ ಹಿನ್ನೆಲೆಯಲ್ಲಿ ಇಂದು ಪಕ್ಷದ ಕಾರ್ಯಾಧ್ಯಕ್ಷ ಸಾ.ರಾ.ಮಹೇಶ್ ಸಭೆ ಆಯೋಜಿಸಿದ್ದರು ಎಂದು ತಿಳಿದುಬಂದಿದೆ.

ಒಟ್ಟಾದರೆ ಗೆಲುವು ಖಚಿತ: ಸಭೆಯ ಆರಂಭದಲ್ಲೇ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಯಾರೂ ಯಾರ ಬಗ್ಗೆಯೂ ವೈಯಕ್ತಿಕವಾಗಿ ಮಾತನಾಡಬೇಡಿ. ಪಕ್ಷ ಉಳಿಸುವ ದೃಷ್ಟಿಯಿಂದ ಮುಂದಿನ ನಡೆಯ ಬಗ್ಗೆ ಮುಕ್ತವಾಗಿ ಹೇಳಿ. ಕೃಷ್ಣನಾಯಕ್ ನಮ್ಮೊಂದಿಗಿದ್ದರು. ಕಳೆದ ಚುನಾವಣೆಯಲ್ಲಿ ಕೆಲ ಗೊಂದಲದಿಂದ ಕೊನೆ ಹಂತದಲ್ಲಿ ಬಿಜೆಪಿ ಅಭ್ಯರ್ಥಿಯಾದರು. ಬಿಜೆಪಿ ಎಸ್‌ಟಿ ಘಟಕದಲ್ಲಿ ಅವರಿಗೆ ಪ್ರಮುಖ ಜವಾಬ್ದಾರಿ ನೀಡಿದ್ದಾರೆ. ನಮ್ಮ ಪಕ್ಷದ ಕೆಲ ಮುಖಂಡರು, ಕೃಷ್ಣನಾಯಕ್ ಅವರನ್ನು ಜೆಡಿಎಸ್‌ಗೆ ಆಹ್ವಾನಿಸಬೇಕೆಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಪಕ್ಷದ ಸಂಘಟನೆ ದೃಷ್ಟಿಯಿಂದ ಮುಕ್ತವಾಗಿ ಚರ್ಚೆ ಮಾಡಿ, ತೀರ್ಮಾನಿಸಿ. ಎಲ್ಲರೂ ಒಟ್ಟಾಗಿ ಮುಂದುವರೆದರೆ ಕ್ಷೇತ್ರದಲ್ಲಿ ಗೆಲುವು ಖಚಿತ ಎಂದು ಮನದಟ್ಟು ಮಾಡಿದ್ದಾರೆ.

ಪ್ರತ್ಯೇಕ ಮಾತುಕತೆ: ಕೃಷ್ಣನಾಯಕ್ ಅವರನ್ನು ಮತ್ತೆ ಪಕ್ಷಕ್ಕೆ ಸೇರ್ಪಡೆ ಮಾಡಿಕೊಳ್ಳಬೇಕೆಂಬ ವಿಚಾರಕ್ಕೆ ಸಭೆಯಲ್ಲಿ ಆಕ್ಷೇಪ ವ್ಯಕ್ತವಾಗಲಿಲ್ಲ. ಎಲ್ಲರೂ ಪಕ್ಷವನ್ನು ಬಲಪಡಿಸುವ ಉದ್ದೇಶದಿಂದ ನಾಯಕರು ಕೈಗೊಳ್ಳುವ ನಿರ್ಧಾರಕ್ಕೆ ಬದ್ಧವಾಗಿರುತ್ತೇವೆ ಎಂದು ಅಭಿಪ್ರಾಯಿಸಿದ್ದಾರೆ. ಆದರೆ ಕೆಲವರು ಕ್ಷೇತ್ರದಲ್ಲಿ ಮಾಜಿ ಶಾಸಕರಾದ ಚಿಕ್ಕಣ್ಣ ಅವರ ನೇತೃತ್ವದಲ್ಲೇ ಪಕ್ಷದ ಎಲ್ಲಾ ಚಟುವಟಿಕೆಗಳೂ ನಡೆಯಬೇಕೆಂದು ಮನವಿ ಮಾಡಿದರು. ಇದೇ ವೇಳೆ ಸಾ.ರಾ.ಮಹೇಶ್ ಅವರು, ಕೃಷ್ಣನಾಯಕ್ ಹಾಗೂ ಜಯಪ್ರಕಾಶ್ ಅವರೊಂದಿಗೆ ಪ್ರತ್ಯೇಕ ಮಾತುಕತೆ ನಡೆಸಿ, ಅವರ ಅಭಿಪ್ರಾಯವನ್ನು ಸಭೆಗೆ ತಿಳಿಸಿದರು.

ಉಭಯ ಮುಖಂಡರ ಅಭಿಪ್ರಾಯ: ಸಭೆಯಲ್ಲಿ ಜಯಪ್ರಕಾಶ್ ಚಿಕ್ಕಣ್ಣ ಮಾತನಾಡಿ, ಯಾರನ್ನು ಪಕ್ಷಕ್ಕೆ ಸೇರ್ಪಡೆ ಮಾಡಿಕೊಂಡರೂ ನಮ್ಮ ಅಭ್ಯಂತರವಿಲ್ಲ. ಈ ಬಗ್ಗೆ ಪಕ್ಷದ ನಾಯಕರ ತೀರ್ಮಾನಕ್ಕೆ ಬದ್ಧ. ಆದರೆ ನಮ್ಮ ಸಮುದಾಯದ ಮುಖಂಡರು, ಬೆಂಬಲಿಗರೊಂದಿಗೆ ಮಾತನಾಡಿ ನಮ್ಮ ತೀರ್ಮಾನ ತಿಳಿಸುವುದಾಗಿ ಹೇಳಿದ್ದಾರೆ ಎನ್ನಲಾಗಿದೆ. ಹಾಗೆಯೇ ಕೃಷ್ಣನಾಯಕ್ ಕೂಡ, ನನಗೆ ಕಳೆದ ಚುನಾವಣೆಯಲ್ಲಿ 50 ಸಾವಿರ ಮಂದಿ ಮತ ನೀಡಿದ್ದಾರೆ. ನಾನೂ ಕೂಡ ಹಿತೈಷಿಗಳೊಂದಿಗೆ ಚರ್ಚಿಸಿ, ತೀರ್ಮಾನ ತಿಳಿಸುವಾಗಿ ಹೇಳಿದ್ದಾರೆನ್ನಲಾಗಿದೆ.

ಅಂತಿಮವಾಗಿ ಹೆಚ್.ಡಿ.ಕುಮಾರಸ್ವಾಮಿ ಅವರು, ಇಬ್ಬರೂ ಮಾತನಾಡಿ ಒಳ್ಳೆಯ ನಿರ್ಧಾರಕ್ಕೆ ಬಂದರೆ, ಎಲ್ಲರೂ ಪಕ್ಷದ ತೀರ್ಮಾನಕ್ಕೆ ಬದ್ಧವಾಗಿದ್ದರೆ ಅಭ್ಯರ್ಥಿ ಆಯ್ಕೆ ಸಮಸ್ಯೆಯಾಗುವುದಿಲ್ಲ. ಚುನಾವಣೆ ಯಾವಾಗಲಾದರೂ ನಡೆಯಲಿ, ಈಗಿನಿಂದಲೇ ಸಿದ್ಧರಾಗಿರಬೇಕು. ಉಪ ಚುನಾವಣೆಗೂ ಸಾರ್ವತ್ರಿಕ ಚುನಾವಣೆಗೂ ಬಹಳಷ್ಟು ವ್ಯತ್ಯಾಸವಿದೆ ಕಾಂಗ್ರೆಸ್ ಸರ್ಕಾರದ ಭ್ರಷ್ಟಾಚಾರ, ಆಡಳಿತ ವೈಫಲ್ಯದಿಂದ ಜನ ರೋಸಿ ಹೋಗಿದ್ದಾರೆ. ಸರಿಯಾದ ಉತ್ತರ ನೀಡಲು ಕಾದಿದ್ದಾರೆ. ಬಿಜೆಪಿ ಮೈತ್ರಿಯಲ್ಲಿ ಲಭ್ಯವಾಗುವ ಎಲ್ಲಾ ಕ್ಷೇತ್ರಗಳಲ್ಲೂ ಜೆಡಿಎಸ್ ಗೆಲ್ಲುವ ಸಾಧ್ಯತೆ ಇದೆ. ಪಕ್ಷದ ಹಿತಕ್ಕಾಗಿ ತ್ಯಾಗ ಮಾಡುವ ಮುಖಂಡರಿಗೂ ಉತ್ತಮ ಪ್ರತಿಫಲ ಸಿಕ್ಕೇ ಸಿಗುತ್ತದೆ ಎಂದು ಸಲಹೆ ನೀಡಿದರು ಎಂದು ತಿಳಿದುಬಂದಿದೆ.

ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸುರೇಶ್ ಬಾಬು, ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ಶಾಸಕ ಜಿ.ಡಿ. ಹರೀಶ್‌ಗೌಡ, ಮಾಜಿ ಸಚಿವ ವೆಂಕಟರಾವ್ ನಾಡಗೌಡ, ಮಾಜಿ ಶಾಸಕರಾದ ಕೆ.ಮಹದೇವ್, ಅಶ್ವಿನ್‌ಕುಮಾರ್, ಜೆಡಿಎಸ್ ಜಿಲ್ಲಾಧ್ಯಕ್ಷ ನರಸಿಂಹಮೂರ್ತಿ, ಮಾಜಿ ಮೇಯರ್ ಎಂ.ಜೆ. ರವಿಕುಮಾರ್ ಮತ್ತಿತರರು ಸಭೆಯಲ್ಲಿದ್ದರು.

ಸಮಯ ಬಂದಾಗ ಎಲ್ಲವೂ ಸರಿಯಾಗುತ್ತೆ!

ಜಿ.ಟಿ.ದೇವೇಗೌಡರ ಕುರಿತಾಗಿ ಕುಮಾರಸ್ವಾಮಿ ಪ್ರತಿಕ್ರಿಯೆ

ಮೈಸೂರು: ಹೆಚ್.ಡಿ.ಕೋಟೆ ಮುಖಂಡರಾದ ಚಿಕ್ಕಣ್ಣ ಅವರ ನೇತೃತ್ವದಲ್ಲಿ ಕೃಷ್ಣನಾಯಕ್ ಅವರನ್ನು ಪಕ್ಷಕ್ಕೆ ವಾಪಸ್ ಕರೆತರುವ ಸಂಬಂಧ ಸಭೆಯಲ್ಲಿ ಚರ್ಚೆಯಾಗಿದೆ ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ತಿಳಿಸಿದರು.


ಸಭೆ ಬಳಿಕ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿ, ಕಳೆದ ಚುನಾವಣೆಯಲ್ಲಿ ಟಿಕೆಟ್ ಹಂಚಿಕೆ ವೇಳೆ ಕೆಲ ಗೊಂದಲ ಉಂಟಾಗಿ ಕೊನೆ ಹಂತದಲ್ಲಿ ಕೃಷ್ಣನಾಯಕ್ ಬಿಜೆಪಿ ಅಭ್ಯರ್ಥಿಯಾದರು. ಪುನಃ ಅವರನ್ನು ಚಿಕ್ಕಣ್ಣ ನೇತೃತ್ವದಲ್ಲಿ ವಾಪಸ್ ಕರೆತರುವ ಸಂಬಂಧ ಕ್ಷೇತ್ರದ ಪ್ರಮುಖರ ಸಭೆಯಲ್ಲಿ ಚರ್ಚಿಸಲಾಗಿದೆ ಎಂದರು.

ಇನ್ನು ಹಿರಿಯ ನಾಯಕ ಜಿ.ಟಿ.ದೇವೇಗೌಡರ ಹೇಳಿಕೆ ಬಗ್ಗೆ ಪ್ರತಿಕ್ರಿಯಿಸಿ, ಸಮಸ್ಯೆ ಏನೂ ಇಲ್ಲ, ಸಮಯ ಬಂದಾಗ ಎಲ್ಲವೂ ಬಗೆಹರಿಯುತ್ತದೆ. 15 ವರ್ಷದಿಂದ ನೋಡುತ್ತಿದ್ದೇನೆ. ಪ್ರತಿ ಐದು ವರ್ಷದಲ್ಲಿ ಹೇಗೆ ನಡೆದಿದೆಯೋ ಹಾಗೆಯೇ ನಡೆಯುತ್ತದೆ ಎಂದು ಹೇಳಿದರು.

ಶ್ರೀರಾಮುಲು ಜನಾರ್ಧನ ರೆಡ್ಡಿ ಜಟಾಪಟಿ

ಬಿಜೆಪಿ ವರಿಷ್ಠರ ಮಧ್ಯಪ್ರವೇಶ

- ಇಬ್ಬರೊಂದಿಗೂ ನಡ್ಡಾ ಪ್ರತ್ಯೇಕವಾಗಿ ಮಾತುಕತೆ
- ದೆಹಲಿಗೆ ಬರುವಂತೆ ಇಬ್ಬರಿಗೂ ಆಹ್ವಾನ
- ರಾಜ್ಯ ನಾಯಕರಿಗೂ ವಿವಾದ ಬಗೆಹರಿಸಲು ಸೂಚನೆ



ಜನಾರ್ಧನರೆಡ್ಡಿ



ಜೆ.ಪಿ.ನಡ್ಡಾ



ಶ್ರೀರಾಮುಲು

ಬೆಂಗಳೂರು, ಜ.24(ಕೆಎಂಶಿ)–ಪಕ್ಷದ ಹಿರಿಯ ನಾಯಕರಾದ ಶ್ರೀರಾಮುಲು ಹಾಗೂ ಜನಾರ್ದನ ರೆಡ್ಡಿ ನಡುವಿನ ಜಟಾಪಟಿ ಬಗೆಹರಿಸಲು ಬಿಜೆಪಿ ವರಿಷ್ಠರು ಮಧ್ಯಪ್ರವೇಶ ಮಾಡಿದ್ದಾರೆ. ಉಭಯ ನಾಯಕರನ್ನು ಪಕ್ಷದಲ್ಲೇ ಉಳಿಸಿಕೊಂಡು, ಅವರುಗಳ ಸಮಸ್ಯೆ ಪರಿಹರಿಸಲು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ರಂಗಪ್ರವೇಶ ಮಾಡಿದ್ದಾರೆ.

ಇಬ್ಬರು ನಾಯಕರ ಆರೋಪ–ಪ್ರತ್ಯಾರೋಪದಿಂದ ಪಕ್ಷಕ್ಕೆ ಹಿನ್ನಡೆಯಾಗುತ್ತದೆ ಎಂಬ ಮನವರಿಕೆ ಆಗುತ್ತಿದ್ದಂತೆ ನಡ್ಡಾ, ಇಂದು ಬೆಳಗ್ಗೆ ಶ್ರೀರಾಮುಲು ಹಾಗೂ ರೆಡ್ಡಿ ಅವರ ಜೊತೆ ದೂರವಾಣಿ ಮೂಲಕ ಪ್ರತ್ಯೇಕವಾಗಿ ಚರ್ಚಿಸಿದ್ದಾರೆ. ಅಷ್ಟೇ ಅಲ್ಲ, ದೆಹಲಿಗೆ ಬರುವಂತೆ ಉಭಯ ನಾಯಕರಿಗೂ ಆಹ್ವಾನ ನೀಡಿದ್ದಾರೆ. ಅಲ್ಲದೆ, ರಾಜ್ಯ ನಾಯಕರುಗಳನ್ನು ಸಂಪರ್ಕಿಸಿ, ಇಬ್ಬರ ನಡುವಿನ ವೈಮಸ್ಸನ್ನು ಬಗೆಹರಿಸುವಂತೆ ಸಲಹೆ ಮಾಡಿದ್ದಾರೆ.

ಯಾವುದೇ ಗೊಂದಲ ಇದ್ದರೂ ಪಕ್ಷದ ಚೌಕಟ್ಟಿನಲ್ಲಿ ಬಗೆಹರಿಸಿಕೊಳ್ಳಿ, ಇವರುಗಳ ಜೊತೆ ಚರ್ಚಿಸಿ ಪರಿಹರಿಸಿ ಎಂಬುದಾಗಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹಾಗೂ ಮಾಜಿ ಕೇಂದ್ರ ಸಚಿವ ಡಿ.ವಿ.ಸದಾನಂದಗೌಡ ಅವರಿಗೆ ಸೂಚಿಸಿದ್ದಾರೆ.

ವರಿಷ್ಠರು ಮಧ್ಯ ಪ್ರವೇಶಿಸಿರುವ ಮಾಹಿತಿಯನ್ನು ಶ್ರೀರಾಮುಲು ಅವರೇ ಸುದ್ದಿಗಾರರೊಂದಿಗೆ ಹಂಚಿಕೊಂಡಿದ್ದು, ನಡ್ಡಾ ಅವರು ನನ್ನನ್ನು ಸಂಪರ್ಕಿಸಿದಾಗ, ಇಲ್ಲಿನ ಎಲ್ಲಾ ವಿಚಾರವನ್ನು ಅವರ ಗಮನಕ್ಕೆ ತಂದಿದ್ದೇನೆ.

ಅದಕ್ಕೆ ಅವರು, ನೀವು ಹಿಂದುಳಿದ ನಾಯಕರು, ನಿಮ್ಮ ಪರ ನಾವಿದ್ದೇವೆ. ನಿಮ್ಮ ವಿಷಯವನ್ನು ಪ್ರಧಾನಿ ಹಾಗೂ ಗೃಹ ಸಚಿವರ ಗಮನಕ್ಕೂ ತರುವುದಾಗಿ ನಡ್ಡಾ ಭರವಸೆ ನೀಡಿದ್ದಾರೆಂದು ಶ್ರೀರಾಮುಲು ತಿಳಿಸಿದ್ದಾರೆ.

ನಿಮಗೆ ನೋವಾಗಿದೆ ಎಂಬುದು ತಿಳಿದಿದೆ ಪಕ್ಷದ ರಾಜ್ಯ ಉಸ್ತುವಾರಿ ರಾಧಾಮೋಹನ್ ದಾಸ್ ಅಗರ್ವಾಲ್ ತಮ್ಮ ಮಾತನ್ನು ಹಿಂದೆ ಪಡೆದಿದ್ದಾರೆ. ನೀವು ಯಾವುದೇ ದುಡುಕು ನಿರ್ಧಾರ ಕೈಗೊಳ್ಳದೆ, ಸಂಘಟನೆಯಲ್ಲಿ ತೊಡಗಿಸಿಕೊಳ್ಳಿ ಎಂಬ ಸಲಹೆ ಮಾಡಿದ್ದಾರೆ. ನಾನು ಅದಕ್ಕೆ ಸಮ್ಮತಿಸಿದ್ದೇನೆ ಎಂದಿದ್ದಾರೆ.

ನಾಟ್ಯಲೇಖ ನಾಟಕೋತ್ಸವಕ್ಕೆ ಚಾಲನೆ



ಮೈಸೂರು, ಜ.24(ಎಂಕೆ)– ಮೈಸೂರು ರಂಗಾಯಣದ ವನರಂಗದಲ್ಲಿ ನಾಟ್ಯಾಲೇಖ ರಂಗಸಮೂಹದ ವತಿಯಿಂದ ಹಮ್ಮಿಕೊಂಡಿರುವ ಎರಡು ದಿನಗಳ ನೀನಾಸಂ ತಿರುಗಾಟ ನಾಟಕಗಳ 'ನಾಟ್ಯಲೇಖ ನಾಟಕೋತ್ಸವ'ಕ್ಕೆ ಶುಕ್ರವಾರ ಚಾಲನೆ ದೊರೆಯಿತು.

ಹಿರಿಯ ರಂಗಕರ್ಮಿ ಬಿ.ಎಂ.ರಾಮ ಚಂದ್ರ ನಾಟಕೋತ್ಸವಕ್ಕೆ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ನೀನಾಸಂ ತಿರುಗಾಟ ನಾಟಕಗಳ ಉತ್ಸವ ಮೈಸೂರಿನಲ್ಲಿ ಯಶಸ್ವಿಯಾಗಿ ನಡೆಯಲಿದೆ. ಮೈಸೂರಿನಲ್ಲಿ ರಂಗಾಸ್ತರ ಸಂಖ್ಯೆ ಹೆಚ್ಚಾಗಿದ್ದು, ನಾಟ್ಯಲೇಖ ನಾಟಕೋತ್ಸವವನ್ನು ಪ್ರೋತ್ಸಾಹಿಸಬೇಕು. ಮೈಸೂರಿಗೆ ಬರುವ ಬೇರೆ ಬೇರೆ ತಂಡಗಳನ್ನು ನಾವು ಪ್ರೋತ್ಸಾಹಿಸಿದರೆ, ಮೈಸೂರಿನ ತಂಡಗಳಿಗೆ ಬೇರೆ ಬೇರೆ ಕಡೆಗಳಲ್ಲಿ ಪ್ರೋತ್ಸಾಹ ದೊರೆಯಲಿದೆ ಎಂದರು.

ಸಭಾ ಕಾರ್ಯಕ್ರಮಕ್ಕೂ ಮುನ್ನ ಆರ್.ಸಿ.ಧನಂಜಯ ಮತ್ತು ತಂಡದವರಿಂದ ಅವರು ರಂಗಗೀತೆಗಳ ಗೀತಗಾಯನ ನಡೆಯಿತು. ಹಿರಿಯ ರಂಗಕರ್ಮಿಗಳಾದ ರಾಮೇಶ್ವರಿ ವರ್ಮಾ, ಇಂದಿರಾ ನಾಯರ್, ಕವಿ ಜಯಂತ್ ಕಾಯ್ಕಿಣಿ, ರಂಗಾಯಣದ ಉಪನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ಬಿ.ಎಂ.ಸುರೇಶ್ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ನಾಟಕ ಪ್ರದರ್ಶನ: ನಂತರ ನೀನಾಸಂ ತಿರುಗಾಟ ತಂಡದಿಂದ ಅಭಿರಾಮ್ ಭಡ್ಕಮ್ಕರ್ ರಚಿಸಿ, ಜಯಂತ್ ಕಾಯ್ಕಿಣಿ ಕನ್ನಡಕ್ಕೆ ಅನುವಾದಿಸಿರುವ, ವಿದ್ಯಾನಿಧಿ ವನಾರಸೆ ನಿರ್ದೇಶನದ 'ಅಂಕದ ಪರದೆ' ನಾಟಕ ಪ್ರದರ್ಶನಗೊಂಡಿತು. ಹಿರಿಯ ಜೀವನಗಳು ತಮ್ಮ ಜೀವನ ಪಯಣವನ್ನು ಮೆಲುಕು ಹಾಕುತ್ತಾ, ವೃದ್ಧಾಪ್ಯವೆಂಬ ವಾಸ್ತವ ರಂಗಭೂಮಿಯ ಭೂಮಿಕೆಗಳಾಗಿ ಪರಿವರ್ತನೆಯಾಗುವ ವಿಸ್ಮಯ ದಿಕ್ಕನ್ನು ನಾಟಕ ಪ್ರಸ್ತುತ ಪಡಿಸಿತು.

ಮಾನಸಿಕವಾಗಿ ಆರೋಗ್ಯವಾಗಿರಲು ಕಲೆ, ನಾಟಕ ಒಳಗೊಂಡ ರಂಗಭೂಮಿ ಅವಶ್ಯ



ರಾಜ್ಯಮಟ್ಟದ ಸಂಚಲನ ಮಕ್ಕಳ ನಾಟಕೋತ್ಸವ ಮತ್ತು ಜಾನಪದ ಉತ್ಸವದಲ್ಲಿ ಜೆಎಸ್‌ಎಸ್ ಶಾಲೆ ವಿದ್ಯಾರ್ಥಿಗಳಿಂದ 'ಮಧ್ಯಮ ವ್ಯಾಯೋಗ' ನಾಟಕ ಪ್ರದರ್ಶನ

ಮೈಸೂರು, ಜ.24(ಎಂಕೆ)– ಸಾಮಾಜಿಕ ಜಾಲತಾಣಗಳಿಂದ ಮುಕ್ತರಾಗಿ ಮಾನಸಿಕವಾಗಿ ಆರೋಗ್ಯವಾಗಿರಲು ಕಲೆ, ನಾಟಕಗಳನ್ನೊಳಗೊಂಡ ರಂಗಭೂಮಿ ಅವಶ್ಯ ಎಂದು ಜೆಎಸ್‌ಎಸ್ ಸಂಸ್ಥೆಯ ಶಾಲಾ ಶಿಕ್ಷಣ ವಿಭಾಗದ ನಿರ್ದೇಶಕ ಬಿ.ಎ.ರಾಜಶೇಖರ್ ಹೇಳಿದರು.

ಮೈಸೂರಿನ ಕಲಾಮಂದಿರದ ಕಿರು ರಂಗಮಂದಿರದಲ್ಲಿ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಬೆಂಗಳೂರು ಸಹಯೋಗದಲ್ಲಿ ಸಂಚಲನ ಮೈಸೂರು ವತಿಯಿಂದ ಆಯೋಜಿಸಿರುವ 'ರಾಜ್ಯಮಟ್ಟದ ಸಂಚಲನ ಮಕ್ಕಳ ನಾಟಕೋತ್ಸವ ಮತ್ತು ಜಾನಪದ ಉತ್ಸವ'ದಲ್ಲಿ ಮಾತನಾಡಿದ ಅವರು, ಶಾಲಾ ಮಕ್ಕಳು ರಂಗಭೂಮಿ ಚಟುವಟಿಕೆಯಲ್ಲಿ ಭಾಗವಹಿಸಲು ಪೋಷಕರು ಅವಕಾಶ ಮಾಡಿಕೊಡಬೇಕು ಎಂದು ಸಲಹೆ ನೀಡಿದರು.

ಶಾಲಾ ಮಕ್ಕಳಲ್ಲಿ ಸಂಚಲನ ಸೃಷ್ಟಿಸುವ ನಿಟ್ಟಿನಲ್ಲಿ ಸಂಚಲನ ಮೈಸೂರು ನಾಟಕೋತ್ಸವ ಹಮ್ಮಿಕೊಳ್ಳುತ್ತಿರುವುದು ಶ್ಲಾಘನೀಯ. ಜೆಎಸ್‌ಎಸ್ ಶಾಲೆಗಳಲ್ಲಿಯೂ ಮಕ್ಕಳನ್ನು ರಂಗಭೂಮಿ ಚಟುವಟಿಕೆಯಲ್ಲಿ ತೊಡಗಿಸಲಾಗುತ್ತಿದೆ ಎಂದರಲ್ಲದೆ ಮಕ್ಕಳ ನಾಟಕೋತ್ಸವಕ್ಕೆ ಶುಭ ಕೋರಿದರು.

ನಂತರ ಎಸ್‌ಜೆಸಿಇ ಕ್ಯಾಂಪಸ್‌ನ ಜೆಎಸ್‌ಎಸ್ ಶಾಲೆಯ ಮಕ್ಕಳು, ಚಂದ್ರಶೇಖರಾಚಾರ್ ಹೆಗ್ಗೋಡಾರ ರಚನೆ, ಜೀವನ ಕುಮಾರ್ ಬಿ.ಹೆಗ್ಗೋಡು ನಿರ್ದೇಶನದಲ್ಲಿ 'ಮಧ್ಯಮ ವ್ಯಾಯೋಗ' ನಾಟಕ ಪ್ರದರ್ಶನ ನೀಡಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಸುದರ್ಶನ್, ಸಂಚಲನ ಮೈಸೂರಿನ ದೀಪಕ್, ಹರೀಶ್ ಉಪಸ್ಥಿತರಿದ್ದರು.

ಕೆಆರ್‌ಎಸ್ ಮಾದರಿ ಕಬಿನಿ ಜಲಾಶಯ ಅಭಿವೃದ್ಧಿಗೆ ಮನವಿ

ರೈತ ಕಲ್ಯಾಣ ಸಂಘದಿಂದ ಪೊನ್ನಟ ನಾಡಿನ ಕಬಿನಿ ಜಲಾಶಯ ಪರಿಶೀಲನೆ



ಕಬಿನಿ ಬಲದಂಡೆ ನಾಲೆ ದುರಸ್ಥಿ ಕುರಿತು ರೈತ ಕಲ್ಯಾಣ ಸಂಘದ ಪದಾಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಮೈಸೂರು, ಜ.24(ಜಿಎ)–ಸಕ್ಕರೆ ನಾಡು ಮಂಡ್ಯ ವ್ಯಾಪ್ತಿಯ ಕೆಆರ್‌ಎಸ್ ಜಲಾಶಯದ ಮಾದರಿಯಲ್ಲಿ ಪೊನ್ನಟ ನಾಡಿನ ಕಬಿನಿ ಜಲಾಯಶವನ್ನು ಕೂಡಾ ಎಲ್ಲಾ ರೀತಿಯಲ್ಲೂ ಅಭಿವೃದ್ಧಿ ಮಾಡಲು ಸರ್ಕಾರ ಮುಂದಾಗಬೇಕೆಂದು ರೈತ ಕಲ್ಯಾಣ ಸಂಘದ ರಾಜ್ಯಾಧ್ಯಕ್ಷ ಭೂಮಿಪುತ್ರ ಸಿ.ಚಂದನ್‌ಗೌಡ ಮನವಿ ಮಾಡಿದರು.

ಕಬಿನಿ ಬಲದಂಡೆ ನಾಲೆ ದುರಸ್ಥಿ ಕುರಿತು ಸ್ಥಳೀಯರ ದೂರಿನ ಮೇರೆಗೆ ಶುಕ್ರವಾರ ರೈತ ಕಲ್ಯಾಣ ತಂಡದ ಜೊತೆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ ನಂತರ ಅವರು ಮಾತನಾಡಿದರು.


ಮೈಸೂರು ಮುಕುಟಮಣಿ ಮಹಾರಾಜರ ಅಚ್ಚುಮೆಚ್ಚಿನ ತಾಣ. ಒಂದೇ ತಾಲೂಕಿನಲ್ಲಿ ನಾಲ್ಕು ಅಣೆಕಟ್ಟು ಜಲಾಶಯಗಳನ್ನು ಹೊಂದಿರುವ ವನಸಿರಿ ನಾಡೆಂದೇ ಪ್ರಖ್ಯಾತಿ ಪಡೆದಿರುವ ಪೊನ್ನಟ ನಾಡು ಎಚ್.ಡಿ.ಕೋಟೆ ತಾಲೂಕಿನ ಕಬಿನಿ ಡ್ಯಾಮ್ ಅನ್ನು ಕೃಷ್ಣರಾಜಸಾಗರ ಪ್ರವಾಸಿ ತಾಣದಂತೆ ಮಾದರಿಯಾಗಿ ಅಭಿವೃದ್ಧಿ ಪಡಿಸಬೇಕು ಹಾಗೂ ಶೀಘ್ರವೇ ಕಬಿನಿ ಬಲದಂಡೆ ನಾಲೆ ದುರಸ್ಥಿಗೆ ಅಗತ್ಯ ಕ್ರಮ ಕೈಗೊಳ್ಳಬೇಕೆಂದರು.

ದುರಸ್ಥಿಯಾಗಬೇಕಿರುವ ಸ್ಥಳವನ್ನು ಈಗಾಗಲೇ ವೀಕ್ಷಿಸಿ, ಪರಿಶೀಲಿಸಲಾಗಿದ್ದು, ಕಬಿನಿ ಅಭಿವೃದ್ಧಿಯಾಗಲಿ. ವನಸಿರಿ ನಾಡು ಎಚ್.ಡಿ.ಕೋಟೆ ತಾಲೂಕು ಹಿಂದುಳಿದ ತಾಲೂಕು ಎಂಬ ಕಪ್ಪು ಪಟ್ಟಿಯಿಂದ ಹೊರಬರಲಿ. ಪ್ರವಾಸೋದ್ಯಮದಿಂದ ತಾಲೂಕು ಸಂಪದ್ಭರಿತವಾಗಲಿ. ಉದ್ಯೋಗ ನಿರ್ಮಾಣವಾಗಲಿ. ಮತ್ತೊಮ್ಮೆ ಎಚ್.ಡಿ. ಕೋಟೆ ತಾಲೂಕನ್ನು ವಿಶ್ವವೇ ತಿರುಗಿ ನೋಡುವಂತಾಗಲಿ. ಸಾಕಷ್ಟು ಅಭಿವೃದ್ಧಿಯ ಹಿತಚಿಂತನೆಯಿಂದ ಕಬಿನಿ ಜಲಾಶಯ ಪ್ರದೇಶವನ್ನು ಪ್ರವಾಸಿ ತಾಣವನ್ನಾಗಿ ಕೂಡಾ ಮಾರ್ಪಡಿಸಿ ಅಭಿವೃದ್ಧಿಗೆ ಸರ್ಕಾರ ಮುಂದಾಗಲಿ ಎಂದು ಕೋರಿದರು.

ಈ ವೇಳೆ ಸ್ಥಳದಲ್ಲಿದ್ದ ಇಇ ಚಂದ್ರಶೇಖರ್, ಎಇಇ ಗಣೇಶ್, ಇಂಜಿನಿಯರ್ ರಮೇಶ್ ಕುಮಾರ್ ಮತ್ತು ಅಧಿಕಾರಿಗಳ ತಂಡದವರು ಜಲಾಶಯದ ಬಲದಂಡೆ ನಾಲೆ ದುರಸ್ಥಿ ಕಾರ್ಯದ ಬಗ್ಗೆ ಮಾಹಿತಿ ನೀಡಿದರಲ್ಲದೇ, ಈಗಾಗಲೇ ದೆಹಲಿಯಿಂದ ನುರಿತ ತಜ್ಞರು ಆಗಮಿಸಿ ದುರಸ್ಥಿ ಕಾರ್ಯದ ಕುರಿತು ಪರಿಶೀಲನೆ ನಡೆಸಿದ್ದಾರೆ. ಅಲ್ಲದೇ ಸರ್ಕಾರದಿಂದ ಕೂಡಾ 4.5ಕೋಟಿ ಅನುದಾನ ಬಿಡುಗಡೆ ಮಾಡಲಾಗಿದೆ. ಇದಲ್ಲದೇ ಉನ್ನತ ತಂಡ ರಚಿಸಿ, ಇನ್ನೂ 32 ಕೋಟಿ ರೂ.ಹಣ ಬಿಡುಗಡೆಗೆ ಸಂಪುಟ ಸಭೆ ಅನುಮೋದನೆ ನೀಡಿದೆ ಎಂದರಲ್ಲದೇ, ಬೇಸಿಗೆ ಸಮಯದಲ್ಲಿ ಒಳ–ಹೊರ ಹರಿವು ಕಡಿಮೆಯ ಸಂದರ್ಭದಲ್ಲಿ ಅಗತ್ಯ ದುರಸ್ತಿ ಕಾರ್ಯ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಜಿಲ್ಲಾ ಉಸ್ತುವಾರಿ ಸಚಿವರು, ಸ್ಥಳೀಯ ಶಾಸಕರು ಕೂಡಾ ಈ ಬಗ್ಗೆ ವಿಶೇಷ ಗಮನ ಹರಿಸಿ ದುರಸ್ಥಿ ಕಾರ್ಯಕ್ಕೆ ಬೇಕಿರುವ ಎಲ್ಲಾ ಅಗತ್ಯ ಕ್ರಮ ಕೈಗೊಂಡಿದ್ದಾರೆ ಎಂದು ವಿವರಿಸಿದರು. ಈ ಸಂದರ್ಭದಲ್ಲಿ ಹೆಚ್.ಡಿ.ಕೋಟೆ ಹಾಗೂ ಸರಗೂರು ತಾಲೂಕಿನ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಹುಟ್ಟುಹಬ್ಬದ ಅಂಗವಾಗಿ ಅಭಿನಂದನೆ



ಕರ್ನಾಟಕ ರಾಜ್ಯ ಯುವ ಜನತಾದಳದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರನ್ನು ಅವರ ಹುಟ್ಟುಹಬ್ಬದ ಅಂಗವಾಗಿ ಅಭಿನಂದಿಸಲಾಯಿತು. ಈ ವೇಳೆ ಮೈಸೂರು ಮಹಾನಗರ ಪಾಲಿಕೆ ನಿಕಟಪೂರ್ವ ಸದಸ್ಯ ಎಸ್‌ಬಿಎಂ ಮಂಜು, ಮೈಸೂರು ನಗರ ಯುವ ಜನತಾದಳ ಅಧ್ಯಕ್ಷ ಲೋಕೇಶ್, ಕೆಎಸ್‌ಐಡಿಸಿ ಮಾಜಿ ನಿರ್ದೇಶಕ ಸುತೋಷ್, ಜೆಡಿಎಸ್ ಯುವ ಜನತಾದಳದ ಪ್ರಧಾನ ಕಾರ್ಯದರ್ಶಿ ಪ್ರಶಾಂತ್, ಯುವ ಜನತಾದಳದ ಉಪಾಧ್ಯಕ್ಷ ರಾಮು ಇತರರು ಉಪಸ್ಥಿತರಿದ್ದರು.

ಟೈ ಮೈಸೂರು ಚಾಪ್ಟರ್ ಅಧ್ಯಕ್ಷರ ಪದಗ್ರಹಣ



ಟೈ ಮೈಸೂರು ಚಾಪ್ಟರ್‌ನ ನಿರ್ಗಮಿತ ಅಧ್ಯಕ್ಷ ಡಾ.ಮಹೇಶ್ ರಾವ್(ಎಡದಿಂದ 5ನೇಯವರು) ಅವರಿಗೆ ಸ್ಮರಣಿಕೆ ನೀಡಿ ಗೌರವಿಸಲಾಯಿತು. ಟೈ ಮೈಸೂರು ಚಾಪ್ಟರ್‌ನ ಬೋರ್ಡ್ ಸದಸ್ಯರಾದ ಮಹೇಶ, ಪವನ್ ರಂಗ, ಸುಧನ್ವ ಧನಂಜಯ, ಬ್ಲೆಜ್ ವೆಂಚರ್ಸ್ ನಿರ್ದೇಶಕ ಕಿರಣ್ ಬೆಟ್ಟದಪುರ್, ಟೈ ಮೈಸೂರು ನೂತನ ಅಧ್ಯಕ್ಷ ಭಾಸ್ಕರ ಕಳಲೆ, ರಾಮ್ ಕೇವಲೂರು, ಎಸ್ ನಾಗರಾಜನ್, ಅಜಿತ್ ಪೈ ಉಪಸ್ಥಿತರಿದ್ದರು.

ಮೈಸೂರು, ಜ.24(ಎಂಕೆ)– ಮೈಸೂರಿನ ಹುಣಸೂರು ರಸ್ತೆಯಲ್ಲಿರುವ ಲೀ ರುಚಿ ಹೋಟೆಲ್‌ನಲ್ಲಿ ಟೈ(TIE) ಮೈಸೂರು ಚಾಪ್ಟರ್ ಅಧ್ಯಕ್ಷರ ಪದಗ್ರಹಣ ಹಾಗೂ 'ಮಾರುಕಟ್ಟೆ ಆಧಾರಿತ ನಾವೀನ್ಯತೆ ಚಾಲಿತ ಉದ್ಯಮಶೀಲತೆ' ವಿಶೇಷ ಉಪನ್ಯಾಸ ಕಾರ್ಯಕ್ರಮ ಶುಕ್ರವಾರ ನಡೆಯಿತು.

ಟೈ ಮೈಸೂರು ಚಾಪ್ಟರ್‌ನ ನಿರ್ಗಮಿತ ಅಧ್ಯಕ್ಷ ಡಾ.ಮಹೇಶ್ ರಾವ್, 2025–26ನೇ ಸಾಲಿನ ನೂತನ ಅಧ್ಯಕ್ಷ ಡಾ.ಬಾಸ್ಕರ್ ಕಳಲೆ ಅವರಿಗೆ ಅಧಿಕಾರ ಹಸ್ತಾಂತರಿಸಿ, ಶುಭ ಕೋರಿದರು. ಬಳಿಕ ಟೈ ಮೈಸೂರು ಚಾಪ್ಟರ್‌ನ ನೂತನ ಅಧ್ಯಕ್ಷ ಡಾ.ಬಾಸ್ಕರ್ ಕಳಲೆ ಮಾತನಾಡಿ, ನೀಡಿರುವ ಜವಾಬ್ದಾರಿಯನ್ನು ನಿರ್ವಹಿಸುವ ಜೊತೆಗೆ ಟೈ ಮೈಸೂರು ಚಾಪ್ಟರ್‌ನ ಘನತೆ ಹೆಚ್ಚಿಸುವ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ರೂಪಿಸಲಾಗುವುದು ಎಂದರು.

ಟೈ ಮೈಸೂರು ಚಾಪ್ಟರ್‌ನ ಎಲ್ಲಾ ಸದಸ್ಯರ ಸಹಕಾರ ಅಗತ್ಯವಾಗಿದೆ. ಕಳೆದ ವರ್ಷವಷ್ಟೇ ಟೈ ಅಂತರರಾಷ್ಟ್ರೀಯ ಸಮಾವೇಶ ಯಶಸ್ವಿಯಾಗಿ ನಡೆದಿದೆ. ಮುಂದಿನ ದಿನಗಳಲ್ಲಿ ಟೈ ಮೈಸೂರು ಚಾಪ್ಟರ್‌ನ ಸದಸ್ಯರ ಸಂಖ್ಯೆಯನ್ನು ಹೆಚ್ಚಿಸುವ ಜೊತೆಗೆ ನವೋದ್ಯಮಿಗಳನ್ನು ಸೃಷ್ಟಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸಲಾಗುವುದು ಎಂದು ಭರವಸೆ ನೀಡಿದರು.

ಪದಗ್ರಹಣ ಸಮಾರಂಭಕ್ಕೂ ಮುನ್ನ 'ಮಾರುಕಟ್ಟೆ ಆಧಾರಿತ ನಾವೀನ್ಯತೆ ಚಾಲಿತ ಉದ್ಯಮಶೀಲತೆ' ವಿಶೇಷ ಉಪನ್ಯಾಸ ನೀಡಿದ ಬ್ಲೆಜ್ ವೆಂಚರ್ಸ್ ನಿರ್ದೇಶಕ ಕಿರಣ್ ಬೆಟ್ಟದಪುರ್, ಸ್ಟಾರ್ಟ್‌ಅಪ್‌ನಲ್ಲಿ ಯಶಸ್ಸು ಸಾಧಿಸಲು ಮೊದಲು ತಮ್ಮದೇ ಆದ ಮಾರುಕಟ್ಟೆಯನ್ನು ಗುರ್ತಿಸಿಕೊಂಡು ಅನುಕೂಲಕ್ಕೆ ತಕ್ಕಂತೆ ಬದಲಾವಣೆ ಮಾಡಿಕೊಳ್ಳಬೇಕು. ಮಾರಾಟವಾಗುವ ನಿಮ್ಮ ಪದಾರ್ಥಗಳನ್ನು ಇತರೆ ಕಂಪನಿಯವರು ನಕಲು ಮಾಡದಂತೆ ಎಚ್ಚರವಹಿಸಿದರೆ ಗುಣಮಟ್ಟ ಕಾಯ್ದುಕೊಳ್ಳುವ ಜೊತೆಗೆ ಉದ್ಯಮಿಗಳಾಗಿ ಬೆಳೆಯಲು ಸಾಧ್ಯವಾಗುತ್ತದೆ ಎಂದು ಸಲಹೆ ನೀಡಿದರು. ಟೈ ಮೈಸೂರು ಚಾಪ್ಟರ್‌ನ ಬೋರ್ಡ್ ಮೆಂಬರ್‌ಗಳಾದ ಸುಧನ್ವ ಧನಂಜಯ, ಪವನ್ ರಂಗ, ರಾಮ್ ಕೇವಲೂರು, ಎಸ್.ನಾಗರಾಜನ್, ಅಜಿತ್ ಪೈ, ಮಹೇಶ್ ಮತ್ತಿತರರು ಉಪಸ್ಥಿತರಿದ್ದರು.

ಕೆಎಸ್‌ಆರ್‌ಟಿಸಿ ಸಾರ್ಥಕ ಸೇವೆ ಹಿಂದೆ ಸಾವಿರಾರು ಸಿಬ್ಬಂದಿಯ ಶ್ರಮವಿದೆ

● ಶಾಸಕ ತನ್ವೀರ್ ಸೇಠ್ ಅಭಿಮತ ● ನೌಕರರ ಪತ್ತಿನ ಸಹಕಾರ ಸಂಘದ ನೂತನ ಕಟ್ಟದ ಉದ್ಘಾಟನೆ



ಮೈಸೂರು,ಚಾಮರಾಜನಗರ, ಮಂಡ್ಯ ಜಿಲ್ಲಾ ಕೆಎಸ್‌ಆರ್‌ಟಿಸಿ ನೌಕರರ ಪತ್ತಿನ ಸಹಕಾರ ಸಂಘ(ಎಂಡಿಎಂಎಸ್)ದ ನೂತನ ಕಟ್ಟಡವನ್ನು ಶಾಸಕ ತನ್ವೀರ್ ಸೇಟ್ ಉದ್ಘಾಟಿಸಿದರು.

ಮೈಸೂರು, ಜ.24(ಎಸ್‌ಪಿಎನ್)– ಜನರ ಜೀವನಾಡಿಯಾಗಿರುವ ಕೆಎಸ್‌ಆರ್‌ಟಿಸಿ, ರಾಜ್ಯದ ಪ್ರತಿಯೊಂದು ಹಳ್ಳಿಗೂ ತನ್ನ ಸೇವೆ ನೀಡುವಲ್ಲಿ ಯಶಸ್ವಿಯಾಗಿದೆ. ಈ ಯಶಸ್ಸಿನ ಹಿಂದೆ ಸಂಸ್ಥೆಯ ಸಾವಿರಾರು ನೌಕರರು, ಅಧಿಕಾರಿಗಳ ಪರಿಶ್ರಮವಿದೆ ಎಂದು ಶಾಸಕ ತನ್ವೀರ್ ಸೇಠ್ ಅಭಿಪ್ರಾಯಪಟ್ಟರು.

ಮೈಸೂರು ಬನ್ನಿಮಂಟಪದಲ್ಲಿ ಮೈಸೂರು, ಚಾಮರಾಜನಗರ, ಮಂಡ್ಯ ಜಿಲ್ಲಾ ಕರಾರಸಾನಿಗಮ ನೌಕರರ ಪತ್ತಿನ ಸಹಕಾರ ಸಂಘ(ಎಂಡಿಎಂಎಸ್)ದ ನೂತನ ಕಟ್ಟಡವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮೈಸೂರು, ಚಾಮರಾಜನಗರ, ಮಂಡ್ಯ ಜಿಲ್ಲೆಗಳಲ್ಲಿ ಈ ಸಹಕಾರಿ ಬ್ಯಾಂಕ್ ಕಾರ್ಯವ್ಯಾಪ್ತಿ ಹೊಂದಿದೆ. 1949ರಲ್ಲಿ ಕೆಎಸ್‌ಆರ್‌ಟಿಸಿಯಲ್ಲಿ ಕೆಲಸ ನಿರ್ವಹಿಸುತ್ತಿರುವ ನೌಕರರ ಆರ್ಥಿಕ ಸಬಲೀಕರಣಕ್ಕಾಗಿ ಈ ಸಂಸ್ಥೆ ನಿರಂತರ ಕೆಲಸ ಮಾಡುತ್ತಿದೆ. ಮೂರು ಜಿಲ್ಲೆಗಳಿಂದ ಸುಮಾರು 2200 ಸದಸ್ಯರನ್ನು ಹೊಂದಿದ್ದು, ನೌಕರರ ಆರ್ಥಿಕ ಸಮಸ್ಯೆ ನಿಗಿಸಲು ಕಡಿಮೆ ಬಡ್ಡಿ ದರದಲ್ಲಿ ಸಾಲ ನೀಡಿ, ನೌಕರರ ಬಲವರ್ಧನೆಗೆ ಶ್ರಮಿಸುತ್ತಿರುವುದು ಸಂತೋಷದ ವಿಷಯ ಎಂದರು.

ನಾನು 2004ರಲ್ಲಿ ಕಾರ್ಮಿಕ ಸಚಿವನಾಗಿದ್ದಾಗ, ಕಾರ್ಮಿಕರ ಸಮಸ್ಯೆಗಳಿಗೆ ಸ್ಪಂದಿಸಿದ್ದೆ. ಈ ವೇಳೆ ಕೆಎಸ್‌ಆರ್‌ಟಿಸಿ ನೌಕರರಿಗೂ ನನ್ನ ವ್ಯಾಪ್ತಿಯಲ್ಲಿ ಬರುವ ಸಮಸ್ಯೆಗಳಿಗೆ ಸ್ಪಂದಿಸಿದ್ದೇನೆ ಎಂದ ಶಾಸಕರು, ಸಂಸ್ಥೆಯ ಬಲವರ್ಧನೆಗೆ ನನ್ನ ಕೈಲಾದ ಸೇವೆಯನ್ನು ನೀಡಲು ಸದಾ ಸಿದ್ಧನಿದ್ದೇನೆ ಎಂದು ಭರವಸೆ ನೀಡಿದರು.

ಈ ವೇಳೆ ಕೆಎಸ್‌ಆರ್‌ಟಿಸಿ ವಿವಿಧ ಡಿಪೋಗಳಲ್ಲಿ ದೀರ್ಘಕಾಲ ಸೇವೆ ಸಲ್ಲಿಸಿ ಜನವರಿ ಅಂತ್ಯಕ್ಕೆ ನಿವೃತ್ತರಾಗುವ ಎ.ಚಂದ್ರಶೇಖರ್‌ಗೆ 1,24,959 ರೂ., ಯು.ರಾಘವೇಂದ್ರ ಸ್ವಾಮಿಗೆ 1,45,177 ರೂ., ಎಸ್.ಮಹೇಂದ್ರಗೆ 1,46,115, ಎನ್.ಪ್ರಕಾಶ್‌ಗೆ 1,20,176ರೂ., ಎನ್. ಶ್ರೀಧರ್‌ಗೆ 1,37,444 ರೂ., ಎಂ.ಎಸ್.ದಾಮೋದರ್‌ಗೆ 1,32,143 ರೂ., ಸಿ.ಮಹದೇವಗೆ 59,904 ರೂ.ಗಳನ್ನು ಷೇರಿನ ಲಾಭದ ಮೊತ್ತದ ಚೆಕ್ ವಿತರಿಸಿ, ಗೌರವಿಸಲಾಯಿತು.

ಈ ವೇಳೆ ಮೈಸೂರು ಗ್ರಾಮಾಂತರ ವಿಭಾಗದ ವಿಭಾಗೀಯ ನಿಯಂತ್ರಣಾಧಿಕಾರಿ ಬಿ.ಶ್ರೀನಿವಾಸ, ಮಂಡ್ಯ ವಿಭಾಗೀಯ ನಿಯಂತ್ರಣಾಧಿಕಾರಿ ಎಸ್.ಪಿ. ನಾಗರಾಜು, ಚಾಮರಾಜನಗರದ ವಿಭಾಗೀಯ ನಿಯಂತ್ರಣಾಧಿಕಾರಿ ಆರ್.ಅಶೋಕ್ ಕುಮಾರ್, ಮೈಸೂರು ನಗರ ವಿಭಾಗೀಯ ನಿಯಂತ್ರಣಾಧಿಕಾರಿ ಹೆಚ್.ಡಿ.ವೀರೇಶ್, ಎಂಡಿಎಂಎಸ್ ಅಧ್ಯಕ್ಷ ಎಂ.ಪಿ.ನಾಗಪ್ರಸಾದ್, ಉಪಾಧ್ಯಕ್ಷ ಎಸ್.ರಘು, ನಿರ್ದೇಶಕರಾದ ಕೆ.ಲೋಕೇಶ್, ಸಿ.ಮಾದೇಶ್, ಎಂ.ದೇವರಾಜ ಕುಮಾರ್, ಎಂ.ಸಿ.ಚನ್ನೇಗೌಡ, ಕೆ.ಆರ್. ಗುರುಸ್ವಾಮಿ, ಜಿ.ಲೋಹಿತ್, ಹೆಚ್.ಬಿ.ರಾಜು, ನಾಗಲೀಲಾ, ಕೆ.ನಿಂಗಮ್ಮ , ಕೆ.ಮಹದೇವಸ್ವಾಮಿ, ಟಿ.ಎಸ್.ಮಹೇಶ್, ಹೇಮಣ್ಣ, ಬಿ.ಎಂ.ನಾಗರಾಜು, ಸಂಘದ ಸಿಬ್ಬಂದಿಗಳಾದ ಎಸ್.ಭವಾನಿ, ಎಸ್.ಎಂ.ಹರಿಣಿ, ಎಸ್.ಸುರೇಶ್, ವಿ.ಮೇರಿಕ್ಯಾಥ್ರಿನ್, ಎಸ್.ರಾಧ, ಎಸ್.ಮೇನಕ ಸೇರಿದಂತೆ ಇತರರಿದ್ದರು.

ವೈಭವದ ಫಲಪುಷ್ಪ ಪ್ರದರ್ಶನ, ಮಧುರ ವಸ್ತ್ರೋತ್ಸವಕ್ಕೆ ಚಾಲನೆ

● 9 ಲಕ್ಷ ವಿವಿಧ ಬಣ್ಣದ ಸೇವಂತಿಗೆ, ಗುಲಾಬಿ ಹೂಗಳಿಂದ ಪ್ರವಾಸಿ ತಾಣ, ದೇವಾಲಯಗಳ ನಿರ್ಮಾಣ ● ಬೆಳಗ್ಗೆ 10 ರಿಂದ ರಾತ್ರಿ 10ರವರೆರೆ ಸಾರ್ವಜನಿಕರಿಗೆ ಪ್ರವೇಶಾವಕಾಶ ● ಪ್ರತಿದಿನ ಸಂಜೆ ಸಾಂಸ್ಕೃತಿಕ, ಮನರಂಜನಾ ಕಾರ್ಯಕ್ರಮ



ಫಲಪುಷ್ಪ ಪ್ರದರ್ಶನ ಹಾಗೂ ಮಧುರ ವಸ್ತ್ರೋತ್ಸವವನ್ನು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಉದ್ಘಾಟಿಸಿದರು.

ಮಂಡ್ಯ, ಜ.24– ನಗರದ ತೋಟಗಾರಿಕೆ ಕಚೇರಿ ಆವರಣದಲ್ಲಿ ಇಂದಿನಿಂದ 5 ದಿನಗಳ ಹಮ್ಮಿಕೊಂಡಿರುವ ವೈಭವದ ಫಲಪುಷ್ಪ ಪ್ರದರ್ಶನ ಹಾಗೂ ಜವಳಿ ಇಲಾಖೆ ವತಿಯಿಂದ ಆಯೋಜಿಸಿರುವ ಮಧುರ ವಸ್ತ್ರೋತ್ಸವವನ್ನು ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ಚಾಲನೆ ನೀಡಿದರು.

ಉದ್ಯಾನವನದಲ್ಲಿ ಆಕರ್ಷಕ ಬಣ್ಣದ ನಾನಾ ಜಾತಿಯ ಹೂಗಳಿಂದ ಹಲವಾರು ಕಲಾಕೃತಿಗಳು ಅರಳಿ ನಿಂತಿದ್ದು, ಜನರನ್ನು ಕೈ ಬೀಸಿ ಕರೆಯುತ್ತಿದೆ. ಸೆಲ್ಫಿ ಪಾಯಿಂಟ್‌ಗಳಲ್ಲಿ ಎಲ್ಲರೂ ಫೋಟೋ ತೆಗೆದುಕೊಳ್ಳುತ್ತಿದ್ದದ್ದು, ವಿಶೇಷವಾಗಿತ್ತು.

9 ಲಕ್ಷ ವಿವಿಧ ಬಣ್ಣದ ಸೇವಂತಿಗೆ ಮತ್ತು ಗುಲಾಬಿ ಹೂವುಗಳಿಂದ ಪ್ರವಾಸಿ ತಾಣ, ದೇವಾಲಯಗಳು ನಿರ್ಮಾಣವಾಗಿದ್ದು, ವಿಶೇಷವಾಗಿದೆ. ವಿವಿಧ ಹೂ ಅಲಂಕಾರಿಕ ಕುಂಡಗಳ ಜೋಡಣೆ, ವಿವಿಧ ತರಕಾರಿ ಬೆಳೆಗಳು ಹಾಗೂ ಪೌಷ್ಟಿಕ ಕೈತೋಟ ಮಾದರಿ ಹಾಗೂ ತರಕಾರಿ ಕೆತ್ತನೆ ಪ್ರದರ್ಶನ ಮತ್ತು ಜಿಲ್ಲೆಯ ತೋಟಗಾರಿಕೆ ಬೆಳೆಗಳ ವೈವಿಧ್ಯತೆಯ ಮಾದರಿಗಳ ಪ್ರದರ್ಶನ ಹಾಗೂ ರೈತರಿಂದ ಗ್ರಾಹಕರಿಗೆ ನೇರ ಮಾರಾಟ ಮತ್ತು ವಿವಿಧ ಅಭಿವೃದ್ಧಿ ಇಲಾಖೆಗಳ ಕಾರ್ಯಕ್ರಮಗಳ ಸಮಗ್ರ ಮಾಹಿತಿ ಇಲ್ಲಿ ದೊರೆಯಲಿದೆ.

ಪ್ರತಿ ದಿನ ಬೆಳಗ್ಗೆ 10ರಿಂದ ರಾತ್ರಿ 10 ಗಂಟೆಯವರೆಗೆ ಅವಕಾಶ: ಪ್ರತಿ ದಿನ ಬೆಳಗ್ಗೆ 10 ಗಂಟೆಯಿಂದ ರಾತ್ರಿ 10 ಗಂಟೆಯವರೆಗೆ ಫಲಪುಷ್ಪ ಪ್ರದರ್ಶನ ವೀಕ್ಷಿಸಲು ಅವಕಾಶ ಕಲ್ಪಿಸಲಾಗಿದೆ. ಪ್ರತಿ ದಿನ ಸಂಜೆ 6 ಗಂಟೆಯಿಂದ ರಾತ್ರಿ 10 ಗಂಟೆಯವರೆಗೆ ಸಾಂಸ್ಕೃತಿಕ ಹಾಗೂ ಮನರಂಜನಾ ಕಾರ್ಯಕ್ರಮ ಏರ್ಪಡಿಸಲಾಗಿದೆ. ವಯಸ್ಕರಿಗೆ ಟಿಕೆಟ್ ದರ 30, 6–12 ವರ್ಷದ ಮಕ್ಕಳಿಗೆ 20 ಹಾಗೂ ಸಮವಸ್ತ್ರ ಧರಿಸಿ ಬರುವ ಶಾಲಾ ಮಕ್ಕಳ ಗುಂಪುಗಳಿಗೆ ಹಾಗೂ 6 ವರ್ಷದೊಳಗಿನ ಮಕ್ಕಳಿಗೆ ಪ್ರವೇಶ ಉಚಿತವಾಗಿದೆ.

ಪ್ರಮುಖ ಆಕರ್ಷಣೆಗಳಿವು: ಫಲಪುಷ್ಪ ಪ್ರದರ್ಶನದಲ್ಲಿ 9 ಲಕ್ಷ ವಿವಿಧ ಬಣ್ಣದ ಸೇವಂತಿಗೆ ಮತ್ತು ವಿವಿಧ ಬಣ್ಣದ ಗುಲಾಬಿ ಹೂವುಗಳನ್ನು ಬಳಸಿ ಪ್ರಸಿದ್ದ ದೇವಾಲಯ ಹಾಗೂ ಪ್ರಸಿದ್ದ ಪ್ರವಾಸಿ ತಾಣಗಳನ್ನು ನಿರ್ಮಿಸಲಾಗಿದೆ.

ಯುವ ಜನತೆಯನ್ನು ಸೆಳೆಯಲು ಹತ್ತು ವಿವಿಧ ಕಡೆಗಳಲ್ಲಿ ಸೆಲ್ಫಿ ಪಾಯಿಂಟ್, ಹೂವಿನ ಆಕೃತಿಯ ಕ್ಷಯ ರೋಗ ಕುರಿತು ಜಾಗೃತಿ, ನರೇಗಾ ಯೋಜನೆಯ ಮಾಹಿತಿಯೊನ್ನೊಳಗೊಂಡ ಸ್ಥಬ್ಧ ಚಿತ್ರ, ವಿವಿಧ ಆಕರ್ಷಕ ಬಗೆಯ ಅಡಿನಿಯಂ ಗಿಡಗಳ ಪ್ರದರ್ಶಿಕೆ, ಬೋನ್ಸಾಯ್ ಗಿಡಗಳ ಪ್ರದರ್ಶಿಕೆ, ವಿವಿಧ ತರಕಾರಿ ಹಣ್ಣುಗಳನ್ನು ಬಳಸಿ ಕಲಾಕೃತಿಗಳ ಕೆತ್ತನೆ ಹಾಗೂ ಇಕೆಬನಾ ಜೋಡಣೆ ಎಲ್ಲರನ್ನೂ ಆಕರ್ಷಿಸಲಿವೆ.

ವಿಶೇಷ ಆಕರ್ಷಣೆಗಳಿವು: 35 ಸಾವಿರಕ್ಕೂ ಹೆಚ್ಚು 40 ಬಗೆಯ ವಿವಿಧ ಜಾತಿಯ ಹೂವುಗಳ ಅಲಂಕಾರಿಕ ಕುಂಡಗಳ ಜೋಡಣೆ, 1.50 ಲಕ್ಷ ವಿವಿಧ ಜಾತಿಯ ಅಲಂಕಾರಿಕ ಗಿಡಗಳಾದ ಪೆಟೋನಿಯಾ, ಸಾಲ್ವಿಯಾ, ಅಂಟಿರೈನಂ, ಸೆಲೋಶಿಯಾ, ಮಾರಿಗೋಲ್ಡ್, ಜೀನಿಯಾ, ಸೇವಂತಿಗೆ, ಪಾಯ್ನಿಸೆಟಿಯಾಗಳು.

ವಿವಿಧ ಜಿಲ್ಲೆಗಳ ಕೈಮಗ್ಗ, ನೇಕಾರರ ಸಹಕಾರ ಸಂಘಗಳು ಭಾಗವಹಿಸಿವೆ. ಕೈ ಮಗ್ಗ ನೇಕಾರರಿಂದ ತಯಾರಿಸಿರುವ ಹತ್ತಿ, ರೇಷ್ಮೆ, ಮೊಳಕಾಲ್ಮೂರು ರೇಷ್ಮೆ ಸೀರೆ, ಚಿಂತಾಮಣಿ ರೇಷ್ಮೆ ಸೀರೆ, ಕಾಟನ್ ಸೀರೆ, ಪಂಚೆ, ಬೆಡ್‌ಶೀಟ್, ಟವಲ್, ಲುಂಗಿ ಹಾಗೂ ಇತರೆ ಕೈ ಮಗ್ಗ ಉತ್ಪನ್ನಗಳನ್ನು ಶೇ.20 ರಿಯಾಯಿತಿ ದರದಲ್ಲಿ ಮಾರಾಟ ಮಾಡಲಾಗುತ್ತಿದೆ.

ಕೃಷಿ ಇಲಾಖೆ, ಮೀನುಗಾರಿಕೆ ಇಲಾಖೆ, ಶಿಕ್ಷಣ ಇಲಾಖೆ, ಅರಣ್ಯ ಇಲಾಖೆ, ಪಶು ಸಂಗೋಪನೆ ಇಲಾಖೆ, ಆರೋಗ್ಯ ಇಲಾಖೆ, ಕೈಗಾರಿಕೆ ಮತ್ತು ಖಾದಿ ಮತ್ತು ಗ್ರಾಮೋದ್ಯೋಗ ವತಿಯಿಂದ ಕಲಾಕೃತಿಗಳನ್ನು ಹಾಗೂ ಪ್ರಾತ್ಯಕ್ಷಿಕೆಯನ್ನು ಪ್ರದರ್ಶಿಸಲಾಗುತ್ತಿದೆ.

ಕಾರ್ಯಕ್ರಮದಲ್ಲಿ ಶಾಸಕ ರವಿಕುಮಾರ್ ಗಣಿಗ, ಜಿಲ್ಲಾಧಿಕಾರಿ ಡಾ.ಕುಮಾರ್, ಸಿಇಒ ಶೇಖ್ ತನ್ವೀರ್ ಅಸಿಫ್,ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ, ನಗರ ಸಭೆಯ ಅಧ್ಯಕ್ಷ ನಾಗೇಶ್, ತೋಟಗಾರಿಕೆ ಇಲಾಖೆ ಉಪನಿರ್ದೇಶಕಿ ರೂಪಶ್ರೀ, ಕೈಮಗ್ಗ ಇಲಾಖೆ ಉಪನಿರ್ದೇಶಕ ರಂಗಸ್ವಾಮಿ ಸೇರಿದಂತೆ ಇತರರು ಹಾಜರಿದ್ದರು.

ಜೆಡಿಎಸ್ ಮುಖಂಡರಿಂದ ಪುಡಿ ರೌಡಿಗಳ ರೀತಿ ವರ್ತನೆ: ಗಂಗಾಧರ್ ಕಿಡಿ



ಸುದ್ದಿಗೋಷ್ಠಿಯಲ್ಲಿ ಮೈಷುಗರ್ ಅಧ್ಯಕ್ಷ ಸಿ.ಡಿ.ಗಂಗಾಧರ್ ಮಾತನಾಡಿದರು.

ಮಂಡ್ಯ, ಜ.24– ಸರ್ಕಾರಿ ಅಧಿಕಾರಿಯನ್ನು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಅವರ ಗುಮಾಸ್ತ ಎಂದಿರುವ ಜೆಡಿಎಸ್ ಮುಖಂಡರುಗಳು ಪುಡಿರೌಡಿಗಳ ರೀತಿ ವರ್ತಿಸುತ್ತಿದ್ದಾರೆ ಎಂದು ಮಂಡ್ಯ ಜಿಲ್ಲಾ ಕಾಂಗ್ರೆಸ್ ಹಾಗೂ ಮೈಷುಗರ್ ಅಧ್ಯಕ್ಷ ಸಿ.ಡಿ.ಗಂಗಾಧರ್ ಕಿಡಿಕಾರಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಂಬರಲಿರುವ ಮನ್‌ಮುಲ್ ಚುನಾವಣೆಯಲ್ಲಿ ಸೋಲಿನ ಹತಾಷೆಯಲ್ಲಿ ಸಿಲುಕಿರುವ ಜೆಡಿಎಸ್ ಹಾಗೂ ಬಿಜೆಪಿ ಕಾರ್ಯಕರ್ತರು ಇಲ್ಲಸಲ್ಲದ ಆರೋಪಗಳನ್ನು ಮಾಡುವ ಮೂಲಕ ಸರ್ಕಾರಿ ಅಧಿಕಾರಿಗಳ ಮೇಲೆ ಅಪವಾದ ಹೊರಿಸಿ ಪ್ರತಿಭಟನೆ ಮಾಡಿದ್ದಾರೆ ಎಂದರು.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಿಯಮ ಉಲ್ಲಂಘನೆಯಾಗಿದ್ದಲ್ಲಿ ಅದರ ವಿರುದ್ಧ ಕಾನೂನು ಹೋರಾಟ ಮಾಡಬೇಕು. ಅದನ್ನು ಹೊರತುಪಡಿಸಿ ಅಧಿಕಾರಿಯ ವಿರುದ್ಧ ಇಲ್ಲಸಲ್ಲದ ಆರೋಪ ಮಾಡಿ, ಅಧಿಕಾರಿಯನ್ನು ಅಟ್ಟಾಡಿಸಿಕೊಂಡು ಓಡಿಸುವ ಹೇಳಿಕೆ ನೀಡಿ ದೌರ್ಜನ್ಯ, ದಬ್ಬಾಳಿಕೆ, ಬೆದರಿಕೆ ಯನ್ನು ಒಡ್ಡಿದ್ದು ಇದಕ್ಕೆ ಹೆದರುವುದಿಲ್ಲ ಎಂದು ಹೇಳಿದರು.

ಬಿಜೆಪಿ ಹಾಗೂ ಜೆಡಿಎಸ್ ಕಾರ್ಯಕರ್ತರು ಅನಗತ್ಯ ಹೇಳಿಕೆ ನೀಡಿ ಪ್ರತಿಭಟನೆ ನಡೆಸುತ್ತಿದ್ದು, ವಿರೋಧ ಪಕ್ಷದಲ್ಲಿ ನಿಂತು ಆಡಳಿತ ನಡೆಸುತ್ತಿರುವವರು ಉತ್ತರ ನೀಡಲು ತಡಕಾಡುವಂತಹ ಹೇಳಿಕೆ ನೀಡಲು ಮುಂದಾಗಬೇಕು. ಇಲ್ಲವಾದರೆ ಆರೋಪಗಳು ಸತ್ಯವಾದಲ್ಲಿ ನ್ಯಾಯಾಲಯದಲ್ಲಿ ಹೋರಾಟ ಮಾಡಲು ಮುಂದಾಗಬೇಕು ಎಂದು ತಾಕೀತು ಮಾಡಿದರು.

ಗೋಷ್ಠಿಯಲ್ಲಿ ಮುಡಾ ಅಧ್ಯಕ್ಷ ನಹೀಮ್, ಕಾಂಗ್ರೆಸ್ ನಗರ ಅಧ್ಯಕ್ಷ ರುದ್ರಪ್ಪ, ಎಸ್ಸಿಎಸ್ಟಿ ಘಟಕದ ಅಧ್ಯಕ್ಷ ಶ್ರೀಧರ್, ವಿಜಯ್‌ಕುಮಾರ್, ನಾಗರಾಜು, ರಾಮಚಂದ್ರು, ಅಪ್ಪಾಜಿಗೌಡ, ಶಿವಲಿಂಗೇಗೌಡ ಇದ್ದರು.

ಫೆ.8ರಂದು ಪಾಂಡವಪುರ ಪಿಎಲ್‌ಡಿ ಬ್ಯಾಂಕ್‌ಗೆ ಚುನಾವಣೆ

ಪಾಂಡವಪುರ, ಜ.24– ಪಾಂಡವಪುರ ತಾಲೂಕು ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ (ಪಿಎಲ್‌ಡಿ)ಬ್ಯಾಂಕ್‌ನ ಆಡಳಿತ ಮಂಡಳಿಗೆ ಫೆ.8ರಂದು ಚುನಾವಣೆ ನಿಗಧಿಯಾಗಿದ್ದು ಇಂದಿನ ಜ.31ರವರೆಗೆ ನಾಮಪತ್ರ ಸಲ್ಲಿಸಬಹುದಾಗಿದೆ ಎಂದು ಚುನಾವಣಾಧಿಕಾರಿಯೂ ಆದ ತಾಪಂ ಇಓ ಎಸ್.ಎಂ. ಲೋಕೇಶ್ ಮೂರ್ತಿ ತಿಳಿಸಿದರು.

ಪಟ್ಟಣದ ಪಿಎಲ್ ಡಿ ಬ್ಯಾಂಕ್‌ನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪಿಎಲ್‌ಡಿ ಬ್ಯಾಂಕ್‌ನ 14 ಕ್ಷೇತ್ರಗಳ ಆಡಳಿತ ಮಂಡಳಿಯ ನಿರ್ದೇಶಕ ಸ್ಥಾನಕ್ಕೆ ಚುನಾವಣೆ ನಿಗಧಿಯಾಗಿದೆ. 14 ಕ್ಷೇತ್ರಗಳ ಪೈಕಿ 13 ಸಾಲಗಾರರ ಕ್ಷೇತ್ರ, 1 ಸಾಲಗಾರರಲ್ಲದ ಕ್ಷೇತ್ರವಾಗಿದೆ. 7 ಸಾಮಾನ್ಯ ಕ್ಷೇತ್ರ, ಪರಿಶಿಷ್ಟ ಕ್ಷೇತ್ರ–1, ಪರಿಶಿಷ್ಠ ಪಂಗಡ–1, ಮಹಿಳಾ ಕ್ಷೇತ್ರ–2, ಹಿಂದುಳಿದ ವರ್ಗ 'ಎ'–1, ಹಿಂದುಳಿದ ವರ್ಗ 'ಬಿ'–1, ಮೀಸಲು ನಿಗಧಿಯಾಗಿದೆ ಸಾಲಗಾರರ ಕ್ಷೇತ್ರದಲ್ಲಿ 1437 ಹಾಗೂ ಸಾಲಗಾರರಲ್ಲದ ಕ್ಷೇತ್ರದಿಂದ 513 ಮತದಾರರಿದ್ದಾರೆ ಎಂದರು.

ನಾರಾಯಣ್ (ಮಾದಯ್ಯ) ನಿಧನ



ಮದ್ದೂರು, ಜ.24– ತಾಲೂಕಿನ ದೇಶಹಳ್ಳಿ ಗ್ರಾಮದ ಹಿರಿಯ ಸಾಹಿತಿ ನಾರಾಯಣ್ (ಮಾದಯ್ಯ) ವಯೋಸಹಜ ಅನಾರೋಗ್ಯದಿಂದ ಶುಕ್ರವಾರ ಬೆಳಿಗ್ಗೆ ನಿಧನರಾದರು. ಅವರಿಗೆ 82 ವರ್ಷ ವಯಸ್ಸಾಗಿತ್ತು. ಮೃತರು ಪತ್ನಿ, ಓರ್ವ ಪುತ್ರ ಹಾಗೂ ಇಬ್ಬರು ಪುತ್ರಿಯರನ್ನು ಅಗಲಿದ್ದು, ಮೃತರ ಅಂತ್ಯಕ್ರಿಯೆ ಗ್ರಾಮದ ಅವರ ತೋಟದಲ್ಲಿ ಶುಕ್ರವಾರ ಸಂಜೆ ನಡೆಯಿತು.

ಮನ್‌ಮುಲ್ ಚುನಾವಣೆ: ಒಂದೇ ದಿನ ಏಳು ಮಂದಿ ನಾಮಪತ್ರ ಸಲ್ಲಿಕೆ



ಜೆಡಿಎಸ್ ಬೆಂಬಲಿತ ಅಭ್ಯರ್ಥಿ ಬಿ.ಆರ್. ರಾಮಚಂದ್ರು ಅವರು ಎಡಿಸಿ ಶಿವಾನಂದಮೂರ್ತಿ ಅವರಿಗೆ ನಾಮಪತ್ರ ಸಲ್ಲಿಸಿದರು.

ಮಂಡ್ಯ, ಜ.24– ತೀವ್ರ ಕುತೂಹಲ ಕೆರಳಿಸಿರುವ ಮಂಡ್ಯ ಜಿಲ್ಲಾ ಹಾಲು ಒಕ್ಕೂಟದ 12 ಮಂದಿ ನಿರ್ದೇಶಕ ಸ್ಥಾನಗಳಿಗೆ ವಿವಿಧ ತಾಲೂಕಿನಿಂದ ಶುಕ್ರವಾರ ಒಂದೇ ದಿನ ಬರೋಬ್ಬರಿ ಏಳು ಮಂದಿ ನಾಮಪತ್ರ ಸಲ್ಲಿಸಿದರು.

ಜೆಡಿಎಸ್‌ನಿಂದ ನಾಲ್ಕು ಮಂದಿ ಉಮೇದುವಾರಿಕೆ: ಜೆಡಿಎಸ್ ಪಕ್ಷದಿಂದ ನಾಲ್ಕು ಮಂದಿ ನಿರ್ದೇಶಕ ಸ್ಥಾನಕ್ಕೆ ನಾಮಪತ್ರ ಸಲ್ಲಿಸಿದ್ದು, ಈ ಪೈಕಿ ಹಾಲಿ ನಿರ್ದೇಶಕರು ಆಗಿರುವ ಶಾಸಕ ಹೆಚ್.ಟಿ. ಮಂಜು ಕೆ.ಆರ್.ಪೇಟೆ ತಾಲ್ಲೂಕಿನಿಂದ ಮನ್‌ಮುಲ್ ನಿರ್ದೇಶಕ ಸ್ಥಾನಕ್ಕೆ ಮತ್ತೊಮ್ಮೆ ಅದೃಷ್ಟ ಪರೀಕ್ಷೆಗೆ ಇಳಿಯುತ್ತಿದ್ದು, ಶುಕ್ರವಾರ ಮಂಡ್ಯ ನಗರದ ಜಿಲ್ಲಾಧಿಕಾರಿ ಕಚೇರಿಯಲ್ಲಿ ಜೆಡಿಎಸ್ ಮುಖಂಡರಾದ ಜಾನಕಿರಾಮ್, ಐನೋರಹಳ್ಳಿ ಮಲ್ಲೇಶ್ ಸೇರಿದಂತೆ ಇತರರೊಂದಿಗೆ ಚುನಾವಣಾಧಿಕಾರಿ ಬಿ.ಸಿ.ಶಿವಾನಂದಮೂರ್ತಿಗೆ ತಮ್ಮ ಉಮೇದುವಾರಿಕೆ ಸಲ್ಲಿಸಿದರು.

ಮಂಡ್ಯ ತಾಲೂಕಿನ ಮೂರು ನಿರ್ದೇಶಕ ಸ್ಥಾನಗಳ ಪೈಕಿ ಮೂರು ಸ್ಥಾನಕ್ಕೂ ಜೆಡಿಎಸ್ ಬೆಂಬಲಿತ ಅಭ್ಯರ್ಥಿಗಳಾಗಿ ಮನ್‌ಮುಲ್ ಮಾಜಿ ಅಧ್ಯಕ್ಷ ಬಿ.ಆರ್. ರಾಮಚಂದ್ರು, ಹಾಲಿ ಉಪಾಧ್ಯಕ್ಷ ಎಂ.ಎಸ್. ರಘುನಂದನ್ ಹಾಗೂ ಕನ್ನಲಿ ವಿಜಯ್ ಕುಮಾರ್ ನಾಮಪತ್ರ ಸಲ್ಲಿಸಿದರು.

ಈ ಸಂದರ್ಭದಲ್ಲಿ ನಗರಸಭೆ ಅಧ್ಯಕ್ಷ, ಎಂ.ವಿ.ಪ್ರಕಾಶ್, ಉಪಾಧ್ಯಕ್ಷ ಎಂ.ಪಿ.ಅರುಣ್ ಕುಮಾರ್, ಸದಸ್ಯ ರಾಮಲಿಂಗಯ್ಯ, ಮೀನಾಕ್ಷಿ ಪುಟ್ಟಸ್ವಾಮಿ, ಮುಖಂಡ ಬೂದನೂರು ಸ್ವಾಮಿ ಉಪಸ್ಥಿತರಿದ್ದರು.

ಅದೇ ರೀತಿ ಮಂಡ್ಯ ತಾಲೂಕಿನಿಂದ ನಿರ್ದೇಶಕ ಸ್ಥಾನಕ್ಕೆ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಯಾಗಿ ಕೆಬ್ಬಳ್ಳಿ ರಾಜು, ಮಳವಳ್ಳಿ ತಾಲೂಕಿನಿಂದ ಕೃಷ್ಣೇಗೌಡ ನಾಮಪತ್ರ ಸಲ್ಲಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ.ಡಿ.ಗಂಗಾಧರ್, ಮನ್‌ಮುಲ್ ನಿರ್ದೇಶಕ ವಿಶ್ವಾಸ್, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಚಿಕ್ಕಲಿಂಗಯ್ಯ, ಪುರಸಭೆ ಮಾಜಿ ಅಧ್ಯಕ್ಷ ದೊಡ್ಡಯ್ಯ, ಮುಖಂಡ ಹಂಚಹಳ್ಳಿ ಲೋಕೇಶ್ ಇದ್ದರು.

ಪಾಂಡವಪುರ ತಾಲೂಕಿನ ಒಂದು ನಿರ್ದೇಶಕ ಸ್ಥಾನಕ್ಕೆ ಕಾಂಗ್ರೆಸ್ ಮತ್ತು ರೈತ ಸಂಘದ ಬೆಂಬಲಿತ ಅಭ್ಯರ್ಥಿಯಾಗಿ ಕಾಡೇನಹಳ್ಳಿ ರಾಮಕೃಷ್ಣ ಚುನಾವಣಾಧಿಕಾರಿ ಬಿ.ಸಿ.ಶಿವಾನಂದಮೂರ್ತಿ ಅವರಿಗೆ ತಮ್ಮ ಉಮೇದುವಾರಿಕೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಶಾಸಕ ದರ್ಶನ್ ಪುಟ್ಟಣ್ಣಯ್ಯ, ಮುಖಂಡರಾದ ರವಿ ಬೋಜೇಗೌಡ, ಚಿನಕುರಳಿ ರಮೇಶ್ ಇತರರಿದ್ದರು.


ಅಂಚೆ ಸಹಾಯಕ ಕೆಲಸದಿಂದ ವಜಾ

ಮಂಡ್ಯ, ಜ.24– ಮಂಡ್ಯ ಅಂಚೆ ಇಲಾಖೆಯಲ್ಲಿ ಅಂಚೆ ಸಹಾಯಕರಾಗಿ ಕೆಲಸ ನಿರ್ವಹಿಸುತ್ತಿದ್ದ ಡಿ. ಆರ್. ತನುಜ್ (ಬಿನ್ ಲೇಟ್ ರಮೇಶ್ ಡಿ.ಎಸ್. ಡಿ 4/4714/1, 1ನೇ ಕ್ರಾಸ್, ಬಿ.ಬಿ.ಕೆ ಲೇಔಟ್) ಅವರು ಕೆರಗೋಡು ಅಂಚೆ ಕಚೇರಿಯಲ್ಲಿ ದಿನಾಂಕ 13.11.2014 ರಿಂದ 08.11.2017 ರವರೆಗೆ ಅಂಚೆ ಸಹಾಯಕರಾಗಿ ಕೆಲಸ ನಿರ್ವಹಿಸುವ ಸಂದರ್ಭದಲ್ಲಿ ಮೃತ ವ್ಯಕ್ತಿಯ ಖಾತೆಯ ಹಣವನ್ನು ದುರುಪಯೋಗ ಪಡಿಸಿಕೊಂಡ ಕಾರಣ ಅವರ ವಿರುದ್ಧ ಇಲಾಖಾ ಕ್ರಮ ಕೈಗೊಂಡು ಇಲಾಖೆ ಸೇವೆಯಿಂದ ವಜಾಗೊಳಿಸಲಾಗಿದೆ. ಆದ್ದರಿಂದ ಸದರಿ ಅವರೊಂದಿಗೆ ಅಂಚೆ ಇಲಾಖೆಗೆ ಸಂಬಂಧಿಸಿದಂತೆ ಯಾವುದೇ ವ್ಯವಹಾರಗಳನ್ನು ಸಾರ್ವಜನಿಕರು ಕೈಗೊಳ್ಳುವಂತಿಲ್ಲ ಎಂದು ಮಂಡ್ಯ ಅಂಚೆ ಅಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಿದ್ದರಾಮಯ್ಯ ಮೊದಲಿಂದಲೂ ಮೈಸೂರು ಅರಮನೆ 'ಟಾರ್ಗೆಟ್' ಮಾಡುತ್ತಲೇ ಬಂದಿದ್ದಾರೆ

ಮೈಸೂರು ರಾಜವಂಶಸ್ಥರಾದ ಆರ್.ರಾಜಾಚಂದ್ರ ಪ್ರತಿಕ್ರಿಯೆ

ಬೆಂಗಳೂರು, ಜ.24(ಬಿಎಲ್‌ಯು)–ಈಗ ಸಚಿವ ಸಂಪುಟ ಇಡೀ ಬೆಂಗಳೂರು ಅರಮನೆ ಮೈದಾನ ವಶಪಡಿಸಿಕೊಳ್ಳಲು ನಿರ್ಧರಿಸಿ, ಸುಗ್ರೀವಾಜ್ಞೆ ತರಲು ಮುಂದಾಗಿದೆ. ಅದಕ್ಕೂ ರಾಜ್ಯಪಾಲರ ಸಹಿ ಬೇಕಲ್ಲವೇ. ಈ ಮಧ್ಯೆ ನ್ಯಾಯಾಂಗ ನಿಂದನೆ ತೂಗುಕತ್ತಿ ಸರ್ಕಾರದ ಮೇಲಿದೆ. ಫೆ.4ರ ವಿಚಾರಣೆ ವೇಳೆ ನ್ಯಾಯಾಲಯದ ನಿರ್ಣಯ ಏನಿರುತ್ತದೆಯೋ ನೋಡೋಣ ಎಂದು ಮೈಸೂರು ರಾಜವಂಶಸ್ಥರಾದ ಆರ್.ರಾಜಾಚಂದ್ರ ಪ್ರತಿಕ್ರಿಯಿಸಿದರು.



ಆರ್.ರಾಜಾಚಂದ್ರ

ಟಾರ್ಗೆಟ್: ಸಿದ್ದರಾಮಯ್ಯನವರಿಗೆ ಮೊದಲಿನಿಂದಲೂ ಹುಂಬತನ. ಮೈಸೂರು ಅರಮನೆ ಕಂಡರಾಗದು. ಟಾರ್ಗೆಟ್ ಮಾಡುತ್ತಲೇ ಬರುತ್ತಿದ್ದಾರೆ. ಈ ಮನೋಭಾವನೆ ಪ್ರಜಾಪ್ರಭುತ್ವದಲ್ಲಿ ಒಳ್ಳೆಯದಲ್ಲ ಎಂದ ಅವರು, ಬೆಂಗಳೂರು ಅರಮನೆ ಆವರಣದ 15 ಎಕರೆ ಭೂಮಿಯಲ್ಲಿ ಬಳ್ಳಾರಿ ರಸ್ತೆ ಹಾಗೂ ಜಯಮಹಲ್ ರಸ್ತೆ ವಿಸ್ತರಣೆಗಾಗಿ ಮೈಸೂರು ರಾಜವಂಶಸ್ಥರಿಗೆ ಟಿಡಿಆರ್(ಮೌಲ್ಯ ವರ್ಗಾಯಿಸಬಲ್ಲ ಅಭಿವೃದ್ಧಿ ಹಕ್ಕು) ನೀಡಿದ್ದರೆ ಸರ್ಕಾರಕ್ಕೇನು ನಷ್ಟ ಆಗುತ್ತಿರಲಿಲ್ಲ ಎಂದು ಅಭಿಪ್ರಾಯಪಟ್ಟಿದ್ದಾರೆ.

ಬಳ್ಳಾರಿ ರಸ್ತೆ ಹಾಗೂ ಜಯಮಹಲ್ ರಸ್ತೆ ನಿರ್ಮಾಣಕ್ಕೆ ಬಳಕೆಯಾಗುವ ಭೂಮಿಗೆ ಸರ್ಕಾರ ಹಣ ವ್ಯಯಿಸದೆ ಟಿಡಿಆರ್ ಸರ್ಟಿಫಿಕೇಟ್ ಮಾತ್ರ ಕೊಟ್ಟಿದ್ದರೆ ಸಾಕಾಗಿತ್ತು. ಇದರಿಂದ ಸರ್ಕಾರಕ್ಕೆ ಯಾವುದೇ ರೀತಿಯಲ್ಲೂ ನಷ್ಟವಾಗುತ್ತಿರಲಿಲ್ಲ. ಇದರಿಂದ ರಸ್ತೆ ವಿಸ್ತರಣೆಯಾಗಿ ಜನರಿಗೆ ಬಹಳಷ್ಟು ಉಪಯೋಗ ಆಗುತ್ತಿತ್ತು. ಆದರೆ ಮೈಸೂರು ರಾಜವಂಶಸ್ಥರಿಗೆ ಟಿಡಿಆರ್ ನೀಡಬೇಕಾಗುತ್ತದೆ ಎಂಬ ಒಂದೇ ಕಾರಣಕ್ಕೆ ಅರಮನೆ ಮೈದಾನ ವಶಪಡಿಸಿಕೊಳ್ಳಲು ಸುಗ್ರೀವಾಜ್ಞೆ ತರಲು ಮುಂದಾಗಿರುವುದು ಸರಿಯಲ್ಲ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು.

ರಸ್ತೆ ವಿಸ್ತರಣೆಗೆ 15 ಎಕರೆ ಭೂಮಿ ಬಳಸಿಕೊಂಡರೆ ಮೈಸೂರು ರಾಜವಂಶಸ್ಥರಿಗೆ ಟಿಡಿಆರ್ ನೀಡಿ, ಇಲ್ಲವೆ ನ್ಯಾಯಾಲಯದ ಮುಂದೆ ಹಾಜರಾಗಿ ಎಂದು ಸುಪ್ರೀಂಕೋರ್ಟ್ ಜನವರಿ 22ರವರೆಗೆ ಗಡುವು ನೀಡಿತ್ತು. ಆದರೆ ಜನವರಿ 22 ರಂದು ನಡೆಯಬೇಕಿದ್ದ ವಿಚಾರಣೆಯಲ್ಲಿ ಮೊದಲಿದ್ದ ನ್ಯಾಯಮೂರ್ತಿಗಳಿಲ್ಲದ ಕಾರಣ ಫೆಬ್ರವರಿ 4ಕ್ಕೆ ವಿಚಾರಣೆ ಮುಂದೂಡಲ್ಪಟ್ಟಿತು. ಆದರೆ ಈಗ ಸರ್ಕಾರ ತುರ್ತು ಸಚಿವ ಸಂಪುಟ ಸಭೆ ಕರೆದು ತೀರ್ಮಾನ ಮಾಡಿದೆ. ಈ ವಿಚಾರವಾಗಿ ಫೆಬ್ರವರಿ 4ರಂದು ಸುಪ್ರೀಂಕೋರ್ಟ್‌ಗೆ ತನ್ನ ತೀರ್ಮಾನ ತಿಳಿಸಲಿದೆ. ಸುಪ್ರೀಂಕೋರ್ಟ್ ಇದರ ಬಗ್ಗೆ ಏನು ನಿರ್ಧಾರ ಕೈಗೊಳ್ಳುತ್ತದೆ ಎಂಬುದನ್ನು ಕಾದು ನೋಡಬೇಕಿದೆ ಎಂದು ಹೇಳಿದರು.

ಹತ್ತು ವರ್ಷಗಳ ಹಿಂದೆಯೇ ಸುಪ್ರೀಂಕೋರ್ಟ್ ಈ ವಿಚಾರವಾಗಿ ತೀರ್ಪು ನೀಡಿದೆ. ಆದರೆ ಸರ್ಕಾರ ಮಾತ್ರ ಟಿಡಿಆರ್ ನೀಡಿ ರಸ್ತೆ ವಿಸ್ತರಣೆ ಯೋಜನೆ ಕೈಗೊಳ್ಳಲು ಮೀನಾಮೇಷ ಎಣಿಸುತ್ತಿರುವುದೇಕೆ ಎನ್ನುವುದು ತಿಳಿಯುತ್ತಿಲ್ಲ. ಸಾರ್ವಜನಿಕ ಹಿತಾಸಕ್ತಿಗಾಗಿ ಟಿಡಿಆರ್ ನೀಡುವುದು ಹೊಸತೇನು ಅಲ್ಲ. ಅಮೇರಿಕಾ ಸೇರಿದಂತೆ ಬಹಳಷ್ಟು ದೇಶಗಳಲ್ಲಿ ಈ ವ್ಯವಸ್ಥೆ ಇದೆ. ಅಷ್ಟೆ ಅಲ್ಲದೆ ಭಾರತದಲ್ಲಿ ಕೂಡ ಈ ವ್ಯವಸ್ಥೆ ಜಾರಿಯಲ್ಲಿದೆ. ಆದರೆ ಕರ್ನಾಟಕದಲ್ಲಿ ಈ ಸರ್ಕಾರ ಏಕೆ ಒಪ್ಪುತ್ತಿಲ್ಲ ಎಂಬುದು ನಿಗೂಢವಾಗಿದೆ ಎಂದು ರಾಜಾಚಂದ್ರ ಹೇಳಿದರು.

ಮೂರನೇ ಪುಟದಿಂದ

ಸರ್ಕಾರದ ಸುಪರ್ದಿಗೆ ಸುಗ್ರೀವಾಜ್ಞೆ

ಗಂಡಾಂತರ ಪರಿಸ್ಥಿತಿ ಉದ್ಭವವಾಗುತ್ತದೆ. ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಸಾಧ್ಯವಾಗದ ಸ್ಥಿತಿಯೂ ಉದ್ಭವಿಸುತ್ತದೆ ಎಂದು ಸಚಿವರು ಹೇಳಿದರು. ಈ ಸುಗ್ರೀವಾಜ್ಞೆ ಜಾರಿ ಮಾಡುವುದರಿಂದ ಅಗತ್ಯವಿರುವಷ್ಟು ಜಾಗವನ್ನು ಬಳಸಿಕೊಳ್ಳಲು ಮತ್ತು ಉದ್ದೇಶಿತ ಪ್ರಸ್ತಾವನೆಯನ್ನು ಕೈಬಿಡಲು ಸರ್ಕಾರಕ್ಕೆ ಅಧಿಕಾರ ದೊರೆಯುತ್ತದೆ. ಯಾವುದೇ ನ್ಯಾಯಾಲಯದ ತೀರ್ಪು ಅಥವಾ ಸರ್ಕಾರವು ಈ ಹಿಂದೆ ಕೈಗೊಂಡ ತೀರ್ಮಾನದಂತೆ ಯಾವುದೇ ಮೂಲ ಸೌಕರ್ಯ ಯೋಜನೆಯಿಂದ ಭಾಗಶಃ ಅಥವಾ ಸಂಪೂರ್ಣವಾಗಿ ಹಿಂದೆ ಸರಿಯಲು ಸುಗ್ರೀವಾಜ್ಞೆ ಅವಕಾಶ ನೀಡುತ್ತದೆ ಎಂದು ಎಚ್.ಕೆ.ಪಾಟೀಲ್ ವಿವರಿಸಿದರು.

ಒಂದು ವೇಳೆ ಸುಪ್ರೀಂಕೋರ್ಟ್ ಸಿವಿಲ್ ಮೇಲ್ಮನವಿ ವಿಚಾರದಲ್ಲಿ ಸರ್ಕಾರದ ಪರವಾಗಿ ಆದೇಶ ನೀಡಿದರೆ, ಮಾರಾಟ ಅಥವಾ ಬೇರೆ ಯಾವುದೇ ರೀತಿಯಲ್ಲಿ ಬಳಕೆಯಾದ ಜಾಗದ ಟಿಡಿಆರ್ ಮೊತ್ತವನ್ನು ಹಿಂಪಡೆಯುವುದಕ್ಕೆ ಸಾಧ್ಯವಿಲ್ಲ. ಹೀಗಾಗಿ ಸುಗ್ರೀವಾಜ್ಞೆಯ ಮೂಲಕ ಅಧಿಕಾರ ಪಡೆಯುವುದೇ ಸೂಕ್ತ ಎಂದು ಸಂಪುಟ ಸಭೆಯಲ್ಲಿ ಅಭಿಪ್ರಾಯ ವ್ಯಕ್ತವಾಯಿತು ಎಂದು ಹೇಳಿದರು. ಕೆಲವೇ ದಿನಗಳಲ್ಲಿ ಈ ಪ್ರಕರಣದ ವಿಚಾರಣೆ ಬರಲಿದ್ದು, ಸುಪ್ರೀಂ ಕೋರ್ಟ್‌ಗೆ ಪ್ರಮಾಣ ಪತ್ರವನ್ನೂ ಸಲ್ಲಿಸಬೇಕಾಗಿರುವ ಕಾರಣ ತುರ್ತು ಸಂಪುಟ ಸಭೆ ನಡೆಸಲಾಯಿತು ಎಂದೂ ಪಾಟೀಲ್ ತಿಳಿಸಿದರು.

ಇನ್ನೇನು, ಕಾನೂನು ಸಮರ ಇದ್ದೇ ಇದೆ!

1996ರಲ್ಲಿನ ಅಕ್ವಿಜೇಶನ್ ಆ್ಯಂಡ್ ಸ್ಟೇ ಆರ್ಡರ್ ಕೂಡ ನಮ್ಮ ಬಳಿಯಿದೆ. ಸುಪ್ರೀಂ ಕೋರ್ಟ್ ಕೂಡ ಬೆಂಗಳೂರು ಅರಮನೆ ಜಾಗದ ಬಗ್ಗೆ ಹೇಳಿದೆ. ಕರ್ನಾಟಕದ ಸರ್ಕಾರದ ಅಣತಿಯಂತೆ ಇದುವರೆಗೂ ಅಲ್ಲಿ ಎಲ್ಲವೂ ನಡೆದಿದೆ. ಯಾವುದೂ ಕೂಡ ಅವರಿಗೆ ಗೊತ್ತಿಲ್ಲದ ರೀತಿ ನಡೆದಿಲ್ಲ ಎಂದು ಹೇಳಿದ್ದಾರೆ.

ಸರ್ಕಾರ ಸ್ಟೇ ಇಲ್ಲ ಅಂದಿದೆ. ಆದರೆ ಸ್ಟೇ ಇದೆ ಹಾಗೂ ಮಾಲೀಕತ್ವವೂ ಇದೆ. ಈಗಲೂ ನಾವೇ ಬೆಂಗಳೂರು ಅರಮನೆ ಜಾಗದ ಮಾಲೀಕತ್ವ ಹೊಂದಿದ್ದೇವೆ. ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಹಾಗೂ ಅವರ ಸಹೋದರಿಯರೂ ಓನರ್‌ಶಿಪ್‌ನಲ್ಲಿದ್ದಾರೆ. ಇನ್ನೂ ಅನೇಕರ ಹೆಸರಿದೆ. ಅಲ್ಲಿನ ರಸ್ತೆಗೆ ಹೋಗಿರುವ ಪ್ರಾಪರ್ಟಿ ಕೂಡ ನಮ್ಮದೇ ಆಗಿದೆ.

ರಸ್ತೆಗೆ 15 ಎಕರೆ 36 ಗುಂಟೆ ಬಳಸಿದ್ದಾರೆ. ಟಿ.ಡಿ.ಆರ್ ಕೊಡಬಾರದು ಅಂತ ಈ ರೀತಿ ಮಾಡಿದ್ದಾರೆ. ಟಿ.ಡಿ.ಆರ್ ಹೇಗೆ ಬಂತು ಅಂದರೆ ಜನರಿಗೆ ರಸ್ತೆ ಬೇಕು ಹಾಗಾಗಿ ನಿಮ್ಮ ಜಾಗ ಬಳಸಿಕೊಳ್ಳುತ್ತೇವೆ. ನಿಮಗೆ ಟಿ.ಡಿ.ಆರ್ ಕೊಡುತ್ತೇವೆ ಅಂತ ಬಿಬಿಎಂಪಿ ಹೇಳಿತ್ತು. ಆದರೆ ಕೋರ್ಟ್‌ಗೆ ಹೋಗಿದ್ದರು. 2014ರಲ್ಲಿ ಇದು ಚರ್ಚೆ ಆಗಿದೆ. ಎಲ್ಲ ವಾದ ಪ್ರತಿವಾದ ಕೇಳಿ ಟಿ.ಡಿ.ಆರ್ ಒಪ್ಪಿದ್ದರು. ಟಿ.ಡಿ.ಆರ್ ಮೌಲ್ಯ ಅಂದು ಫಿಕ್ಸ್ ಆಗಿರಲಿಲ್ಲ. 3 ಸಾವಿರ ಕೋಟಿ ಬರುತ್ತದೆ ಅಂತ ಈಗ ಬೇರೆ ರೀತಿ ಮಾಡುತ್ತಿದ್ದಾರೆ. ಆವಾಗಲೇ ನಮಗೆ ಟಿ.ಡಿ.ಆರ್ ಕೊಟ್ಟಿದ್ದರೆ ಇಷ್ಟು ಮೊತ್ತ ಆಗುತ್ತಿರಲಿಲ್ಲ. ನಾವು ಕಾನೂನು ಮೂಲಕ ಹೋರಾಟ ಮಾಡುತ್ತೇವೆ ಎಂದು ತಿಳಿಸಿದ್ದಾರೆ.

ರಾಜ್ಯ ಸರ್ಕಾರ ಸಹಕರಿಸುತ್ತಿಲ್ಲ

136 ಸ್ಥಾನಗಳೊಂದಿಗೆ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಪಕ್ಷದಿಂದ ಮುಖ್ಯಮಂತ್ರಿ ಗಾದಿಯನ್ನು ಅಲಂಕರಿಸಿದ ಸಿದ್ದರಾಮಯ್ಯನವರು ತಮ್ಮ ಕುರ್ಚಿ ಭದ್ರಪಡಿಸಿಕೊಳ್ಳಲು ಆದ್ಯತೆ ನೀಡಿದ್ದಾರೆಯೇ ಹೊರತು ನಾಡಿನ ಜನರ ಹಿತ ಕಾಯುವಲ್ಲಿ ವಿಫಲಗೊಂಡಿದ್ದಾರೆ. ಮೈಕ್ರೋ ಫೈನಾನ್ಸ್‌ಗಳಲ್ಲಿ ಸಾಲ ಪಡೆದ ಕುಟುಂಬಗಳು ಆತ್ಮಹತ್ಯೆಗೆ ಶರಣಾಗಿರುವುದು ಇದಕ್ಕೆ ಉದಾಹರಣೆ ಎಂದು ಟೀಕಿಸಿದರು. 2018ರ ಕಾಂಗ್ರೆಸ್–ಜೆಡಿಎಸ್ ಮೈತ್ರಿ ಸರ್ಕಾರದಲ್ಲಿ ರೈತರು ವಿವಿಧ ಬ್ಯಾಂಕುಗಳು ಮತ್ತು ಸಹಕಾರ ಸಂಘಗಳಲ್ಲಿ ಪಡೆಯಲಾದ ಸಾಲ ಮನ್ನಾ ಮಾಡುವುದರ ಜತೆಗೆ ಮೈಕ್ರೋ ಫೈನಾನ್ಸ್‌ನಂತಹ ಎಲ್ಲಾ ಮಾದರಿಯ ಸಾಲಗಳನ್ನು ಮನ್ನಾ ಮಾಡಿ ಬಡಜನತೆಯನ್ನು ಋಣಮುಕ್ತರನ್ನಾಗಿ ಮಾಡುವ ಸಲುವಾಗಿ ರಾಷ್ಟ್ರಪತಿಗಳನ್ನು ಭೇಟಿ ಮಾಡಿ ಅಂಕಿತ ಹಾಕಿಸುವ ಸಂದರ್ಭದಲ್ಲಿ ನನ್ನನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಲಾಯಿತೆಂದು ಕಾಂಗ್ರೆಸ್ ವಿರುದ್ಧ ಹರಿಹಾಯ್ದರು. ತಮಗೆ ಉಪಮುಖ್ಯಮಂತ್ರಿ ಹುದ್ದೆ ಸೇರಿದಂತೆ ಹಲವು ರಾಜಕೀಯ ಸ್ಥಾನಮಾನಗಳನ್ನು ನೀಡಿದ ಹೆಚ್.ಡಿ.ದೇವೇಗೌಡರನ್ನು ದ್ವೇಷಿಸುವ ಸಿದ್ದರಾಮಯ್ಯನವರು, ತಾವು ಮುಖ್ಯಮಂತ್ರಿ ಹುದ್ದೆಗೇರಲು ಅಲ್ಪ ಸಹಕಾರ ನೀಡಿದ ಹೆಚ್.ವಿಶ್ವನಾಥ್ ಅವರ ವಿರುದ್ಧವೂ ದ್ವೇಷದ ರಾಜಕಾರಣ ಮಾಡುತ್ತಿರುವುದು ಎಷ್ಟು ಸರಿ ಎಂದು ಪ್ರಶ್ನಿಸಿದ ಕುಮಾರಸ್ವಾಮಿ ಕನಿಷ್ಠ ಕೃತಜ್ಞತೆ ಇಟ್ಟುಕೊಳ್ಳದ ಮುಖ್ಯಮಂತ್ರಿಗಳು ದೇವೇಗೌಡರ ಕುಟುಂಬದ ಜೊತೆಗೆ ಮೈಸೂರು ರಾಜವಂಶಸ್ಥರ ವಿರುದ್ಧವೂ ದ್ವೇಷದ ರಾಜಕಾರಣ ಮಾಡುತ್ತಿದ್ದಾರೆಂದು ಆರೋಪಿಸಿದರು. ಶಾಸಕಾಂಗ ಪಕ್ಷದ ನಾಯಕ ಸುರೇಶ್‌ಬಾಬು, ಯುವ ಜೆಡಿಎಸ್ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ವಿಧಾನ ಪರಿಷತ್ ಸದಸ್ಯ ಎಚ್.ವಿಶ್ವನಾಥ್, ಶಾಸಕ ಜಿ.ಡಿ.ಹರೀಶ್ ಗೌಡ, ಮಾಜಿ ಸಚಿವರಾದ ಸಾ.ರಾ. ಮಹೇಶ್, ಸಿ.ಎಸ್.ಪುಟ್ಟರಾಜು, ಎಂ.ಪಿ.ನಾಡಗೌಡ, ಮಾಜಿ ಸಚಿವ ಡಾ.ಕೆ.ಅನ್ನದಾನಿ ಮಾತನಾಡಿದರು. ಹೆಚ್.ಡಿ.ಕುಮಾರಸ್ವಾಮಿಯವರ ಗೆಲುವಿಗಾಗಿ ದುಡಿದಂತಹ ವಿವಿಧ ಸಮುದಾಯಗಳ ಪರವಾಗಿ ಎ.ಎಸ್. ಚನ್ನಬಸಪ್ಪ, ಗಣೇಶ್, ನಾಗಣ್ಣ, ಕೃಷ್ಣಶೆಟ್ಟಿ, ದಾಸಶೆಟ್ಟಿಶ್ರೀನಿವಾಸ್, ಭಾಗ್ಯಶಂಕರ್, ಬೋರಶೆಟ್ಟಿ, ಮದನಲಾಲ್‌ಜೈನ್ ಮತ್ತಿತರರನ್ನು ಸನ್ಮಾನಿಸಲಾಯಿತು.

ಮಾಜಿ ಶಾಸಕರಾದ ಅಶ್ವಿನ್‌ಕುಮಾರ್, ಕೆ.ಮಹದೇವ್, ವಿಧಾನಪರಿಷತ್ ಸದಸ್ಯರಾದ ಸಿ.ಎನ್.ಮಂಜೇಗೌಡ, ಕೆ.ವಿವೇಕಾನಂದ, ಮಾಜಿ ಸದಸ್ಯ ಕೆ.ಟಿ.ಶ್ರೀಕಂಠೇಗೌಡ, ರಾಜ್ಯ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ್, ಜಿ.ಪಂ. ಮಾಜಿ ಸದಸ್ಯರಾದ ಎಂ.ಟಿ.ಕುಮಾರ್, ಸಿ.ಜೆ.ದ್ವಾರಕೀಶ್, ಅಮಿತ್.ವಿ.ದೇವರ ಹಟ್ಟಿ, ತಾಲೂಕು ಅಧ್ಯಕ್ಷರಾದ ಹೆಚ್.ಸಿ.ಕುಮಾರ್, ಮೆಡಿಕಲ್‌ರಾಜಣ್ಣ, ವಕ್ತಾರ ಕೆ.ಎಲ್.ರಮೇಶ್, ಪುರಸಭೆ ಸದಸ್ಯರಾದ ಉಮೇಶ್, ಸಂತೋಷ್ ಗೌಡ, ಕೆ.ಎಲ್.ಜಗದೀಶ್, ಸರೋಜ ಮಹದೇವ್, ಮಂಜುಳಾ ಚಿಕ್ಕವೀರು, ಬಿ.ಎಸ್.ತೋಂಟದಾರ್ಯ ಹಾಜರಿದ್ದರು.

ಮೈಸೂರು ಪಾಲಿಕೆ ನೂತನ ಆಯುಕ್ತ

ಮಂಡ್ಯ ಜಿಪಂ ಸಿಇಓ ಆಗಿ ಉತ್ತಮ ರೀತಿಯಲ್ಲಿ ಕಾರ್ಯ ನಿರ್ವಹಿಸಿದ್ದು, ಕಳೆದ ವರ್ಷ ರಾಷ್ಟ್ರೀಯ ಮತದಾರರ ದಿನಾಚರಣೆ ಅಂಗವಾಗಿ ರಾಜ್ಯ ಚುನಾವಣೆ ಆಯೋಗ ನೀಡಿದ ರಾಜ್ಯ ಪ್ರಶಸ್ತಿಗೆ ಇವರು ಭಾಜನರಾಗಿದ್ದಾರೆ.

ಇವರ ವರ್ಗಾವಣೆ ಹಿನ್ನೆಲೆಯಲ್ಲಿ ಮಂಡ್ಯ ಜಿಪಂ ಸಿಇಓ ಪ್ರಭಾರವನ್ನು ಅಲ್ಲಿನ ಜಿಲ್ಲಾಧಿಕಾರಿ ಡಾ.ಕುಮಾರ ಅವರಿಗೆ ವಹಿಸಲಾಗಿದೆ. ಇನ್ನು 2023ರ ಜುಲೈನಿಂದ ಮೈಸೂರು ಮಹಾನಗರ ಪಾಲಿಕೆ ಆಯುಕ್ತರಾಗಿ ಕಾರ್ಯ ನಿರ್ವಹಿಸಿದ್ದ ಅಸಾದ್ ಉರ್ ರೆಹಮಾನ್ ಷರೀಫ್ ಅವರ ಸ್ಥಳ ನಿಯೋಜನೆ ಬಗ್ಗೆ ಮಾಹಿತಿ ಲಭ್ಯವಾಗಿಲ್ಲ.

ವರ್ಗಾವಣೆಗೊಂಡವರು: ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿ ಡಾ.ಎನ್.ಶಿವಶಂಕರ ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ, ಈ ಹುದ್ದೆಯಲ್ಲಿದ್ದ ಮಹಾಂತೇಶ್ ಬೀಳಗಿ ಕರ್ನಾಟಕ ರಾಜ್ಯ ಖನಿಜ ನಿಗಮದ ನಿರ್ದೇಶಕ, ಧಾರವಾಡ ಜಿಪಂ ಸಿಇಓ ಶ್ರೀಮತಿ ಟಿ.ಕೆ.ಸ್ವರೂಪ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ನಿರ್ದೇಶಕಿ(ಇ–ಆಡಳಿತ), ಮಂಡ್ಯ ಜಿಲ್ಲಾಧಿಕಾರಿ ಡಾ.ಕುಮಾರ ಮಂಡ್ಯ ಜಿಪಂ ಪ್ರಭಾರ ಸಿಇಓ, ರಾಜ್ಯ ಖನಿಜ ನಿಗಮದ ನಿರ್ದೇಶಕ ಜಯವಿಭವಸ್ವಾಮಿ ಸಾರ್ವಜನಿಕ ಗ್ರಂಥಾಲಯಗಳ ಇಲಾಖೆ ಆಯುಕ್ತ, ಬೆಂಗಳೂರು ಗ್ರಾಮಾಂತರ ಜಿಪಂ ಸಿಇಓ ಡಾ.ಕೆ.ಎನ್.ಅನುರಾಧ ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿ, ಮಂಡ್ಯ ಜಿಪಂ ಸಿಇಓ ಶೇಕ್ ತ್ವನೀರ್ ಆಸಿಫ್ ಮೈಸೂರು ಮಹಾನಗರ ಪಾಲಿಕೆ ಆಯುಕ್ತ, ರಾಮನಗರ ಜಿಪಂ ಸಿಇಓ ದಿಗ್ವಿಜಯ ಬೋಡ್ಕೆ ಕೆಎಸ್‌ಆರ್‌ಟಿಸಿ ನಿರ್ದೇಶಕ (ಐಟಿ), ಕಲಬುರಗಿ ನಗರ ಪಾಲಿಕೆ ಆಯುಕ್ತ ಭುವನೇಶ್ ದೇವಿದಾಸ್ ಪಾಟೀಲ್ ಧಾರವಾಡ ಜಿಪಂ ಸಿಇಓ, ಡಿಐಜಿಆರ್ ಅನ್ಮೋಲ್ ಜೈನ್ ರಾಮನಗರ ಜಿಪಂ ಸಿಇಓ, ಕಲಬುರಗಿ ನಗರಪಾಲಿಕೆ ಉಪ ಆಯುಕ್ತ ಅವಿನಾಶ್ ಸಂಜೀವನ್ ಶಿಂಧೆ ಅಲ್ಲಿನ ಆಯುಕ್ತ ಹಾಗೂ ದಕ್ಷಿಣ ಕನ್ನಡ ಜಿಲ್ಲೆ ಪುತ್ತೂರು ಉಪವಿಭಾಗದ ಹಿರಿಯ ಸಹಾಯಕ ಆಯುಕ್ತ ಜುಬಿನ್ ಮೊಹಪಾತ್ರ ರಾಯಚೂರು ನಗರ ಪಾಲಿಕೆ ಆಯುಕ್ತರಾಗಿ ವರ್ಗಾವಣೆಗೊಂಡಿದ್ದಾರೆ.

10 ಆರೋಪಿಗಳ ಬಂಧನ

ಏರಿಕೆಯಾಗಲಿದೆ ಎಂದು ವಿವರಿಸಿದರು. ಆರೋಪಿಗಳಾದ ಮನು (26), ಚಂದನ್ (21), ಜೀವನ್ (19), ಮೋಹನ (20), ಸಂತೋಷ (28), ಅಂಗಡಿ ಭರತ (21), ನಿದ್ದೆ ಭರತ (28), ರಾಜೇಶ (20), ಪುನೀತ್ (33) ಈ ಒಂಬತ್ತು ಆರೋಪಿಗಳು ಶ್ರೀರಂಗಪಟ್ಟಣ ತಾಲೂಕಿನ ಪಾಲಹಳ್ಳಿಯ ಒಂದೇ ಗ್ರಾಮದವರಾಗಿದ್ದು, ಮತ್ತೊಬ್ಬ ಆರೋಪಿ ಹಾಸನ ಜಿಲ್ಲೆಯ ಬೇಲೂರು ತಾಲೂಕಿನ ಮುತ್ತುಗನೆ ಗ್ರಾಮದ ತರಕಾರಿ ವ್ಯಾಪಾರಿ ಮಹೇಶ (27) ಎಂದು ಬಂಧಿತರ ಬಗ್ಗೆ ವಿವರ ನೀಡಿದರು. 2024ರ ಫೆಬ್ರವರಿಯಲ್ಲಿ ನಡೆದ ಪ್ರಜ್ವಲ್ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸೇಡು ತೀರಿಸಿಕೊಳ್ಳಲು ಪ್ರಮೋದ ಮತ್ತು ಆತನ ಸ್ನೇಹಿತರು ಸಂಚು ರೂಪಿಸಿ ಸುಪ್ರೀತ್‌ನನ್ನು ತೋಟದ ಮನೆ ಬಳಿ ರಾತ್ರಿ 10 ಗಂಟೆಯಲ್ಲಿ ಕರೆಸಿ, ಅಟ್ಟಾಡಿಸಿ, ಆಯುಧಗಳಿಂದ ತೀವ್ರವಾಗಿ ಹಲ್ಲೆ ನಡೆಸಿ, ಕೊಲೆ ಮಾಡಿದ್ದಾರೆ ಎಂದು ಅಂದಿನ ಘಟನೆಯನ್ನು ವಿವರಿಸಿದರು.

ಶ್ರೀರಂಗಪಟ್ಟಣ ಟೌನ್ ಪೊಲೀಸ್ ಇನ್‌ಸ್ಪೆಕ್ಟರ್ ಬಿ.ಎಸ್.ಪ್ರಕಾಶ್ ನೇತೃತ್ವದಲ್ಲಿ 5 ತಂಡಗಳನ್ನು ರಚಿಸಲಾಗಿತ್ತು. ಎಂಟು ಆರೋಪಿಗಳು ಚಿಕ್ಕಮಗಳೂರು ಜಿಲ್ಲೆ ಸಕ್ಕರೆ ಪಟ್ಟಣದ ತೋಟದ ಮನೆಯೊಂದರಲ್ಲಿ ಅಡಗಿ ಕುಳಿತಿರುವ ಖಚಿತ ಮಾಹಿತಿ ಮೇರೆಗೆ ಪೊಲೀಸರು ಅಲ್ಲಿಗೆ ಹೋಗಿ ಬಂಧಿಸಿದ್ದಾರೆ. ಇನ್ನಿಬ್ಬರನ್ನು ಮೈಸೂರು ಬಳಿ ಬಂಧಿಸಲಾಗಿದೆ ಎಂದು ಮಾಹಿತಿ ನೀಡಿದರು.

ಶ್ರೀರಂಗಪಟ್ಟಣದ ಕೆಆರ್‌ಎಸ್ ಠಾಣಾ ವ್ಯಾಪ್ತಿಯಲ್ಲಿ ಕೊಲೆ ಮತ್ತು ರೌಡಿಸಂ ಚಟುವಟಿಕೆಗಳು ಹೆಚ್ಚಾಗಿ ನಡೆಯುತ್ತಿರುವುದರ ಬಗ್ಗೆ ಪ್ರತಿಕ್ರಿಯಿಸಿದ ಎಸ್ಪಿ, ಸಮಾಜ ಘಾತುಕ ಚಟುವಟಿಕೆಯಲ್ಲಿ ತೊಡಗಿಕೊಳ್ಳುವವರ ವಿರುದ್ಧ ರೌಡಿಶೀಟ್ ತೆರೆಯಲು ಚಿಂತನೆ ನಡೆಸಲಾಗಿದೆ. ಜೊತೆಗೆ ಸಾಮಾಜಿಕ ಜಾಲತಾಣಗಳ (ಫೇಸ್‌ಬುಕ್, ವಾಟ್ಸಾಪ್, ಟ್ವಿಟ್ಟರ್) ಮೇಲೆ ಕಣ್ಣಾವಲಿಡಲಾಗುವುದು. ರೌಡಿಶೀಟರ್‌ಗಳು ಈ ಜಾಲತಾಣಗಳಲ್ಲಿ ಚಟುವಟಿಕೆಯಿಂದಿದ್ದಾರಾ ಎಂಬುದರ ಬಗ್ಗೆ ಹದ್ದಿನ ಕಣ್ಣಿಡಲಾಗುವುದು. ಗುಂಪು ಕಟ್ಟಿಕೊಂಡು ಓಡಾಡುವುದು, ಪ್ರಭಾವಿಗಳಾಗುವುದು ಇದರ ಮೇಲು ಸಹ ಕಣ್ಣಿಡಲಾಗುವುದು ಎಂದು ಹೇಳಿದರು. ಈ ಭಾಗದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪೊಲೀಸರು ಗಸ್ತು ತಿರುಗುವಿಕೆಗೆ ವ್ಯವಸ್ಥೆ ಮಾಡಲಾಗುವುದು ಎಂದ ಅವರು, ಕಳೆದ ಒಂದೂವರೆ ವರ್ಷದಲ್ಲಿ ಈ ಭಾಗದಲ್ಲಿ ಮೂರು ಕೊಲೆಯಾಗಿದ್ದು, ಎರಡು ಗುಂಪಿನ ನಡುವಿನ ದ್ವೇಷ ಹಾಗೂ ಪ್ರತೀಕಾರಕ್ಕೆ ಇಂತಹ ಘಟನೆಗಳು ನಡೆದಿವೆ. ಇವುಗಳಿಗೆ ಕಡಿವಾಣ ಹಾಕಲು ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಸುಪ್ರೀಂಕೋರ್ಟ್ ನಿರಾಕರಣೆ

ಆದರೆ ಜಾಮೀನು ಪ್ರಶ್ನಿಸಿ ರಾಜ್ಯ ಸರ್ಕಾರ ಸಲ್ಲಿಸಿದ್ದ ಆಕ್ಷೇಪಣೆ ಅರ್ಜಿಯನ್ನು ಪರಿಶೀಲಿಸಲು ಒಪ್ಪಿಕೊಂಡಿತು. ಈ ವೇಳೆ ಹೈಕೋರ್ಟ್ ವಿಸ್ತೃತ ಆದೇಶ ಪ್ರಕಟಿಸಿ ಆರೋಪಿ ಗಳಿಗೆ ಜಾಮೀನು ನೀಡಿದೆ. ಮೆರಿಟ್ ಮೇಲೆ ಕೋರ್ಟ್ ಆದೇಶ ನೀಡಿದೆ. ಹೀಗಾಗಿ ಈ ಅರ್ಜಿಯ ವಿಚಾರಣೆಗೆ ಆರೋಪಿಗಳ ವಾದವನ್ನು ಕೇಳಬೇಕಾಗುತ್ತದೆ ಎಂದು ಹೇಳಿ ಆರೋಪಿಗಳಿಗೆ ನೋಟಿಸ್ ಜಾರಿ ಮಾಡಿ ಕೋರ್ಟ್ ವಿಚಾರಣೆಯನ್ನು ಮುಂದೂಡಿತು. ಮುಂದಿನ ವಿಚಾರಣೆ ಯಲ್ಲಿ ಆರೋಪಿಗಳ ಪರ ವಕೀಲರು ಜಾಮೀನು ನೀಡಿದ್ದನ್ನು ಸಮರ್ಥಿಸಿಕೊಂಡರೆ, ಪೊಲೀಸರ ಪರ ವಕೀಲರು ಜಾಮೀನು ನೀಡಬಾರದು ಎಂದು ವಾದ ಮಂಡಿಸಲಿದ್ದಾರೆ. ಎರಡು ಕಡೆಯ ವಾದವನ್ನು ಆಲಿಸಿದ ಬಳಿಕ ಕೋರ್ಟ್ ತನ್ನ ಆದೇಶವನ್ನು ಪ್ರಕಟಿಸಲಿದೆ.

ಯಾರೆಲ್ಲಾ ಜಾಮೀನು ರದ್ದಿಗೆ ಅರ್ಜಿ ಸಲ್ಲಿಕೆ: ಪವಿತ್ರಾಗೌಡ (ಎ 1), ದರ್ಶನ್ (ಎ 2), ಜಗದೀಶ್ ಜಗ್ಗ ಅಲಿಯಾಸ್ ಜಗ್ಗ (ಎ 6), ಅನುಕುಮಾರ್ ಅಲಿಯಾಸ್ ಅನು (ಎ 7), ಆರ್.ನಾಗರಾಜು (ಎ 11), ಎಂ ಲಕ್ಷ್ಮಣ್ (ಎ 12), ಪ್ರದೋಶ್ ಎಸ್. ರಾವ್ (ಎ 14). ದರ್ಶನ್ ಹಾಗೂ 7 ಆರೋಪಿಗಳ ಜಾಮೀನು ರದ್ದುಕೋರಿ ಸುಪ್ರೀಂಕೋರ್ಟ್‌ಗೆ ಪೊಲೀಸರು ಅರ್ಜಿ ಸಲ್ಲಿಸಿದ್ದರು. ವಕೀಲ ಅನಿಲ್ ನಿಶಾನಿ ಮುಖಾಂತರ ಮೇಲ್ಮನವಿ ಸಲ್ಲಿಸಿರುವ ಸರ್ಕಾರ ಬರೋಬ್ಬರಿ 1,492 ಪುಟಗಳ ಕಡತಗಳನ್ನು ಸಲ್ಲಿಕೆ ಮಾಡಿತ್ತು.

ಮೈಕ್ರೋ ಫೈನಾನ್ಸ್ ಸಂಸ್ಥೆಗಳ ಕಿರುಕುಳಕ್ಕೆ ಸಾಲ ಪಡೆದವರು ಆತ್ಮಹತ್ಯೆ

ಇಂದು ಸಿಎಂ ಸಿದ್ದರಾಮಯ್ಯ ಉನ್ನತ ಮಟ್ಟದ ಸಭೆ

ಬೆಂಗಳೂರು, ಜ.24(ಕೆಎಂಶಿ)– ಮೈಕ್ರೋ ಫೈನಾನ್ಸ್ ಸಂಸ್ಥೆಗಳ ಕಿರುಕುಳ ದಿಂದ ಸಾಲ ಪಡೆದವರ ಆತ್ಮಹತ್ಯೆ ಪ್ರಕರಣಗಳು ಹೆಚ್ಚಾಗುತ್ತಿದ್ದಂತೆ ಎಚ್ಚೆತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ನಾಳೆ (ಜ.25) ಅಧಿಕಾರಿಗಳ ಉನ್ನತ ಮಟ್ಟದ ಸಭೆ ಕರೆದಿದ್ದಾರೆ. ರಾಜ್ಯಾದ್ಯಂತ ಮೈಕ್ರೋ ಫೈನಾನ್ಸ್‌ನವರ ಹಾವಳಿಯಿಂದ ಕೆಲವು ಕುಟುಂಬಗಳು ಗ್ರಾಮವನ್ನೇ ತೊರೆದರೆ, ಮತ್ತೆ ಕೆಲವರು ಇವರ ಗೂಂಡಾ ವರ್ತನೆ ಹಾಗೂ ಅಪಮಾನ ಸಹಿಸಿಕೊಳ್ಳಲಾರದೆ ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ.

ಕಿರುಕುಳ ನೀಡಿದವರ ಮೇಲೆ ಕಠಿಣ ಕ್ರಮ ಜರುಗಿಸುವಂತೆ ಸ್ವತಃ ಮುಖ್ಯ ಮಂತ್ರಿ ಅವರೇ ಪೊಲೀಸ್ ಅಧಿಕಾರಿಗಳಿಗೆ ಆದೇಶ ಮಾಡಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ಮೀಟರ್ ಬಡ್ಡಿ ದಂಧೆಕೋರರ ವಿರುದ್ಧ ರಾಜ್ಯಾದ್ಯಂತ ಆಕ್ರೋಶ ವ್ಯಕ್ತವಾಗುತ್ತಿರುವ ಹಿನ್ನೆಲೆ ಯಲ್ಲಿ ಮುಖ್ಯಮಂತ್ರಿ ಅವರು ಗೃಹ ಕಚೇರಿ ಕೃಷ್ಣಾದಲ್ಲಿ ಉನ್ನತಮಟ್ಟದ ಸಭೆ ಕರೆದಿದ್ದಾರೆ. ಹಣಕಾಸು, ಕಂದಾಯ, ಗೃಹ, ಕಾನೂನು ಹಾಗೂ ಸಹಕಾರ ಇಲಾಖೆ ಸಚಿವರು, ಕಾರ್ಯದರ್ಶಿಗಳು ಮತ್ತು ಹಿರಿಯ ಪೊಲೀಸ್ ಅಧಿಕಾರಿಗಳನ್ನು ಸಭೆಗೆ ಆಹ್ವಾನಿಸಲಾಗಿದೆ.

ರೈಲ್ವೆ ನಿಲ್ದಾಣದ ಬಳಿ ನೂತನ ಪ್ರೀಪೇಯ್ಡ್ ಆಟೋ ಸೇವಾ ಕೇಂದ್ರಕ್ಕೆ ಚಾಲನೆ



ಮೈಸೂರಿನ ರೈಲ್ವೆ ನಿಲ್ದಾಣದ ಬಳಿ ರೋಟರಿ ಸೆಂಟ್ರಲ್ ಮೈಸೂರು ಸಂಸ್ಥೆ ಕೊಡುಗೆ ನೀಡಿದ ನೂತನ ಪ್ರೀಪೇಯ್ಡ್ ಆಟೋ ರಿಕ್ಷಾ ಸೇವಾ ಕೇಂದ್ರಕ್ಕೆ ಚಾಲನೆ ನೀಡಲಾಯಿತು.

ಮೈಸೂರು,ಜ.24(ಎಂಟಿವೈ)– ಮೈಸೂರಿನ ರೈಲ್ವೆ ನಿಲ್ದಾಣದ ಬಳಿ ರೋಟರಿ ಸೆಂಟ್ರಲ್ ಮೈಸೂರು ಸಂಸ್ಥೆ ಕೊಡುಗೆ ನೀಡಿದ ನೂತನ ಪ್ರೀಪೇಯ್ಡ್ ಆಟೋ ರಿಕ್ಷಾ ಸೇವಾ ಕೇಂದ್ರಕ್ಕೆ ಚಾಲನೆ ನೀಡಲಾಯಿತು.

ಸಮಾಜ ಸೇವಾ ಕಾರ್ಯದ ಹಿನ್ನೆಲೆಯಲ್ಲಿ ರೋಟರಿ ಸೆಂಟ್ರಲ್ ಮೈಸೂರು ಸಂಸ್ಥೆ ಪ್ರೀ ಪೇಯ್ಡ್ ಕೌಂಟರ್ ಕೊಡುಗೆ ನೀಡಿತ್ತು. ಈ ಹಿಂದೆ ಇದ್ದ ಸೇವಾ ಕೇಂದ್ರದ ಕೌಂಟರ್ ಶಿಥಿಲಗೊಂಡಿತ್ತು. ಹಾಗಾಗಿ ರೋಟರಿ ಸೆಂಟ್ರಲ್ ಮೈಸೂರು ಹೊಸ ಕೌಂಟರ್ ಕೊಡುಗೆ ನೀಡಿದೆ.

ಹೊಸ ಕೌಂಟರ್‌ನ ಉದ್ಘಾಟನಾ ಕಾರ್ಯಕ್ರಮದಲ್ಲಿ ರೋಟರಿ ಸಂಸ್ಥೆಯ ಸಹಾಯಕ ರಾಜ್ಯಪಾಲ ಚೇತನ್ ವಿಶ್ವನಾಥ್, ಎನ್.ಆರ್.ಸಂಚಾರ ಠಾಣೆಯ ಇನ್ಸ್‌ಪೆಕ್ಟರ್ ರೇಖಾಬಾಯಿ, ಸಬ್ ಇನ್ಸ್‌ಪೆಕ್ಟರ್ ನಾಗರಾಜ್, ರೋಟರಿ ಸೆಂಟ್ರಲ್ ಮೈಸೂರು ಸಂಸ್ಥೆ ಅಧ್ಯಕ್ಷ ರೊ.ಸುಬ್ರಹ್ಮಣ್ಯ ಆರ್.ತಂತ್ರಿ, ರೊ. ಸಮರ್ಥ ವೈದ್ಯ, ಗೌರವ ಕಾರ್ಯದರ್ಶಿ ಎಸ್.ಆರ್. ಸ್ವಾಮಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಕೆ.ಆರ್. ಕ್ಷೇತ್ರದ ವಿವಿಧ ಕಾಮಗಾರಿಗಳಿಗೆ ಶಾಸಕ ಟಿ.ಎಸ್.ಶ್ರೀವತ್ಸ ಚಾಲನೆ



ವಿವಿಧ ಕಾಮಗಾರಿಗೆ ಶಾಸಕ ಟಿ.ಎಸ್.ಶ್ರೀವತ್ಸ ಶುಕ್ರವಾರ ಚಾಲನೆ ನೀಡಿದರು.

ಮೈಸೂರು, ಜ.24(ಜಿಎ)–ಮೈಸೂರಿನ ಕೃಷ್ಣರಾಜ ಕ್ಷೇತ್ರದ ವಿವಿಧ ಕಾಮಗಾರಿಗೆ ಶಾಸಕ ಟಿ.ಎಸ್.ಶ್ರೀವತ್ಸ ಶುಕ್ರವಾರ ಚಾಲನೆ ನೀಡಿದರು.

ವಾರ್ಡ್ ನಂ.57ರ ಕುವೆಂಪುನಗರದ ಕೆಹೆಚ್‌ಬಿ ಕಾಲೋನಿ 1ನೇ ಹಂತದ ಭೋದಿಸತ್ವ ಉದ್ಯಾನವನ ಸಮೀಪ 10 ಲಕ್ಷ ಲೀಟರ್ ಸಾಮರ್ಥ್ಯದ ಮೇಲ್ಮಟ್ಟದ ಜಲಸಂಗ್ರಹಕಾರ ನಿರ್ಮಿಸುವ 233 ಲಕ್ಷ ರೂ. ವೆಚ್ಚದ ಕಾಮಗಾರಿ, ವಾರ್ಡ್ ನಂ.49ನೇ ವ್ಯಾಪ್ತಿ ಚಾಮರಾಜಪುರಂನ ಬಜ್ಜಣ್ಣ ರಸ್ತೆ, ವಾಣಿವಿಲಾಸ ರಸ್ತೆ, ನರಸರಾಜ ರಸ್ತೆ, ಡಾ.ಬಿ.ಆರ್.ಅಂಬೇಡ್ಕರ್ ರಸ್ತೆ ಮಾರ್ಗವಾಗಿ ಅಶೋಕ ವೃತ್ತದವರೆಗೆ ಒಳಚರಂಡಿ ಕೊಳವೆ ಮಾರ್ಗ ಅಳವಡಿಸಿ ಯಂತ್ರ ಗುಂಡಿಗಳನ್ನು ನಿರ್ಮಿಸುವ 45 ಲಕ್ಷ ರೂ. ವೆಚ್ಚದ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿದರು.

ನಂತರ ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ, ವಾರ್ಡ್ ನಂ.57ರಲ್ಲಿ ಇದ್ದ ಹಳೆ ಟ್ಯಾಂಕ್ ನೆಲಸಮ ಮಾಡಿ ಅಲ್ಲಿ ಹೊಸ ಟ್ಯಾಂಕ್ ನಿರ್ಮಿಸಲು ಮತ್ತು ಪಾದಯಾತ್ರೆ ವೇಳೆ ಕೇಳಿ ಬಂದಿದ್ದ ಪ್ರಮುಖ ಸಮಸ್ಯೆಗಳಲ್ಲಿ ಒಂದಾದ ಯುಜಿಡಿ ಸಮಸ್ಯೆ ಕೇಳಿ ಬಂದ ಹಿನ್ನೆಲೆಯಲ್ಲಿ ವಾರ್ಡ್ ನಂ.49ರಲ್ಲಿ ಅದಕ್ಕೆ ಪ್ರಾಮುಖ್ಯತೆ ನೀಡಿ ಅವುಗಳ ಕಾಮಗಾರಿಗೆ ಚಾಲನೆ ನೀಡಲಾಗಿದೆ ಎಂದರು.

ತಿ.ನರಸೀಪುರದಲ್ಲಿ ನಕ್ಷಾ ಹೋಂಡಾ ಶೋರೂಂ ಉದ್ಘಾಟನೆ



ತಿ.ನರಸೀಪುರದ ತಾಲೂಕು ಕಚೇರಿ ಮುಂಭಾಗ ನೂತನವಾಗಿ ಪ್ರಾರಂಭವಾದ ನಕ್ಷ ಹೋಂಡಾ ಶೋ ರೂಂ ಅನ್ನು ಚಾಮರಾಜನಗರ ಸಂಸದ ಸುನೀಲ್ ಬೋಸ್ ಉದ್ಘಾಟಿಸಿದರು. ಹೆಗ್ಡೆ ಗ್ರೂಪ್ಸ್ ಆಫ್ ಕಂಪೆನಿ ಮ್ಯಾನೇಜಿಂಗ್ ಡೈರೆಕ್ಟರ್ ಎಂ.ಡಿ.ಹರೀಶ್ ಕುಮಾರ್ ಹೆಗ್ಡೆ, ಹಿರಿಯ ವಕೀಲ ಹೆಚ್.ಎನ್.ವೆಂಕಟೇಶ್ ಇನ್ನಿತರರು ಉಪಸ್ಥಿತರಿದ್ದರು.

ತಿ.ನರಸೀಪುರ, ಜ.24–ಮೈಸೂರಿನ ಪ್ರತಿಷ್ಠಿತ ಹೆಗ್ಡೆ ಗ್ರೂಪ್ಸ್ ಆಫ್ ಕಂಪನಿಯ ನಕ್ಷಾ ಹೋಂಡಾ ದ್ವಿಚಕ್ರ ವಾಹನದ ಮಾರಾಟ ಮಳಿಗೆಯನ್ನು ತಿ.ನರಸೀಪುರದ ತಾಲೂಕು ಕಚೇರಿ ಬಳಿ ಆರಂಭವಾಗಿದ್ದು, ಈ ಶೋರೂಂ ಅನ್ನು ಚಾಮರಾಜನಗರ ಸಂಸದ ಸುನೀಲ್ ಬೋಸ್ ಉದ್ಘಾಟನೆ ಮಾಡಿದರು.

ಈ ವೇಳೆ ಹೆಗ್ಡೆ ಗ್ರೂಪ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಎಂ.ಡಿ.ಹರೀಶ್ ಕುಮಾರ್ ಹೆಗ್ಡೆ, ಶೋರೂಂ ಮಾಲೀಕ ಅಭಿಶೇಕ್ ಹೆಗ್ಡೆ, 'ಲಾ ಗೈಡ್' ಕನ್ನಡ ಕಾನೂನು ಮಾಸಪತ್ರಿಕೆ ಗೌರವ ಸಂಪಾದಕರೂ ಆದ ಹಿರಿಯ ವಕೀಲ ಎಚ್.ಎನ್.ವೆಂಕಟೇಶ್, ಹೋಂಡಾ ಮೋಟರ್ ಸೈಕಲ್ ಅಂಡ್ ಸ್ಕೂಟರ್ ಇಂಡಿಯಾದ ಜೋನಲ್ ಮ್ಯಾನೇಜರ್ ಅನಂತ ಸೇರಿ ಹಲವರು ಭಾಗಿಯಾಗಿದ್ದರು.

ಶೋರೂಂ ಉದ್ಘಾಟನೆ ಮಾಡಿ ಮಾತನಾಡಿದ ಸಂಸದ ಸುನೀಲ್ ಬೋಸ್, ನಕ್ಷಾ ಹೋಂಡಾಗೆ ಶುಭ ಹಾರೈಸಿದರು. ನಾಲ್ಕನೇ ಬ್ರ್ಯಾಂಚ್ ಇದಾಗಿದ್ದು ಮತ್ತಷ್ಟು ಶೋರೂಂಗಳನ್ನು ತೆರಯುವಂತೆ ಹಾರೈಸಿದರು. ಗ್ರಾಹಕರಿಗೆ ಹೆಲ್ಮೆಟ್ ಧರಿಸುವುದರ ಮಹತ್ವದ ಬಗ್ಗೆ ಜಾಗೃತಿ ಮೂಡಿಸುವಂತೆ ಶೋರೂಂ ಸಿಬ್ಬಂದಿಗೆ ಸುನೀಲ್ ಬೋಸ್ ಮನವಿ ಮಾಡಿದರು.

ಮೈಸೂರು ಕುವೆಂಪುನಗರದ ವಿಜಯಾ ಬ್ಯಾಂಕ್ ವೃತ್ತ ಈಗ ನಿಜಲಿಂಗಪ್ಪ ವೃತ್ತವಾಗಿ ಅಭಿವೃದ್ಧಿ

ನಂದಿ ಪ್ರತಿಮೆಯೊಂದಿಗೆ 3 ಕೋಟಿಯ ಕಾಮಗಾರಿ ಆರಂಭ



ಕುವೆಂಪುನಗರದ ವಿಜಯಾ ಬ್ಯಾಂಕ್ ಸರ್ಕಲ್



ಸಿದ್ದಗಂಗಾ ಮಠದ ಶ್ರೀ ಶಿವಕುಮಾರ ಸ್ವಾಮೀಜಿ ಸರ್ಕಲ್

ಮೈಸೂರು, ಜ. 24(ಆರ್‌ಕೆ)– ಸಿದ್ದಗಂಗಾ ಮಠದ ಶ್ರೀ ಶಿವಕುಮಾರ ಸ್ವಾಮೀಜಿ ಸರ್ಕಲ್ ಕಾಮಗಾರಿ ವಿವಾದದಿಂದಾಗಿ ಅರ್ಧಕ್ಕೆ ನಿಂತಿದೆ. ಇದೀಗ ಮೈಸೂರಿನ ಕುವೆಂಪುನಗರದ ವಿಜಯಾ ಬ್ಯಾಂಕ್ ಸರ್ಕಲ್ ಅನ್ನು ಮಾಜಿ ಮುಖ್ಯಮಂತ್ರಿ ದಿ. ನಿಜಲಿಂಗಪ್ಪ ಸರ್ಕಲ್ ಆಗಿ ಅಭಿವೃದ್ಧಿಪಡಿಸುವ ಕಾಮಗಾರಿಯನ್ನು ಮೈಸೂರು ಮಹಾನಗರ ಪಾಲಿಕೆ ಆರಂಭಿಸಿದೆ.

ಮೈಸೂರು ಮಹಾನಗರ ಪಾಲಿಕೆ ಲಾಂಛನವಾದ ನಂದಿ ಪ್ರತಿಮೆಯೊಂದಿಗೆ 3 ಕೋಟಿ ರೂ. ಅಂದಾಜು ವೆಚ್ಚದಲ್ಲಿ ವಿಜಯಾ ಬ್ಯಾಂಕ್ ಸರ್ಕಲ್ ಅನ್ನು ನಿಜಲಿಂಗಪ್ಪ ಸರ್ಕಲ್ ಆಗಿ ಅಭಿವೃದ್ಧಿ ಪಡಿಸುವ ಕಾಮಗಾರಿ ಗುರುವಾರದಿಂದ ಆರಂಭವಾಗಿದ್ದು ಒಂದು ವರ್ಷದೊಳಗೆ ಕೆಲಸ ಪೂರ್ಣಗೊಳಿಸಬೇಕೆಂಬ ಷರತ್ತಿನೊಂದಿಗೆ ಟೆಂಡರ್ ಗುತ್ತಿಗೆ ಪಡೆದಿರುವ ಗುತ್ತಿಗೆದಾರ ಕಾಂತರಾಜು ಕಾಮಗಾರಿ ಕೈಗೆತ್ತಿಕೊಂಡಿದ್ದಾರೆ.

ಪ್ರಸ್ತುತ ಪ್ರಚಲಿತದಲ್ಲಿರುವ ನ್ಯೂ ಕಾಂತರಾಜ ಅರಸು ರಸ್ತೆ–ವಿಶ್ವಮಾನವ ಜೋಡಿ ರಸ್ತೆ ಕೂಡುವ ವಿಜಯಾ ಬ್ಯಾಂಕ್ ಸರ್ಕಲ್ ಅನ್ನು ನಿಜಲಿಂಗಪ್ಪ ಸರ್ಕಲ್ ಎಂದು ನಾಮಕರಣ ಮಾಡಿದ್ದು, ಪಾಲಿಕೆಯ ಲಾಂಛನವಾಗಿರುವ ನಂದಿ ಪ್ರತಿಮೆ ಸ್ಥಾಪಿಸಿ ಅಭಿವೃದ್ಧಿಗೊಳಿಸಲು 3 ಕೋಟಿ ಅನುದಾನ ಬಿಡುಗಡೆ ಮಾಡಿತ್ತು.

> "ವಿಶ್ವಮಾನವ ಜೋಡಿ ರಸ್ತೆಯಲ್ಲಿ ಶ್ರೀ ಶಿವಕುಮಾರ ಸ್ವಾಮಿಜಿ ಸರ್ಕಲ್, ನಿಜಲಿಂಗಪ್ಪ ಸರ್ಕಲ್ ಎಂದು ಈ ಹಿಂದೆಯೇ ಪಾಲಿಕೆ ಕೌನ್ಸಿಲ್‌ನಲ್ಲಿ ಪ್ರಸ್ತಾವನೆಯನ್ನು ಅನುಮೋದಿಸಲಾಗಿದೆ. ಆ ಎರಡು ಸರ್ಕಲ್‌ಗಳಲ್ಲಿ ಗಣ್ಯರ ಪ್ರತಿಮೆ ಸ್ಥಾಪಿಸುವುದಿಲ್ಲ. ಆದರೂ, ಶ್ರೀ ಶಿವಕುಮಾರಸ್ವಾಮೀಜಿ ಹೆಸರಲ್ಲಿ ಸರ್ಕಲ್ ಅಭಿವೃದ್ಧಿಪಡಿಸಲು ಕೆಲ ಸ್ಥಳೀಯರು ಆಕ್ಷೇಪಿಸಿದ್ದರಿಂದ ಸರ್ಕಲ್ ಅಭಿವೃದ್ಧಿ ಸ್ಥಗಿತಗೊಂಡಿದೆ. ಪರ–ವಿರೋಧ ಅಭಿಪ್ರಾಯ ವ್ಯಕ್ತಪಡಿಸುತ್ತಿರುವ ಎರಡೂ ಬಣಗಳ ಪ್ರಮುಖರನ್ನು ಒಟ್ಟಿಗೆ ಕೂರಿಸಿ ಮಾತುಕತೆ ಮೂಲಕ ಸೌಹಾರ್ದಯುತವಾಗಿ ವಿವಾದ ಬಗೆಹರಿಸಬೇಕಾಗಿದೆ.
>
> - **ಶಿವಕುಮಾರ,** ಮಾಜಿ ಮೇಯರ್

> "ನಗರದ ಸೌಂದರ್ಯ ವೃದ್ಧಿ ಹಾಗೂ ವಾಹನ ಸಂಚಾರಕ್ಕೆ ತೊಂದರೆಯಾಗದಂತೆ ಮೈಸೂರಿನ ವಿಜಯಾ ಬ್ಯಾಂಕ್ ಸರ್ಕಲ್ ಅನ್ನು ನಿಜಲಿಂಗಪ್ಪ ಸರ್ಕಲ್ ಎಂದು ನಾಮಕರಣ ಮಾಡಿರುವುದರಿಂದ 3 ಕೋಟಿ ರೂ. ಅಂದಾಜು ವೆಚ್ಚದಲ್ಲಿ ಸರ್ಕಲ್ ಅಭಿವೃದ್ಧಿ ಕಾಮಗಾರಿಯನ್ನು ಆರಂಭಿಸಲಾಗಿದೆ. ಈ ವೇಳೆ ವಾಹನ ಸಂಚಾರಕ್ಕೆ ತೊಂದರೆಯಾಗದಂತೆ ಮುಂಜಾಗ್ರತಾ ಕ್ರಮ ವಹಿಸಿ ನಿಗದಿತ ಅವಧಿಯೊಳಗೆ ಕಾಮಗಾರಿ ಪೂರ್ಣಗೊಳಿಸುವಂತೆ ಗುತ್ತಿಗೆದಾರರಿಗೆ ಸೂಚಿಸಲಾಗಿದೆ.
>
> - **ಕೆ.ಜೆ. ಸಿಂಧೂ,** ಮೈಸೂರು ಮಹಾನಗರ ಪಾಲಿಕೆ ಉಪ ಆಯುಕ್ತು (ಅಭಿವೃದ್ಧಿ)

ಸರ್ಕಲ್‌ನಲ್ಲಿ ಹಾದು ಹೋಗಿರುವ ಒಳಚರಂಡಿ, ನೀರಿನ ಕೊಳವೆ ಮಾರ್ಗಗಳನ್ನು ಅಗಲೀಕರಿಸಲಾಗುವುದು. ಒಮ್ಮೆ ಪ್ರತಿಮೆಯೊಂದಿಗೆ ಅಭಿವೃದ್ಧಿಪಡಿಸಿದಲ್ಲಿ ಮತ್ತೆ ಮತ್ತೆ ಅಗೆಯಲು ಸಾಧ್ಯವಿಲ್ಲವಾದ್ದರಿಂದ ಖಾಯಂ ಕಾಮಗಾರಿ ನಡೆಸುವಂತೆ ಪಾಲಿಕೆಯು ಗುತ್ತಿಗೆದಾರನಿಗೆ ಸೂಚಿಸಿದೆ.

ಸರ್ಕಲ್ ಸುತ್ತಲಿನ ನಾಲ್ಕೂ ಕಡೆಯ ರಸ್ತೆಗಳಲ್ಲಿನ ಅರ್ಧ ಭಾಗವನ್ನು ಬ್ಯಾರಿಕೇಡ್ ಹಾಕಿ ವಾಹನ ಸಂಚಾರ ಮಾರ್ಗ ಬದಲಿಸಿ ಗುರುವಾರದಿಂದ ಸರ್ಕಲ್ ಅಭಿವೃದ್ಧಿ ಕಾಮಗಾರಿ ಆರಂಭಿಸಿದ್ದು, ಡಿಸೆಂಬರ್ ಮಾಹೆಯೊಳಗಾಗಿ ಕೆಲಸ ಪೂರ್ಣಗೊಳಿಸುವುದಾಗಿ ಗುತ್ತಿಗೆದಾರ ಕಾಂತರಾಜು 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ವಾಹನ ನಿಬಿಡ ವಿಶ್ವಮಾನವ ಜೋಡಿ ರಸ್ತೆಯಲ್ಲಿ ಸರ್ಕಲ್ ಅಭಿವೃದ್ಧಿ ಕಾಮಗಾರಿ ನಡೆಯುತ್ತಿರುವುದರಿಂದ ಸುತ್ತಲಿನ ನಾಲ್ಕೂ ರಸ್ತೆಗಳಲ್ಲಿ ಸಂಚಾರಕ್ಕೆ ಅಡ್ಡಿಯಾಗುತ್ತಿದೆ ಎಂದು ಸಾರ್ವಜನಿಕರು ತಿಳಿಸಿದ್ದಾರಲ್ಲದೆ, ಈಗ ಸರ್ಕಲ್ ಚೆನ್ನಾಗಿಯೇ ಇದೆ. ಅಲ್ಲಿ ಪ್ರತಿಮೆ ಸ್ಥಾಪಿಸಿದಲ್ಲಿ ವಾಹನ ಸಂಚಾರಕ್ಕೆ ಅಡ್ಡಿಯಾಗಲಿದೆ ಎಂದು ಆರೋಪಿಸುತ್ತಿದ್ದಾರೆ.

ಸಾರ್ವಜನಿಕ ರಸ್ತೆ ವೃತ್ತಗಳಲ್ಲಿ ಯಾವುದೇ ಗಣ್ಯ ವ್ಯಕ್ತಿಯ ಪ್ರತಿಮೆ ಅಥವಾ ಪುತ್ಥಳಿಗಳನ್ನು ಸ್ಥಾಪಿಸಬಾರದೆಂದು ಸುಪ್ರೀಂಕೋರ್ಟ್ ನಿರ್ದೇಶನ ನೀಡಿರುವುದರಿಂದ ಅಭಿವೃದ್ಧಿಪಡಿಸುತ್ತಿರುವ ನಿಜಲಿಂಗಪ್ಪ ಸರ್ಕಲ್ ಮಧ್ಯ ಭಾಗದಲ್ಲಿ ನಂದಿ ಪ್ರತಿಮೆ ಸ್ಥಾಪಿಸಲು ಪಾಲಿಕೆಯು ಮುಂದಾಗಿದೆ.

ನೆನೆಗುದಿಗೆ ಬಿದ್ದ ಶ್ರೀ ಶಿವಕುಮಾರ ಸ್ವಾಮೀಜಿ ವೃತ್ತ

ಮೈಸೂರು, ಜ. 24(ಆರ್‌ಕೆ)– ವರ್ಷದ ಹಿಂದೆಯೇ ಆರಂಭವಾಗಿದ್ದ ಮೈಸೂರಿನ ವಿಶ್ವಮಾನವ ಜೋಡಿ ರಸ್ತೆಯ ಪೆಟ್ರೋಲ್ ಬಂಕ್ ಬಳಿಯ ಶ್ರೀ ಶಿವಕುಮಾರ ಸ್ವಾಮೀಜಿ ವೃತ್ತ ಅಭಿವೃದ್ಧಿ ಕಾಮಗಾರಿಯು ವಿವಾದದ ಹಿನ್ನೆಲೆಯಲ್ಲಿ ಅರ್ಧಕ್ಕೆ ನಿಂತು ಹೋಗಿದೆ.

ಕೌನ್ಸಿಲ್ ಸಭೆ ಅನುಮೋದಿಸಿದಂತೆ ವಿಶ್ವಮಾನವ ಜೋಡಿ ರಸ್ತೆಯ ಪೆಟ್ರೋಲ್ ಬಂಕ್ ಸರ್ಕಲ್ ಎಂದೇ ಕರೆಯಲ್ಪಡುವ ವೃತ್ತಕ್ಕೆ ತುಮಕೂರಿನ ಸಿದ್ಧಗಂಗಾ ಮಠದ ಶ್ರೀ ಶಿವಕುಮಾರಸ್ವಾಮಿ ಅವರ ಹೆಸರಿಡಲು ಪಾಲಿಕೆ ಕೌನ್ಸಿಲ್ ಸಭೆಯಲ್ಲಿ ನಿರ್ಧರಿಸಿತ್ತು. ಅದರಂತೆ ಒಂದು ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲಾಗಿತ್ತು.

ಕಾಮಗಾರಿ ಶೇ. 20ರಷ್ಟು ಮುಗಿದಿದ್ದು, ಈ ನಡುವೆ ಅಲ್ಲಿನ ನಿವಾಸಿಗಳು ಆಕ್ಷೇಪ ವ್ಯಕ್ತಪಡಿಸಿದ್ದರಿಂದ ಕೆಲಸ ಸ್ಥಗಿತಗೊಳಿಸಲಾಗಿತ್ತು. ಪಕ್ಕದಲ್ಲೇ ಇರುವ ವಿಶ್ವಮಾನವ ಉದ್ಯಾನವನದಲ್ಲಿ ರಾಷ್ಟ್ರಕವಿ ಕುವೆಂಪು ಅವರ ಬೃಹತ್ ಪ್ರತಿಮೆ ಇರುವಾಗ ಆ ಸ್ಥಳದಲ್ಲಿ ಮತ್ತೊಬ್ಬ ಗಣ್ಯರ ಹೆಸರಿನಲ್ಲಿ ಸರ್ಕಲ್ ಅಭಿವೃದ್ಧಿ ಏಕೆ ಬೇಕು ಎಂದು ಸ್ಥಳೀಯರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ ಕಾರಣ ವಿವಾದ ಉಂಟಾಗಿತ್ತು.

ಕಾಮಗಾರಿ ಅರ್ಧಕ್ಕೇ ನಿಂತಿದ್ದು, ಜನಪ್ರತಿನಿಧಿಗಳಾಗಲೀ, ಅಧಿಕಾರಿಗಳಾಗಲೀ ಈ ವಿವಾದ ಬಗೆಹರಿಸಲು ಆಸಕ್ತಿ ತೋರದ ಕಾರಣ ಶ್ರೀ ಶಿವಕುಮಾರ ಸ್ವಾಮೀಜಿ ವೃತ್ತ ಅಭಿವೃದ್ಧಿ ಕೆಲಸ ಪೂರ್ಣಗೊಂಡಿಲ್ಲ.

ನಗರ ನಿರ್ವಹಣೆಗೆ ಹಣ ಇಲ್ಲವೆಂದು ಪರದಾಡುತ್ತಿರುವ ಮೈಸೂರು ಮಹಾನಗರ ಪಾಲಿಕೆಯು, ಸಾರ್ವಜನಿಕರ ತೆರಿಗೆ ಹಣವನ್ನು ಅನಗತ್ಯ ಕಾಮಗಾರಿಗೆ ವ್ಯರ್ಥ ಮಾಡುತ್ತಿದೆ ಎಂದು ನಾಗರಿಕರು ದೂರಿದ್ದಾರೆ.

ಮೈಸೂರು ಗ್ರಾಮಾಂತರ ಬಸ್ ನಿಲ್ದಾಣ ಸ್ಥಳಾಂತರಿಸದಂತೆ ಸಿಎಂ ಸಿದ್ದರಾಮಯ್ಯರಲ್ಲಿ ಮನವಿ

● ಹಾಲಿ ನಿಲ್ದಾಣದ ಬಳಿಯೇ ಪರ್ಯಾಯ ವ್ಯವಸ್ಥೆ ಮಾಡುವ ಅವಕಾಶವಿರುವ ಬಗ್ಗೆ ಗ್ರಾಮಾಂತರ ಬಸ್ ನಿಲ್ದಾಣ ಉಳಿಸಿ ಹೋರಾಟ ಸಮಿತಿ ಪದಾಧಿಕಾರಿಗಳ ಮಾಹಿತಿ ● ಶೇ.15ರಷ್ಟು ಜನ ಸಂಖ್ಯೆ ಇರುವ ಪ್ರದೇಶದಲ್ಲಿ ಹೊಸ ಬಸ್ ನಿಲ್ದಾಣವಾದರೆ ಉಳಿದ ಶೇ.85ರಷ್ಟು ಜನರ ಪಾಡೇನು. ● ದಸರಾ ಉತ್ಸವದ ವೇಳೆ ಸಮಸ್ಯೆಗೆ ಅವಕಾಶ ಮಾಡಿಕೊಡದಂತೆಯೂ ಸಲಹೆ; ದುಂದು ವೆಚ್ಚವೂ ಬೇಡ ಎಂದು ಮನವಿ.

ಮೈಸೂರು, ಜ.24–ಮೈಸೂರು ಗ್ರಾಮಾಂತರ ಬಸ್ ನಿಲ್ದಾಣವನ್ನು ಈಗಿರುವ ಸ್ಥಳದಲ್ಲಿಯೇ ಉಳಿಸಬೇಕೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ 'ಮೈಸೂರು ಕೆಎಸ್‌ಆರ್‌ಟಿಸಿ ಸಬರ್ಬನ್ ಬಸ್ ನಿಲ್ದಾಣ ಉಳಿಸಿ ಹೋರಾಟ ಸಮಿತಿ' ಪದಾಧಿಕಾರಿಗಳು ಮನವಿ ಸಲ್ಲಿಸಿದ್ದಾರೆ.

ಕಳೆದ ಜ.3ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಬನ್ನಿಮಂಟಪದಲ್ಲಿ 120 ಕೋಟಿ ರೂ. ವೆಚ್ಚದಲ್ಲಿ ನೂತನ ಬಸ್ ನಿಲ್ದಾಣ ನಿರ್ಮಾಣಕ್ಕೆ ಅನುಮೋದನೆ ನೀಡಿದ ಹಿನ್ನೆಲೆಯಲ್ಲಿ ಸಮಿತಿ ಪದಾಧಿಕಾರಿಗಳು ಮುಖ್ಯಮಂತ್ರಿಗಳನ್ನು ಭೇಟಿ ಮಾಡಿದ್ದು, ಮೈಸೂರಿನ ಬನ್ನಿಮಂಟಪದ ಕಡೆ ಕೇವಲ ಶೇ.15ರಷ್ಟು ಮಾತ್ರ ಜನಸಂಖ್ಯೆ ಇದ್ದು, ಉಳಿದ ಶೇ.85ರಷ್ಟು ಜನಸಂಖ್ಯೆ ಉಳಿದ ಭಾಗದಲ್ಲಿದೆ. ಅಲ್ಲದೇ ಸರ್ಕಾರಿ ಅತಿಥಿ ಗೃಹ, ಮಿನಿ ವಿಧಾನಸೌಧ ತಾಲೂಕು ಕಚೇರಿ, ಎಸ್‌ಪಿ ಕಚೇರಿ, ಪೊಲೀಸ್ ಆಯುಕ್ತರ ಕಚೇರಿ, ಮೃಗಾಲಯ, ಅರಮನೆ, ಚಾಮುಂಡಿಬೆಟ್ಟ, ದೇವರಾಜ ಮಾರುಕಟ್ಟೆ, ಜಗನ್ಮೋಹನ ಅರಮನೆ, ಕೆ.ಆರ್.ಆಸ್ಪತ್ರೆ, ರೈಲು ನಿಲ್ದಾಣ ಸೇರಿದಂತೆ ಬಹುತೇಕ ಸರ್ಕಾರಿ ಕಚೇರಿಗಳು, ವಿದ್ಯಾಸಂಸ್ಥೆಗಳು, ಪ್ರವಾಸಿ ತಾಣಗಳಿಗೆ ಈಗಿರುವ ಬಸ್ ನಿಲ್ದಾಣ ಕೇಂದ್ರ ಸ್ಥಾನವಾಗಿದೆ ಎಂದು ಮನವಿಯಲ್ಲಿ ತಿಳಿಸಲಾಗಿದೆ.



ಇರುವ ನಿಲ್ದಾಣಗಳೇ ಬಳಕೆಯಲ್ಲಿಲ್ಲ: ಕಳೆದ 17 ವರ್ಷದ ಹಿಂದೆ ನರ್ಮ್ ಯೋಜನೆಯಡಿ ಮೈಸೂರು ಗ್ರಾಮಾಂತರ ಬಸ್ ನಿಲ್ದಾಣ, ಸಾತಗಳ್ಳಿ ಬಸ್ ನಿಲ್ದಾಣ, ನಾಯ್ಡು ನಗರ ಬಸ್ ನಿಲ್ದಾಣ, ಸಿಟಿ ಬಸ್ ನಿಲ್ದಾಣ, ಕುವೆಂಪು ಬಸ್ ನಿಲ್ದಾಣ ಮತ್ತು ಇಲವಾಲ ಬಸ್ ನಿಲ್ದಾಣಗಳನ್ನು 130 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾಗಿದ್ದು, ಅವುಗಳಲ್ಲಿ ಗ್ರಾಮಾಂತರ ಬಸ್ ನಿಲ್ದಾಣ ಮತ್ತು ಸಿಟಿ ಬಸ್ ನಿಲ್ದಾಣ ಮಾತ್ರ ಬಳಕೆಯಲ್ಲಿದ್ದು, ಉಳಿದ ಯಾವುದೇ ಬಸ್ ನಿಲ್ದಾಣಗಳು ಉಪಯೋಗಕ್ಕೇ ಬಾರದೇ ನೂರಾರು ಕೋಟಿ ರೂ. ನಷ್ಟವಾಗಿದೆ ಎಂದು ಹೇಳಿದ್ದಾರೆ.

ತುಂಬಾ ದೂರ: ಮೈಸೂರಿನ ಹೊರಭಾಗದಲ್ಲಿ ಬಸ್ ನಿಲ್ದಾಣ ನಿರ್ಮಿಸಿದರೆ ಒಂದು ಕಡೆಯಿಂದ ಮತ್ತೊಂದು ಕಡೆಗೆ ಹೋಗಲು 10 ರಿಂದ 15 ಕಿ.ಮೀ. ದೂರವಾಗುತ್ತದೆ. ನರಸೀಪುರ ರಸ್ತೆ, ನಂಜನಗೂಡು ರಸ್ತೆ, ಹೆಚ್.ಡಿ.ಕೋಟೆ ರಸ್ತೆ, ಬೋಗಾದಿ ರಸ್ತೆ, ಮಾನಂದವಾಡಿ ರಸ್ತೆ, ಹುಣಸೂರು ರಸ್ತೆಗಳಿಗೆ ಹೊಂದಿಕೊಂಡಂತೆ ಅತೀ ಹೆಚ್ಚು ಬಡಾವಣೆಗಳಿದ್ದು, ಇಲ್ಲಿನ ನಿವಾಸಿಗಳಿಗೆ ಬನ್ನಿಮಂಟಪ ಬಹಳ ದೂರವಾಗುತ್ತದೆ. ಅಲ್ಲದೇ ದಸರಾ ಸಂದರ್ಭದಲ್ಲಿ ಹೆಚ್ಚು ತೊಂದರೆಯಾಗುತ್ತದೆ ಎಂದು ಮನವಿಯಲ್ಲಿ ತಿಳಿಸಲಾಗಿದೆ.

ಬನ್ನಿಮಂಟಪದಲ್ಲಿ ಹೊಸದಾಗಿ ಬಸ್ ನಿಲ್ದಾಣ ನಿರ್ಮಿಸುವ ಬದಲು ಸರ್ಕಾರಿ ಅತಿಥಿ ಗೃಹದ ಪಕ್ಕದಲ್ಲಿ ನಿರುಪಯುಕ್ತವಾಗಿ ಬಿ.ಎನ್.ರಸ್ತೆ ಕಡೆಗಿರುವ 5 ಎಕರೆ ತೆಗೆದುಕೊಂಡು ಈಗಿರುವ ಬಸ್ ನಿಲ್ದಾಣದ ಪಕ್ಕದಲ್ಲೇ ನಿಲ್ದಾಣವನ್ನು ವಿಸ್ತರಿಸಬಹುದಾಗಿದೆ. ಬಸ್ ನಿಲ್ದಾಣದ ಪೂರ್ವ ಭಾಗದಲ್ಲಿ 50 ಸಾವಿರ ಅಡಿಗಳಷ್ಟು ಜಾಗದಲ್ಲಿ ತಾತ್ಕಾಲಿಕ ವಾಣಿಜ್ಯ ಮಳಿಗೆಗಳನ್ನು ನಿರ್ಮಿಸಿದ್ದು, ಅವುಗಳನ್ನು ತೆರವುಗೊಳಿಸಿದರೆ ಬಸ್ ನಿಲ್ದಾಣಕ್ಕೆ ಹೆಚ್ಚಿನ ಜಾಗ ಸಿಗುತ್ತದೆ.

ಅಲ್ಲದೇ ಪೂರ್ವ ದಿಕ್ಕಿಗೆ ಇರುವ ಎರಡು ತಂಗುದಾಣಗಳನ್ನು ತೆರವುಗೊಳಿಸಬಹುದು ಎಂದು ಸಲಹೆ ನೀಡಿರುವ ಸಮಿತಿ, ಮೈಸೂರಿನಲ್ಲಿ ವಾರದ ಕೊನೆ ಮತ್ತು ಸತತ ರಜಾ ದಿನಗಳು, ದಸರಾ ಸಂದರ್ಭದಲ್ಲಿ 15 ದಿನ, ಕ್ರಿಸ್‌ಮಸ್ ಸಂದರ್ಭದಲ್ಲಿ 10 ದಿನ ಮಾತ್ರ ಜನಸಂದಣಿ ಹೆಚ್ಚಾಗಿ ಇರುತ್ತದೆ. ಅದಕ್ಕಾಗಿ ಹೊಸ ಬಸ್ ನಿಲ್ದಾಣ ನಿರ್ಮಿಸುವುದು ದುಂದು ವೆಚ್ಚವಾಗುತ್ತದೆ. ಶ್ರೀರಂಗಪಟ್ಟಣ, ಬನ್ನೂರು, ಮಳವಳ್ಳಿ, ತಿ.ನರಸೀಪುರ, ನಂಜನಗೂಡು, ಹೆಚ್.ಡಿ.ಕೋಟೆ ಮಾರ್ಗಗಳಲ್ಲಿ ಸಂಚರಿಸುವ ಬಸ್‌ಗಳನ್ನು ನಾಯ್ಡುನಗರ, ಕುವೆಂಪನಗರ, ಸಾತಗಳ್ಳಿ ಬಸ್ ನಿಲ್ದಾಣಗಳಿಂದ ಓಡಿಸಿದರೆ ಗ್ರಾಮಾಂತರ ಬಸ್ ನಿಲ್ದಾಣದ ಒತ್ತಡ ಕಡಿಮೆ ಆಗುತ್ತದೆ ಎಂದು ಮನವಿಯಲ್ಲಿ ತಿಳಿಸಲಾಗಿದೆ. ಅಲ್ಲದೇ ಬನ್ನಿಮಂಟಪದಲ್ಲಿ ಬಸ್ ನಿಲ್ದಾಣ ನಿರ್ಮಿಸಲು ಅಂದಾಜು ಮಾಡಿರುವ 120 ಕೋಟಿಗಳ ಪೈಕಿ ಕೇವಲ 50 ಕೋಟಿ ಮಾತ್ರ ವೆಚ್ಚ ಮಾಡಿದರೆ ಈಗಿರುವ ಗ್ರಾಮಾಂತರ ಬಸ್ ನಿಲ್ದಾಣದ ಸುತ್ತಮುತ್ತಲ ಜಾಗಗಳಲ್ಲಿ ಬಸ್ ನಿಲ್ದಾಣ ವಿಸ್ತರಣೆ ಕಾರ್ಯ ಕೈಗೊಂಡರೆ ಸರ್ಕಾರಕ್ಕೂ ಆರ್ಥಿಕ ಹೊರೆ ಕಡಿಮೆಯಾಗುತ್ತದೆ ಎಂದಿರುವ ಸಮಿತಿಯು ಬಸ್ ನಿಲ್ದಾಣ ನಿರ್ಮಾಣಕ್ಕಾಗಿ ಕರೆದಿರುವ ಟೆಂಡರ್ ಅನ್ನು ಕೂಡಲೇ ರದ್ದುಪಡಿಸಿ ಹೊಸ ಡಿಪಿಆರ್ ಸಿದ್ಧಪಡಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶಿಸಬೇಕೆಂದು ಮುಖ್ಯಮಂತ್ರಿಗಳಿಗೆ ಮನವಿ ಮಾಡಿದೆ.

ಸಮಿತಿ ಅಧ್ಯಕ್ಷ ರವಿಶಾಸ್ತ್ರಿ, ಉಪಾಧ್ಯಕ್ಷ ಕೆ.ಎಸ್.ಅರುಣ್, ಕಾರ್ಯದರ್ಶಿ ಮಹೇಶ್ ಕಾಮತ್, ಜಂಟಿ ಕಾರ್ಯದರ್ಶಿ ಕೆ.ಆರ್. ರತೀಶ್, ಖಜಾಂಚಿ ಆರ್.ಸುಬ್ರಮಣ್ಯ ತಂತ್ರಿ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿದ ನಿಯೋಗದಲ್ಲಿದ್ದರು.

ದೇಶ - ವಿದೇಶ

ಜನ್ಮಸಿದ್ಧ ಪೌರತ್ವವನ್ನು ಮರು ವ್ಯಾಖ್ಯಾನಿಸುವ ಟ್ರಂಪ್ ಆದೇಶಕ್ಕೆ ಫೆಡರಲ್ ನ್ಯಾಯಾಧೀಶ ತಡೆ

ಸಿಯಾಟಲ್: ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಜನ್ಮಸಿದ್ಧ ಪೌರತ್ವವನ್ನು ಮರು ವ್ಯಾಖ್ಯಾನಿಸುವ ಕಾರ್ಯನಿರ್ವಾಹಕ ಆದೇಶವನ್ನು ಫೆಡರಲ್ ನ್ಯಾಯಾಧೀಶರು ತಾತ್ಕಾಲಿಕವಾಗಿ ತಡೆಹಿಡಿದಿದ್ದಾರೆ. ಆದೇಶವನ್ನು ಪ್ರಶ್ನಿಸುವ ಬಹು-ರಾಜ್ಯ ಪ್ರಯತ್ನದ ಮೊದಲ ವಿಚಾರಣೆಯ ಸಮಯದಲ್ಲಿ ಅದನ್ನು 'ಇದು ಖಂಡಿತವಾಗಿ ಅಸಂವಿಧಾನಿಕ' ಎಂದು ಕರೆದಿದ್ದಾರೆ.



ಈ ಪ್ರಕರಣವು 22 ರಾಜ್ಯಗಳು ಮತ್ತು ದೇಶಾದ್ಯಂತ ಹಲವಾರು ವಲಸಿಗರ ಹಕ್ಕುಗಳ ಗುಂಪುಗಳು ಹೂಡಿರುವ ಐದು ಮೊಕದ್ದಮೆಗಳಲ್ಲಿ ಒಂದಾಗಿದೆ. ಈ ಮೊಕದ್ದಮೆಗಳಲ್ಲಿ ಜನ್ಮಸಿದ್ಧ ಹಕ್ಕುಗಳಿಂದ ಯುಎಸ್ ನಾಗರಿಕರಾಗಿರುವ ಅಟಾರ್ನಿ ಜನರಲ್‌ಗಳ ವೈಯಕ್ತಿಕ ಸಾಕ್ಷ್ಯಗಳು ಸೇರಿವೆ. ಇದು ಸ್ಪಷ್ಟವಾಗಿ ಸಂವಿಧಾನ ಬಾಹಿರ ಆದೇಶ ಎಂದು ಕಫನೌರ್ ಖುಮಾಟೆಗೆ ತಿಳಿಸಿದರು. ಡೊನಾಲ್ಡ್ ಟ್ರಂಪ್ ಅವರು ಜನವರಿ 20ರಂದು ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ದಿನ ಸಹಿ ಮಾಡಿದ ಕಾರ್ಯನಿರ್ವಾಹಕ ಆದೇಶವು ಫೆಬ್ರವರಿ 19 ರಂದು ಜಾರಿಗೆ ಬರಲಿದೆ. ದೇಶದಲ್ಲಿ ಜನಿಸಿದ ಲಕ್ಷಾಂತರ ಜನರ ಮೇಲೆ ಇದು ಪರಿಣಾಮ ಬೀರಬಹುದು.

ಆರ್‌ಡಿಎಕ್ ಉತ್ಪಾದನೆಗೆ ಬಳಸುವ ಶಸ್ತ್ರಾಸ್ತ್ರ ತಯಾರಿಕಾ ಘಟಕದಲ್ಲಿ ಭಾರೀ ಸ್ಫೋಟ; 8 ಮಂದಿ ಸಾವು

ಮುಂಬೈ: ಶಸ್ತ್ರಾಸ್ತ್ರ ತಯಾರಿಕಾ ಘಟಕದಲ್ಲಿ ಭಾರೀ ಪ್ರಮಾಣದ ಸ್ಫೋಟ ಸಂಭವಿಸಿ ಎಂಟು ಮಂದಿ ಸ್ಥಳದಲ್ಲೇ ಸಾವನ್ನಪ್ಪಿರುವ ಆಘಾತಕಾರಿ ಘಟನೆ ಮಹಾರಾಷ್ಟ್ರದಲ್ಲಿ ಸಂಭವಿಸಿದೆ.

ಮಹಾರಾಷ್ಟ್ರದ ಜವಾಹರನಗರದಲ್ಲಿರುವ ಆರ್‌ಡಿಎಕ್ಸ್ ಉತ್ಪಾದನೆಗೆ ಬಳಸುವ ಕಚ್ಚಾ ವಸ್ತುಗಳನ್ನು ಸಂಸ್ಕರಿಸುವ ಕಾರ್ಖಾನೆಯ ವಿಭಾಗದಲ್ಲಿ ಈ ಸ್ಫೋಟ ನಡೆದಿದೆ ಎಂದು ಪ್ರಾಥಮಿಕ ವರದಿಗಳ ಮೂಲಕ ತಿಳಿದು ಬಂದಿದೆ. ಈ ಘಟನೆಯಲ್ಲಿ ಎಂಟು ಮಂದಿ ಸಾವನ್ನಪ್ಪಿದ್ದಾರೆ ಎಂದು ರಾಜ್ಯ ವಿಧಾನಸಭೆಯ ವಿರೋಧ ಪಕ್ಷದ ನಾಯಕ ವಿಜಯ್ ವಡೆತ್ತಿವಾರ್ ಖಚಿತಪಡಿಸಿದ್ದಾರೆ.

ಸಿ ವಿಭಾಗದ ಕಟ್ಟಡ ಸಂಖ್ಯೆ 23ರಲ್ಲಿ ನಿನ್ನೆ ರಾತ್ರಿ 11 ಗಂಟೆ ಸುಮಾರಿಗೆ ಸ್ಫೋಟ ಸಂಭವಿಸಿದೆ ಎಂದು ಹೇಳಲಾಗುತ್ತಿದ್ದು, ತಡವಾಗಿ ಮಾಹಿತಿ ಲಭಿಸಿದೆ. ಘಟನೆ ನಡೆದ ಬಳಿಕ ಪೊಲೀಸರು ಹಾಗೂ ಅಗ್ನಿಶಾಮಕ ದಳ ಸ್ಥಳಕ್ಕೆ ತಲುಪಲು ಸಾಕಷ್ಟು ಸಮಯ ಹಿಡಿದಿದೆ ಎನ್ನಲಾಗಿದೆ.

ಸಾವಿನ ಸಂಖ್ಯೆ ಹೆಚ್ಚಾಗಬಹುದು ಎಂದು ಮೂಲಗಳು ತಿಳಿಸಿದ್ದು, ಸ್ಫೋಟ ಸಂಭವಿಸಿದ ಕಟ್ಟಡವು ಸಂಪೂರ್ಣವಾಗಿ ನೆಲಸಮವಾಗಿದೆ ಎಂದು ವರದಿಗಳು ಹೇಳಿವೆ.

ಪರಿಹಾರ ಸಾಮಗ್ರಿ ಹೊತ್ತ 1,000 ಟ್ರಕ್ ಗಾಜಾ ಪ್ರವೇಶ

ಗಾಜಾ: ಇಸ್ರೇಲ್ ಮತ್ತು ಹಮಾಸ್ ಮಧ್ಯೆ ಕದನ ವಿರಾಮ ಜಾರಿಯಾದ ನಂತರ ಈಗ ವಿಶ್ವಸಂಸ್ಥೆ ಮತ್ತು ಅದರ ಸಹವರ್ತಿ ಸಂಘಟನೆಗಳ ಕಾರ್ಯಕರ್ತರು ಗಾಜಾ ಜನರಿಗೆ ಅಗತ್ಯ ಪರಿಹಾರ ಸಾಮಗ್ರಿಗಳನ್ನು ತಲುಪಿಸಲು ಯುದ್ಧೋಪಾದಿಯಲ್ಲಿ ಪ್ರಯತ್ನಿಸುತ್ತಿದ್ದಾರೆ. ಇದಲ್ಲದೆ ಮನೆ ಮಠ ಕಳೆದುಕೊಂಡ ನಿರಾಶ್ರಿತರಾಗಿರುವ ಗಾಜಾ ಜನತೆಗಾಗಿರುವ ಹಾನಿಯ ಬಗ್ಗೆಯೂ ಕಾರ್ಯಕರ್ತರು ಲೆಕ್ಕ ಹಾಕುತ್ತಿದ್ದಾರೆ.

ಗಾಜಾ ಪಟ್ಟಿಯಾದ್ಯಂತದ ಜನರಿಗೆ ನೀಡಲಾಗುತ್ತಿರುವ ಪರಿಹಾರ ಸಾಮಗ್ರಿಗಳ ಪ್ರಮಾಣವನ್ನು ಹೆಚ್ಚಿಸುತ್ತಿದ್ದೇವೆ. ಸರಕು ಶೇಖರಣಾ ಸಾಮರ್ಥ್ಯಗಳನ್ನು ಕೂಡ ಹೆಚ್ಚಿಸಲಾಗುತ್ತಿದ್ದು, ಅಗತ್ಯ ದುರಸ್ತಿ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ. ಆರೋಗ್ಯ ಸೇವೆಗಳನ್ನು ಸಹ ಸುಧಾರಿಸಲಾಗುತ್ತಿದೆ ಎಂದು ವಿಶ್ವಸಂಸ್ಥೆಯ ಮಾನವೀಯ ವ್ಯವಹಾರಗಳ ಸಮನ್ವಯ ಕಚೇರಿ (ಒಸಿಎಚ್‌ಎ) ತಿಳಿಸಿದೆ. ವಿಶ್ವಸಂಸ್ಥೆಯ ಕಾರ್ಯಕರ್ತರು ಆಹಾರದ ಪಾರ್ಸೆಲ್‌ಗಳು ಮತ್ತು ಹಿಟ್ಟನ್ನು ವಿತರಿಸುತ್ತಿದ್ದಾರೆ ಹಾಗೂ ಬೇಕರಿಗಳನ್ನು ಪುನಾರಂಭಿಸಲು ಕೆಲಸ ಮಾಡುತ್ತಿದ್ದಾರೆ ಎಂದು ಕ್ಸಿನ್ಹುವಾ ಸುದ್ದಿ ಸಂಸ್ಥೆ ವರದಿ ಮಾಡಿದೆ.

ಸಿಗರೇಟ್ ಕೊಡದ 65 ವರ್ಷದ ವೃದ್ಧೆ ಮೇಲೆ ಸಾಮೂಹಿಕ ಅತ್ಯಾಚಾರ

ಲಖಿಸರಾಯ್: ಬಿಹಾರದ ಲಖಿಸರಾಯ್ ಜಿಲ್ಲೆಯಲ್ಲಿ ಸಿಗರೇಟ್ ಕೊಡಲು ನಿರಾಕರಿಸಿದ್ದಕ್ಕಾಗಿ 65 ವರ್ಷದ ವೃದ್ಧೆ ಮೇಲೆ ನಾಲ್ವರು ಸಾಮೂಹಿಕ ಅತ್ಯಾಚಾರ ಎಸಗಿದ್ದಾರೆ ಎಂದು ಪೊಲೀಸರು ಶುಕ್ರವಾರ ತಿಳಿಸಿದ್ದಾರೆ.

ಇಬ್ಬರು ಆರೋಪಿಗಳನ್ನು ಬಂಧಿಸಲಾಗಿದ್ದು, ಉಳಿದವರನ್ನು ಬಂಧಿಸಲು ಶೋಧ ನಡೆಸಲಾಗುತ್ತಿದೆ ಎಂದು ಅವರು ಹೇಳಿದ್ದಾರೆ. ಬುಧವಾರ ಮತ್ತು ಗುರುವಾರ ಮಧ್ಯರಾತ್ರಿ ನವಾಬ್‌ಗಂಜ್ ಪ್ರದೇಶದ ಮಹಿಳೆಯ ಮನೆಗೆ ನಾಲ್ವರು ವ್ಯಕ್ತಿಗಳು ಸಿಗರೇಟ್ ಕೇಳಿಕೊಂಡು ಹೋದಾಗ ಈ ಘಟನೆ ನಡೆದಿದೆ. ಆಕೆ ಸಿಗರೇಟ್ ಕೊಡಲು ನಿರಾಕರಿಸಿದಾಗ, ಆಕೆಯನ್ನು ಹತ್ತಿರದ ಹೊಲಕ್ಕೆ ಎಳೆದುಕೊಂಡು ಹೋಗಿ ಅತ್ಯಾಚಾರ ಎಸಗಿದ್ದಾರೆ ಎಂದು ಎಂದು ಎಸ್‌ಪಿ ಅಜಯ್ ಕುಮಾರ್ ತಿಳಿಸಿದ್ದಾರೆ.

ಆಕೆಯ ಕುಟುಂಬ ಸದಸ್ಯರ ಹೇಳಿಕೆಯ ಆಧಾರದ ಮೇಲೆ ತಕ್ಷಣವೇ ಪ್ರಕರಣ ದಾಖಲಿಸಿಕೊಂಡು ಗುರುವಾರ ಇಬ್ಬರು ಆರೋಪಿಗಳನ್ನು ಬಂಧಿಸಲಾಗಿದೆ. ಉಳಿದ ಇಬ್ಬರಿಗಾಗಿ ಶೋಧ ನಡೆಯುತ್ತಿದೆ ಎಂದು ಅವರು ಹೇಳಿದ್ದಾರೆ. ವೃದ್ಧ ಮಹಿಳೆಯನ್ನು ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಕುಮಾರ್ ತಿಳಿಸಿದ್ದಾರೆ.

ವಕ್ಫ್ ಮಸೂದೆಯ ಜೆಪಿಸಿ ಸಭೆಯಲ್ಲಿ ಗದ್ದಲ; ಪ್ರತಿಪಕ್ಷಗಳ ಎಲ್ಲಾ ಸಂಸದರ ಅಮಾನತು

ನವದೆಹಲಿ: ವಕ್ಫ್ ತಿದ್ದುಪಡಿ ಮಸೂದೆಯ ಜಂಟಿ ಸಂಸದೀಯ ಸಮಿತಿ (ಜೆಪಿಸಿ) ಸಭೆಯಿಂದ ಪ್ರತಿಪಕ್ಷಗಳ ಎಲ್ಲಾ ಸಂಸದರನ್ನು ಶುಕ್ರವಾರ ಒಂದು ದಿನದ ಮಟ್ಟಿಗೆ ಅಮಾನತುಗೊಳಿಸಲಾಗಿದೆ. ಜೆಪಿಸಿ ಅಧ್ಯಕ್ಷ ಜಗದಾಂಬಿಕಾ ಪಾಲ್ ಅವರ ವಿರುದ್ಧ ನಿರಂತರ ಪ್ರತಿಭಟನೆ ಮತ್ತು ಗದ್ದಲದ ಹಿನ್ನೆಲೆಯಲ್ಲಿ ಪ್ರತಿಪಕ್ಷಗಳ ಎಲ್ಲಾ 10 ಸಂಸದರನ್ನು ಅಮಾನತುಗೊಳಿಸಲಾಗಿದೆ.



ಕಲ್ಯಾಣ್ ಬ್ಯಾನರ್ಜಿ, ಮೊಹಮ್ಮದ್ ಜಾವೇದ್, ಎ ರಾಜಾ, ಅಸಾದುದ್ದೀನ್ ಓವೈಸಿ, ನಾಸೀರ್ ಹುಸೇನ್, ಮೊಹಿಬುಲ್ಲಾ, ಮೊಹಮ್ಮದ್ ಅಬ್ದುಲ್ಲಾ, ಅರವಿಂದ್ ಸಾವಂತ್, ನದೀಮ್–ಉಲ್ ಹಕ್, ಇಮ್ರಾನ್ ಮಸೂದ್ ಅವರನ್ನು ಒಂದು ದಿನದ ಮಟ್ಟಿಗೆ ಅಮಾನತುಗೊಳಿಸಲಾಗಿದೆ.

ಬಿಜೆಪಿ ಸದಸ್ಯ ನಿಶಿಕಾಂತ್ ದುಬೆ ಅವರು ವಿರೋಧ ಪಕ್ಷದ ಸದಸ್ಯರನ್ನು ಅಮಾನತುಗೊಳಿಸುವ ಪ್ರಸ್ತಾವನೆಯನ್ನು ಮಂಡಿಸಿದರು ಮತ್ತು ಇದನ್ನು ಸಮಿತಿ ಅಂಗೀಕರಿಸಿತು. ಬಿಜೆಪಿ ಸದಸ್ಯ ಅಪರಾಜಿತಾ ಸಾರಂಗಿ ಅವರು ವಿರೋಧ ಪಕ್ಷದ ಸದಸ್ಯರು ಸಭೆಯಲ್ಲಿ ನಿರಂತರವಾಗಿ ಗದ್ದಲ ಸೃಷ್ಟಿಸುತ್ತಿದ್ದರು ಮತ್ತು ಪಾಲ್ ವಿರುದ್ಧ ಅಸಂಸದೀಯ ಭಾಷೆ ಬಳಸುತ್ತಿದ್ದರು ಎಂದು ಆರೋಪಿಸಿದ್ದಾರೆ.